ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 35 ಆಗಸ್ಟ್ 28, 2011 ರೂ. 5/- ಪುಟ 16





ಹಜಾರೆ ಸತ್ಯಾಗ್ರಹ ನಿರ್ಬಂಧ


ಜನರ ಪ್ರತಿಭಟನೆ : ನಿರಾಕರಿಸಲಾಗದ ಒಂದು ಹಕ್ಕು





ಚಳುವಳಿ Vs ನಿಬಂಧನೆಗಳು
ಪ್ರಜಾಪ್ರಭುತ್ವ Vs ಜಾಗತೀಕರಣ

ಸ್ವಾತಂತ್ರ್ಯೋತ್ಸವ : ಹಗರಣಗಳ ಮುಚ್ಚಿಕೊಂಡ ಮುಖ್ಯಮಂತ್ರಿ



ಜಾಗತಿಕ ಹಣಕಾಸು ಕೋಲಾಹಲ : 'ಶೋಷಣೆ-ಲಾಭ' ತರ್ಕದ ಫಲ

ರಾಯಚೂರು ಜಿಲ್ಲಾ ನಾಗರಾಳದಲ್ಲಿ ಜಾತೀಯವಾದಿ ಪಾಳೆಗಾರಿ ಶಕ್ತಿಗಳ ದಾಳಿಗೆ ಗುರಿಯಾಗಿದ್ದ ಆ ಮಹಿಳೆ ಮನಸ್ಸಿಗೆ ಆಗ ಬಂದದ್ದು ಆತ್ಮಹತ್ಯೆಯ ಆಲೋಚನೆ. (ಆ ಘಟನಾವಳಿಗಳ ಬಗೆಗೆ ಪತ್ರಿಕೆಯಲ್ಲಿ ಈಗಾಗಲೇ ಓದಿದ್ದೀರಿ) ಈಗ ಅದೇ ಮಹಿಳೆ ಇತರ ಹತ್ತಾರು, ನೂರಾರು ಮಹಿಳೆಯರಿಗೆ ಆತ್ಮವಿಶ್ವಾಸ ತುಂಬುವ ಧೈರ್ಯವಂತೆ. ಈ ಬದಲಾವಣೆ ಬಂದದ್ದರ ಹಿಂದಿನ ಮ್ಯಾಜಿಕ್ ಏನು? ಓದಿ....

ಸರ್ ಅಂತಿದ್ದಾ ಶಾಂತಾಬಾಯಿ 'ಕಾಮ್ರೇಡ್' ಅಂದಿದ್ದೂ

ಮಲ್ಲಯ್ಯ ಜಾಲಹಳ್ಳಿ

ನಾಗರಾಳದಲ್ಲಿ ಶಾಂತಬಾಯಿಯ ಮೇಲೆ ಹಲ್ಲೆಯಾದ ನಂತರ ಇಡೀಗ್ರಾಮ ಮೌನಕ್ಕೆ ಶರಣಾಗಿತ್ತು. ಗ್ರಾಮ ಭೀತಿಯ ಛಾಯೆಯಲ್ಲಿ ನಿರಾಳವಾಗಿ ಉಸಿರಾಡಿಸದೆ ಉಸಿರು ಬಿಗಿ ಹಿಡಿದು ಬದುಕುತ್ತಿರುವ ಹಾಗೆ ಕಾಣುತ್ತಿತ್ತು. ಎಲ್ಲೆಲ್ಲೂ ಪಿಸುಮಾತುಗಳೆ. ಚೋಟುದ್ದ ಹುಡುಗಿ ದೊಡ್ಡವರನ್ನ ಎದುರು ಹಾಕಿಕೊಂಡಾಳ ಆಕಿ ಬಾಳ್ವೆ ಮುಗಿತು ಅಂತ ಕೆಲವರು ಆಡಿಕೊಂಡರೆ ಏನೆ ಆಗಲಿ ಶಾಂತಬಾಯಿ ಗಟ್ಟಿಗಿತ್ತಿ. ಧೈರ್ಯ ಅಂದರೆ ಅಕೀದಾ ನೋಡಾ ಅಂತೆಲ್ಲಾ ರೀತಿಯಲ್ಲಿ ಜನರು ಅಭಿಪ್ರಾಯ ಪಡುತ್ತಿರುವುದು ವ್ಯಾಪಕವಾಗಿದೆ.

ಎರಡು ಸಂಘಟನೆಗಳ ಮುಖಂಡರು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ದೂರುಸಲ್ಲಿಸಿದ್ದಕ್ಕೆ ಪರಿಹಾರ ಸಿಕ್ಕಲಿಲ್ಲವಾದರಿಂದ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಮುಂದೆ ಧರಣಿ ಸತ್ಯಾಗ್ರಹ ಮಾಡಲು ನಿರ್ಧರಿಸಲಾಯಿತು. ದೇವದಾಸಿ ಮಹಿಳಾ ಸಂಘಟನೆಯ ನಾಯಕತ್ವದಲ್ಲಿ ಇತರ ಸಂಘಟನೆಗಳ ಬೆಂಬಲದೊಂದಿಗೆ 13-06-2011 ರಂದು ಧರಣಿ ಸತ್ಯಾಗ್ರಹನಡೆಯಿತು. ಅಂದು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ದೇವದಾಸಿ ಮಹಿಳಾ ವಿಮೋಚನಾ ಸಂಘದ ಮುಖಂಡರು ಮತ್ತು ಕಾರ್ಯಕರ್ತರು ಅಷ್ಟೆ ಅಲ್ಲದೆ ಸ್ವತಃ ನಾಗರಾಳದಿಂದ 25 ರಿಂದ 30 ಜನ ಬಂದು ಭಾಗವಹಿಸಿದ್ದು ವಿಶೇಷವಾಗಿತ್ತು. 13 ರ ಹೋರಾಟ ನಡೆಯುವವರೆಗೆ ಅಲ್ಲಿ ಪತ್ರಿಕೆಗಳು ಚಕಾರವೆತ್ತಿರಲಿಲ್ಲ. ವರದಿ ಕೊಟ್ಟರೂ ಹಾಕಿರಲಿಲ್ಲ. ವೆಂಕಟೇಶಪ್ಪ ಗುತ್ತೇದಾರರ ಪ್ರಭಾವ ಕೆಲಸ ಮಾಡಿತ್ತು. ಆದರೆ ರಾಯಚೂರಲ್ಲಿ ಧರಣಿ ನಡೆದಾಕ್ಷಣ ಪತ್ರಿಕಾ ಮಾಧ್ಯಮಗಳಲ್ಲಿ ಮತ್ತು ಟಿ.ವಿ. ಮಾಧ್ಯಮದಲ್ಲಿ ಸರಿಯಾಗಿ ಪ್ರಚಾರ ಸಿಕ್ಕಿತು. ಅಲ್ಲಿಯವರೆಗೆ ದೂರದಿಂದ ನೋಡುವವರಿಗೆ ಇದೊಂದು ಕುಟುಂಬ ಜಗಳ ಎಂಬಂತೆ ಕಂಡಿತ್ತು. ಆದರೆ 13ರ ಹೋರಾಟ ಪಾಳೇಗಾರ ವೆಂಕಟೇಶಪ್ಪನ ವಿರುದ್ಧದ ಹೋರಾಟ ಎಂಬುದನ್ನು ಸ್ಪಟಿಕದಷ್ಟು ಸ್ಪಷ್ಟಪಡಿಸಿದವು. ಈ ಹೋರಾಟ ನಮಗೇಕೆ ಬೇಕು ಇನ್ನೊಬ್ಬರ ಜಗಳ ಎಂದು ಕೊಂಡವರಿಗೆ ದೌರ್ಜನ್ಯಕ್ಕೆ ಒಳಗಾದವರ ಪರ ನಿಲ್ಲದಿದ್ದರೆ ನಾವು ಮನುಷ್ಯರೆ ಎಂದು ಕೇಳಿಕೊಳ್ಳುವಂತಾತ್ತು.

ಮನವಿ ಸ್ವಿಕರಿಸಿದ ಜಿಲ್ಲಾಧಿಕಾರಿಗಳು ಶಾಂತಾಬಾಯಿಗೆ ನ್ಯಾಯ ಸಿಕ್ಕುವಂತೆ ನೋಡಿಕೊಳ್ಳುವುದಾಗಿ ಭರವಸೆ ಇತ್ತರು. ಈ ಎಲ್ಲಾ ವಿಷಯಗಳು ಮಾಧ್ಯಮದಲ್ಲಿ ಬಂದ ತಕ್ಷಣ ತಾಲ್ಲೂಕುಗಳ ಮತ್ತು ಜಿಲ್ಲೆದ ಹಲವಾರು ದಲಿತ ಸಂಘಟನೆಗಳು ಬೆಂಬಲಿಸಿ ಹೇಳಿಕೆ ಕೊಟ್ಟವು. ಶಾಂತಾಬಾಯಿ ಗ್ರಾಮದಲ್ಲಿ ಧೈರ್ಯದಿಂದ ನಡೆದಾಡುವಂಥ ಸ್ಥಿತಿ ನಿರ್ಮಾಣವಾಯ್ತು.



ನೊಂದ ಶಾಂತಾಬಾಯಿ ಮನೆಗೆ ಭೇಟಿ... ಕೆ.ನೀಲಾ, ಮೀನಾಕ್ಷಿ ಬಾಳಿ....

ಇದೆಲ್ಲಾ ಗಮನಿಸಿದ ಗುತ್ತೇದಾರ ಮತ್ತು ಅವರ ಬಂಧುಗಳು ತಮ್ಮ ಮಾನ ಜಿಲ್ಲಾದ್ಯಂತ ಹರಾಜುಹಾಕಿದ ಶಾಂತಬಾಯಿಯನ್ನು ನಡುಬೀದಿಯಲ್ಲಿ ಸೀಮೆಎಣ್ಣೆ ಹಾಕಿ ಸುಟ್ಟು ಬಿಡುವುದಾಗಿ ಸಾರ್ವಜನಿಕ ಸ್ಥಳಗಳಲ್ಲಿ ಕೂಗಾಡಿದರು. ಶಾಂತಬಾಯಿಯ ಆರೋಪಿತ ದಾಂಯಾದಿಗಳು ಕುಡಿದು ಬಂದು ಶಾಂತಬಾಯಿಯ ಮನೆ ಮುಂದೆ ಕೂಗಾಡಿದರು. ಈ ಎಲ್ಲಾ ಗಲಾಟೆಗಳಿಂದ ಅಂಜಿದ ಬಾಡಿಗೆಗೆ ಮನೆ ಕೊಟ್ಟ ಮಾಲಿಕರು ಮನೆ ಬಿಡುವಂತೆ ಶಾಂತಬಾಯಿಗೆ ಕಿರುಕುಳ ಇಟ್ಟರು. ಈ ಎಲ್ಲಾ ರಾದ್ಧಾಂತಗಳು ಮತ್ತೆ ಭೀತಿಯ ವಾತಾವರಣ ಸೃಷ್ಟಿಸಿದವು. ಗುತ್ತೇದಾರ ಬಂದುಗಳು ಎಲ್ಲಿ ಯಾವಾಗ ಬೇಕಾದರೂ ಶಾಂತಬಾಯಿಯನ್ನ ಸುಟ್ಟು ಹಾಕಬಹುದೆಂದು ಜನ ಆಡಿಕೊಳ್ಳ ತೊಡಗಿದರು.

ಈ ಎಲ್ಲಾ ಅಂಶಗಳ ಬಗ್ಗೆ ಪುನಃ ಚರ್ಚಿಸಿದ ಸಂಘ ಪುನಃ ಜಿಲ್ಲಾಧಿಕಾರಿಗಳಲ್ಲಿಗೆ ನಿಯೋಗ ಹೋಗಲು ತೀರ್ಮಾನಿಸಿತು. ಈ ಸಾರಿ ಎಲ್ಲವನ್ನು ಕೇಳಿ ಚರ್ಚಿಸಿದೆ. ನೇರವಾಗಿ ಲಿಂಗಸೂಗುರು DYSP ಆಂಜನೇಯ್ಯರವರಿಗೆ "ನೀವೇ ತನಿಖಾಧಿಕಾರಿಯಾಗಿ ಕೆಲಸ ಮಾಡಿ, ಶಾಂತಬಾಯಿ ಬರೆದುಕೊಟ್ಟದ್ದನ್ನು ಯಥಾವತ್ತಾಗಿ ಪಡೆದು ಎರಡನೆ ಎಫ್.ಐ.ಆರ್. ದಾಖಲಿಸಿ" ಎಂದು ಆದೇಶಿಸಿದರು. ಜೂನ್-23-2011 ರಂದು 2ನೇ ಎಫ್.ಐ.ಆರ್. ದಾಖಲಾಯ್ತು. 24ರಂದು ಡಿ.ವೈ.ಎಸ್.ಪಿ. ಊರಿಗೆ ಬಂದು ತನಿಖೆ ಆರಂಭಿಸಿದಾಗ ಈ ಸಲ ಕೆಲವರಾದರೂ ಮುಂದೆ ಬಂದು ದೌರ್ಜನ್ಯ ನಡೆದದ್ದು ನಿಜ ಎಂದು ನುಡಿದರು. ಇವೆಲ್ಲದರ ಪರಿಣಾಮವಾಗಿ ವೆಂಕಟೇಶಪ್ಪ ಗುತ್ತೇದಾರ ಈ ಹಿಂದೆ ಶಾಂತಾಬಾಯಿ ಮನೆ ಅಂಗಳದಲ್ಲಿ ಕುರ್ಚಿ ಹಾಕಿಕೊಂಡು ಕೂತು ದರ್ಬಾರು ನಡೆಸುತಿದ್ದನ್ನು ನಿಲ್ಲಿಸಿದ್ದಾನೆ. ಆಕೆಯ ಮನೆಯ ಅಂಗಳದಲ್ಲಿ ತಮ್ಮ ಯಾವ ವಾಹನಗಳು ನಿಲ್ಲಿಸದಂತೆ ಎಚ್ಚರವಹಿಸಿದ್ದಾನೆ. ಶಾಂತಬಾಯಿಯನ್ನು ಸುಟ್ಟು ಹಾಕುವ ಧಮಕಿಗಳು ಬಂದ್ ಆಗಿವೆ.

ಶಾಂತಬಾಯಿಯ ಬಾಡಿಗೆ ಮನೆ ಮುಂದೆ ಸಂಜೆ ಬೀಳುತ್ತಿದ್ದ ಕೇಕೆಗಳು ನಿಂತಿವೆ. ನಾಗರಾಳ ಜನತೆ ಇವನ್ನೆಲ್ಲಾ ಅಚ್ಚರಿಯಿಂದ ನೋಡುತ್ತಿದ್ದಾರೆ. ಶಾಂತಾಬಾಯಿ ಈಗ ರಸ್ತೆಯಲ್ಲಿ ಹೋಗುತ್ತಿದ್ದರೆ ಜನ ಈ ಚೋಟುದ್ದದ ಹುಡುಗಿ ದೊಡ್ಡವರ್ನ ಎದುರು ಹಾಕ್ಕೊಂಡು ಗೆದ್ಲು. ಇಂಥಾದ್ದು ಈ ಊರಾಗ ಹಿಂದೆ ಎಂದೂ ನಡೆದಿರಲಿಲ್ಲ. 'ಏನೇ ಆಗಲಿ, ಗಟ್ಟಿಗಿತ್ತಿ' ಎಂದೆಲ್ಲಾ ಆಡಿಕೊಳ್ಳುತ್ತಿದ್ದಾರೆ. ಆಕೆಂಯೆಡೆ ಬಡವರು, ಅಸಹಾಯಕರು ಖುಷಿಯಿಂದ, ಹೆಮ್ಮೆಯಿಂದ ನೋಡುತ್ತಿರುತ್ತಾರೆ.

ಜೂನ್-30ರಂದು ತಾಲೂಕು ಪಂಚಾಯತ್ ಕಛೇರಿ ಮುಂದೆ ಸಿಕ್ಕ ಶಾಂತಾಬಾಯಿ "ಕಾಮ್ರೇಡ್ ನಾನು ಒಂದು ದಿನಾನೂ ವ್ಯರ್ಥ ಮಾಡಿಲ್ಲಾರಿ. 8 ಹಳ್ಳಿಗಳಿಗೆ ಹೋಗಿ ದೇವದಾಸಿಯರ ಸಭೆ ಮಾಡಿ ಸದಸ್ಯತ್ವ ಮಾಡಿಸೀನಿ. ಮುಂದೆ ಒಂದು ವಾರ ಯಾವ ಯಾವ ದಿನ ಯಾವ ಯಾವ ಊರಾಗ ಸಭಾ ಮತ್ತು ಸದಸ್ಯತ್ವ ಅಂತ ದಿನಾಂಕ ನಿಗದಿ ಮಾಡಿ ಕೊಟ್ಟೀನಿ. ಹಲ್ಕಾವಟಗಿಯಲ್ಲಿ ಉದ್ಯೋಗ ಖಾತ್ರಿ ಗುಂಪು ಮಾಡೀನಿ. ಫಾರಂ -6 ಪಂಚಾಯತಿಗೆ ಕೊಟ್ಟೀನಿ. ಪಿ.ಡಿ.ಓ. ನಖರಾ ಭಾಳ ಮಾಡ್ತಾನ. ನೀವು ಒಂದ್ಸಲ ಬರಬೇಕರಿ." ಹೀಗೆ ಹರಳು ಹುರಿದಂತೆ ಪುಟಿವ ಜೀವನೋತ್ಸಾಹದಲ್ಲಿ ಆಕೆ ಹೇಳುತಿದ್ದರೆ ಮೇ-17 ನ್ಯಾಯಲಯದ ಮುಂದೆ "ಸರ್ ನನ್ನ ಮೇಲೆ ದೌರ್ಜನ್ಯ ಮಾಡಿದ ಎಲ್ಲರ ಹೆಸರು ಬರದಿಟ್ಟು ಆತ್ಮಹತ್ಯೆ ಮಾಡಿಕೊಳ್ತಿನಿ. ನೀವು ಅವರಿಗೆ ಶಿಕ್ಷಾ ಆಗೋವಂಗ ಮಾಡಬೇಕ್ರಿ" ಎಂದು ಬಿಕ್ಕಿ ಬಿಕ್ಕಿ ಅತ್ತಿದ್ದ ಶಾಂತಾಬಾಯಿ ಈಕೇನಾ ಎಂದು ನೆನಸಿಕೊಂಡಾಗ ಅಚ್ಚರಿ ಅನಿಸಿತ್ತು. ಒಂದೂವರೆ ತಿಂಗಳ ಕೆಳಗೆ ನಾನು ಆಕೆ ಪಾಲಿಗೆ-ಸರ್ ಆಗಿದ್ದೆ. ಈ ಸಾರಿ ಆಕೆ ನನ್ನ ಕಾಮ್ರೇಡ್ ಅಂದಳು. ಅದು ನನಗೆ ಎಲ್ಲಕ್ಕಿಂತ ಹೆಚ್ಚು ಖುಷಿ ಕೊಟ್ಟ ಮಾತಾಗಿತ್ತು. ಈ ಹೋರಾಟ ಇದೆಯಲ್ಲಾ. ಇದು ಎಂಥವರನ್ನು ಬದಲಿಸಬಲ್ಲದು.

ಸ್ವಾತಂತ್ರ್ಯೋತ್ಸವ ವಿಶೇಷ ಸಂಚಿಕೆ

ಚಂದಾ, ಜಾಹೀರಾತು ಸಂಗ್ರಹಕ್ಕೆ ಮನವಿ

ಆತ್ಮೀಯರೇ,

ಜನಶಕ್ತಿ ಪ್ರಸಾರಾಂದೋಲನ ಯಶಸ್ವಿಯಾಗಿ ನಡೆಯುತ್ತಿದೆ. ಉತ್ತಮ ಪ್ರತಿಕ್ರಿಯೆಗಳು ದೊರೆತಿವೆ. ಅದೇ ಹೊತ್ತಿನಲ್ಲಿ ಇನ್ನೂ ಚಂದಾ ನೋಂದಾಯಿಸಬಹುದಾದ ವಿಪುಲ ಅವಕಾಶಗಳಿವೆ. ಪತ್ರಿಕೆಯನ್ನು ತಲುಪಬೇಕಾದ ಓದುಗರು ಅಸಂಖ್ಯಾತರಿದ್ದಾರೆ. ಆದ್ದರಿಂದ ಇನ್ನಷ್ಟು ಹೆಚ್ಚಿನ ಗಮನ ನೀಡಿ ಗುರಿ ತಲುಪಬೇಕಿದೆ.

ಹಾಗೆಯೇ ಸ್ವಾತಂತ್ರ್ಯೋತ್ಸವದ ವಿಶೇಷ ಸಂಚಿಕೆಯನ್ನು ಹೊರತರಲು ಪೂರ್ವ ಸಿದ್ಧತೆಗಳು ಆರಂಭಗೊಂಡಿವೆ. ಸಂಚಿಕೆ ಸೆಪ್ಟೆಂಬರ್ ಎರಡನೇಯ ವಾರದಲ್ಲಿ ಎಲ್ಲಾ ನಮ್ಮ ಓದುಗರ ಕೈ ಸೇರಲಿದೆ. ಆದ್ದರಿಂದ ಇನ್ನೂ ಹೆಚ್ಚಿನ ಜಾಹೀರಾತುಗಳನ್ನು ಸಂಗ್ರಹಿಸಿ ಪತ್ರಿಕೆಯ ಬೆಳವಣಿಗೆಗೆ ಕೈ ಜೋಡಿಸಬೇಕಾಗಿ ವಿನಂತಿಸುತ್ತೇವೆ. ಜಾಹೀರಾತುಗಳ ಅಗಸ್ಟ್ 30ರೊಳಗೆ ನಮ್ಮ ಕೈ ತಲುಪಬೇಕು. ಈ ದಿಶೆಯಲ್ಲಿ ಗಮನ ಹರಿಸುವಿರಾಗಿ ಆಶಿಸುತ್ತೇನೆ.

– ಸಂ

ಸಂಪಾದಕೀಯ

ಸ್ವಾತಂತ್ರ್ಯೋತ್ಸವ ಭಾಷಣ

ಹಗರಣಗಳ ಮುಚ್ಚಿಕೊಂಡ ಮುಖ್ಯಮಂತ್ರಿ

65ನೇ ಸ್ವಾತಂತ್ರ್ಯೋತ್ಸವದಂದು ಜನತೆಯನ್ನುದ್ದೇಶಿಸಿ ಮಾತನಾಡಿದ ನೂತನ ಮುಖ್ಯಮಂತ್ರಿ ಸದಾನಂದಗೌಡರ ಭಾಷಣ ನಿಸ್ಸತ್ವದು ಮಾತ್ರವಲ್ಲ, ವರ್ತಮಾನದ ಸವಾಲುಗಳಿಗೆ ಬೆನ್ನು ತೋರಿಸಿದ ಪಲಾಯನವಾದಿಯೇ ಆಗಿತ್ತು. ಅವರ ಉದ್ಘೋಷಗಳು ಹಾಗೂ ಆಶಯಗಳನ್ನು ಸಾಕಾರಗೊಳಿಸುವ ವಾಸ್ತವದ ನಿರ್ದಿಷ್ಟ ಕಾರ್ಯ ಸೂಚಿಯಾಗಲೀ, ಆತ್ಮವಿಶ್ವಾಸ, ಬದ್ಧತೆಯಾಗಲೀ ಎಲ್ಲೂ ಕಂಡು ಬರಲಿಲ್ಲ. ಜನರ ಪಾಲಿಗೆ ಸತ್ತೇ ಹೋಗಿರುವ ಆಡಳಿತವನ್ನು ಪುನಶ್ಚೇತನಗೊಳಿಸಿ ಪರಿಹಾರ ಒದಗಿಸುವ ಲವಲೇಶ ಕಾಳಜಿಯೂ ಕಾಣಲಿಲ್ಲ. ಜನವಿರೋಧಿತನ, ಕೋಮುವಾದ ಮತ್ತು ಬ್ರಹ್ಮಾಂಡ ಭ್ರಷ್ಟಾಚಾರದ ಹೆಗಲಮೇಲೆ ಚಲಿಸುವ ಬಿಜೆಪಿಯ ಈ ಡೆಮ್ಮಿ ಸರ್ಕಾರದ ಕರಿನೆರಳೇ ಇಲ್ಲೂ ಕಂಡು ಬಂದಿತು.

ಬ್ರಿಟಿಷ್ ವಸಾಹತುಶಾಹಿಗಳ ಸುಲಿಗೆ, ಶೋಷಣೆಗಳ ಸಂಕೋಲೆಗಳನ್ನು ಕಡಿದೆಸೆದು ಸ್ವಾತಂತ್ರ್ಯ ಪಡೆದ ಜನತೆಯ ತ್ಯಾಗ, ಬಲಿದಾನಗಳ ಹೋರಾಟದ ಮಹಾನ್ ಗಾಥೆ, ಶ್ರಮವನ್ನು ನೆನಪಿಸಿಕೊಳ್ಳುವ ಸಂದರ್ಭ, ಈ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಭಾತೃತ್ವವನ್ನು, ಉಳಿಸಿಕೊಂಡು, ಬೆಳೆಸಿಕೊಂಡು ಸಾಗಿ ಹೋಗಬೇಕಾದ, ಸಂಗ್ರಾಮದ ಆಶಯಗಳನ್ನು ಸಾಕಾರಗೊಳಿಸಬೇಕಾದ, ಈ ದಿಶೆಯಲ್ಲಿನ ಸ್ಥಿತಿ ಸವಾಲುಗಳನ್ನು ಗುರುತಿಸಿ, ಸ್ವೀಕರಿಸಿ, ಎದುರಿಸುವ ಸಂಕಲ್ಪ ತೊಡುವ ಸಂದರ್ಭವೂ ಕೂಡ. ಆದರೆ ಮುಖ್ಯಮಂತ್ರಿಗಳ ಭಾಷಣ ಇಂತಹ ಯಾವುದೇ ಅಂಶದ ಬಗೆಗೆ ಕನಿಷ್ಠ ಕಾಳಜಿಯನ್ನು ತೋರಲಿಲ್ಲದಿರುವುದು ವಿಷಾದನೀಯ.

ಇಂದು ರಾಜ್ಯದಲ್ಲಿ ಸುಮಾರು 50 ತಾಲ್ಲೂಕುಗಳು ಬರದ ದವಡೆಗೆ ತುತ್ತಾಗುತ್ತಿವೆ. ನೆರೆ ಪರಿಹಾರ ಆಗಿಲ್ಲ. ಕೃಷಿರಂಗದ ಬಿಕ್ಕಟ್ಟು ದಿವಾಳಿತನ ರೈತರು ಕೃಷಿ ಕೂಲಿಕಾರರನ್ನು ಕಂಗಾಲಾಗಿಸಿದೆ. ರೈತರ ಆತ್ಮಹತ್ಯೆಗಳು ನಡೆದೇ ಇದೆ. ಭತ್ತ, ಕಬ್ಬು, ರೇಷ್ಮೆ, ಟೊಮ್ಯಾಟೋನಂತಹ ಫಸಲಿಗೆ ಸೂಕ್ತ ಬೆಲೆ ಸಿಗದೇ ರೈತರು ಫಸಲಿನ ಜೊತೆಗೆ ಬೀದಿಪಾಲಾಗಿದ್ದಾರೆ. ಅಸಂಘಟಿತ ಕಾರ್ಮಿಕರ ಶ್ರಮ ಶೋಷಣೆ ಹೆಚ್ಚಿದೆ, ಕಾರ್ಮಿಕ ಕಾನೂನುಗಳೂ ಜಾರಿಯಾಗುತ್ತಿಲ್ಲ. ಜೀವನ ಭದ್ರತೆಯೂ ಇಲ್ಲ, ಸವಲತ್ತುಗಳೂ ಇಲ್ಲ, ನಿರುದ್ಯೋಗ ಹೆಚ್ಚಳ, ವಲಸೆ, ಶಿಕ್ಷಣದ ವ್ಯಾಪಾರೀಕರಣ ಯುವಜನಾಂಗವನ್ನು ಅತಂತ್ರಕ್ಕೆ ತಳ್ಳುತ್ತಿದೆ. ಖಜಾನೆ ತುಂಬಿದೆಯೆಂದು ಹೊರಗೆಲ್ಲಾ ಸಾರಿಕೊಂಡರೂ ಆರ್ಥಿಕ ಸ್ಥಿತಿ ಸರಿಯಿಲ್ಲ. ದಲಿತರು, ಮಹಿಳೆಯರ ಸ್ಥಿತಿ ಶೋಚನೀಯ, ಕನಿಷ್ಟ ದೌರ್ಜನ್ಯಗಳನ್ನು ತಡೆಗಟ್ಟಲಾಗುತ್ತಿಲ್ಲ. ದಲಿತರ ಕುರಿತ ಸಮಿತಿಗೆ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿದ್ದರೂ ಒಂದು ಬಾರಿಯೂ ಸಭೆ ಸೇರಲಿಲ್ಲ. ಕೋಟ್ಯಾಂತರ ಜನತೆಯ ಬದುಕು-ಭವಿಷ್ಯಗಳು ಈ ಸರ್ಕಾರದ ಕಾಳಜಿಯಾಗಿರಬಾರದೇ?


ಇನ್ನು 'ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಉತ್ತಮವಾಗಿದೆ, ಕೋಮುಗಲಭೆಗಳಿಲ್ಲ, ಅದಕ್ಕಾಗಿ ರಾಜ್ಯಕ್ಕೆ ಪ್ರಶಸ್ತಿ ಸಿಕ್ಕಿದೆ' ಎಂಬ ಮುಖ್ಯಮಂತ್ರಿ ಮಾತುಗಳು ಹಾಸ್ಯಾಸ್ಪದ. ಹಾಗೆಯೇ ಹಿಂದುತ್ವದ ಕೋಮುವಾದಿಗಳು, ಮುಸ್ಲಿಂ ಮೂಲಭೂತವಾದಿಗಳ ಕೃತ್ಯಗಳು, ಭಯೋತ್ಪಾದನೆಯ ಬೆದರಿಕೆ ರಾಜ್ಯದಲ್ಲಿ ಹೆಚ್ಚಿರುವುದು ವಾಸ್ತವ. ಈ ಬಗ್ಗೆ ಚಕಾರವೆತ್ತದಿರುವುದು ಗುಪ್ತ ಅಜೆಂಡಾದ ಭಾಗವೇ? ಇಂತಹ ಸ್ಥಿತಿಯಲ್ಲಿ 'ಸಮೃದ್ಧ ಕರ್ನಾಟಕ'ವನ್ನು ಕಟ್ಟುವ ಬಗ್ಗೆ ಮುಖ್ಯಮಂತ್ರಿಗಳೇನೋ ಹೇಳಿದ್ದಾರೆ. ಆರೋಗ್ಯ, ಶಿಕ್ಷಣ, ಭದ್ರತೆ, ವಸತಿ, ಆಹಾರ, ಸಾಮಾಜಿಕ ನ್ಯಾಯ ಒದಗಿಸುವುದು ಸರ್ಕಾರದ ಪ್ರಧಾನ ಆಶಯವಂತೆ! ದೇಶದ ಅಭಿವೃದ್ಧಿಯ ಭೂಪಟದಲ್ಲಿ ಕರ್ನಾಟಕವನ್ನು ಮೊದಲ ಸ್ಥಾನಕ್ಕೇರಿಸುವ ಸಂಕಲ್ಪವನ್ನೇನೋ ಸಿ.ಎಂ. ಮಾಡಿಬಿಟ್ಟಿದ್ದಾರೆ. ಆದರೆ ಸಾಧಿಸುವುದು ಹೇಗೆ?

ರಾಜ್ಯದಲ್ಲಿ ಬಿಜೆಪಿ ಪಕ್ಷವು ಅಧಿಕಾರಕ್ಕೆ ಬರುವ ಮೊದಲು ಹಾಗೂ ನಂತರ ಅಭಿವೃದ್ಧಿಯೇ ತನ್ನ ಅಜೆಂಡಾ, ಪ್ರಧಾನ ಲಕ್ಷ್ಯವೆಂದು, ಅಭಿವೃದ್ಧಿಯ ಬಗ್ಗೆ ಸದಾ ಮಂತ್ರ ಜಪಿಸುತ್ತಾ ಬಂದಿರುವುದನ್ನು ಕಂಡಿದ್ದೇವೆ. ಈ ಸರ್ಕಾರ ಕೈಗೊಂಡ 'ಅಭಿವೃದ್ಧಿ ಯೋಜನೆಗಳು' ಮನಸೋ ಇಚ್ಛೆ ಲೂಟಿ ಮಾಡುವ ಸಾಧನ ವಾಯಿತು. ಉದ್ಯಮಿಗಳು, ಅಧಿಕಾರಸ್ಥ ರನ್ನು ಕೊಬ್ಬಿ ಬೆಳೆಸಿತೇ ವಿನಃ ಸಾಮಾನ್ಯರ ಕನಿಷ್ಠ ಅಗತ್ಯ, ಹಸಿವಿಗೆ ಒಂದಗಳು ಅನ್ನವನ್ನು ಕೊಡಲಿಲ್ಲ.ಇದೇ ಅಭಿವೃದ್ಧಿ ಹೆಸರಿನಲ್ಲಿ ದೇಶ-ವಿದೇಶಗಳಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ತಂದ ಸಾಲ ಮಂತ್ರಿ, ಮಹೋದಯರ, ಕಂಟ್ರಾಕ್ಟ್‌ದಾರರ, ಅಧಿಕಾರಿಗಳ ಜೇಬಿಗೆ ಸೇರಿತು. 60 ಸಾವಿರ ಕೋಟಿಯಷ್ಟಿದ್ದ ಹೊರ ಸಾಲ ಸುಮಾರು 1 ಲಕ್ಷ ಕೋಟಿಗೆ ಒಯ್ದ ಕೀರ್ತಿ ಇದೇ ಬಿಜೆಪಿ ಸರ್ಕಾರದ್ದು. ಇದೇ ಅಭಿವೃದ್ಧಿ ಹೆಸರಿನಲ್ಲಿ ಕಾರ್ಪೋರೇಟ್ ಕಂಪನಿಗಳಿಗೆ ಕೈಗಾರಿಕೆಗೆಂದು ರೈತರ ಭೂಮಿಯನ್ನು ಕಿತ್ತುಕೊಳ್ಳಲಾಗುತ್ತಿದೆ ಹೊರತು ಕೃಷಿಯನ್ನು ಉಳಿಸಲು ಕಿಂಚಿತ್ತೂ ಕ್ರಮವನ್ನೇ ವಹಿಸಲಿಲ್ಲ. ರಾಜ್ಯದಲ್ಲಿರುವ ಅತ್ಯುತ್ತಮ ಕಬ್ಬಿಣದ ಅದಿರಿನಂತಹ ನೈಸರ್ಗಿಕ ಸಂಪತ್ತನ್ನು ಎಗ್ಗಿಲ್ಲದೇ ಲೂಟಿ ಮಾಡಿ ಅಕ್ರಮಗಳನ್ನೆಸಗಲಾಯಿತು. ಗಣಿ ಹಾಗೂ ಭೂ

ಪುಟ 15ಕ್ಕೆ

ಮಂತ್ರಿ ಮಾಡಲು ಉಂಡು- ಕೊಂಡೂ ಹೋದ ಕಥೆ

'ಅಮ್ಮ' ಈ ಬಾರಿ ಬರಲಿಲ್ಲ, ಪ್ರತಿವರ್ಷವೂ ತಪ್ಪದೇ ಬಂದೇ ತೀರುತ್ತೇನೆಂದು, ಹಠ ತೊಟ್ಟು ಬರುತ್ತಿದ್ದ 'ಅಮ್ಮ' ಬರದೇ ಹೋದರೇ? ಅದು ಸುದ್ದಿಯಾಗದೇ ಇದ್ದೀತೆ? ಅದು ಸುದ್ದಿಯಾಯಿತು? ಸುದ್ದಿಗೆ ರೆಕ್ಕೆಪುಕ್ಕ ಮೂಡಿ ರಂಜನೀಯವೂ ಆಯಿತು. ಮನ ಒಲಿಸಲು ಹೋಗಿದ್ದ ಮಕ್ಕಳು 'ಅಮ್ಮ' ಬರಲೇಬೇಕೆಂದು ಹೆಚ್ಚು ಹಠ ಮಾಡಲಾಗಲಿಲ್ಲ. ಆದರೆ 'ತೂಕದ ಮನುಷ್ಯ'ನನ್ನು ಕರೆದು ತರುವಲ್ಲಿ ಯಶಸ್ವಿಯಾದರು. ವಿಶೇಷ ಹೆಲಿಕಾಪ್ಟರ್ ಅವರನ್ನು 'ಹೊತ್ತು'ಕೊಂಡು 'ಬಳ್ಳಾರಿಗೆ ಇಳಿಯಿತು ಎನ್ನಿ'! ಹೀಗೆ ನಿತಿನ್ ಗಡ್ಕರಿ, ತಲುಪಿದರು ಬಳ್ಳಾರಿ!



ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿ ಬಳ್ಳಾರಿಗೆ ಬಂದಿದ್ದೇನೋ ಲೋಕ ಕಲ್ಯಾಣಾರ್ಥಕ್ಕಾಗಿ! ಅಥವಾ ಗಣಿಗಳ್ಳರಾದ ಜನಾರ್ಧನರೆಡ್ಡಿ ಬ್ರದರ್ಸ್ ಅಂಡ್ ಶ್ರೀರಾಮುಲು ಕಂಪನಿ ವರುಷಕ್ಕೊಮ್ಮೆ ನಡೆಸುವ ಸಾಮೂಹಿಕ ಮದುವೆ ಸಮಾರಂಭದಲ್ಲಿ 'ಅಕ್ಕಿಕಾಳು' ಹಾಕಿ ಆಶೀರ್ವದಿಸಲು! ವರಮಹಾಲಕ್ಷ್ಮಿ ಹಬ್ಬದಂದು ಇಂತಹ ಸಮಾರಂಭ ಇಡುವುದು, ಅದರಲ್ಲಿ ರಾಜಕೀಯ ಮೈಲುಗಲ್ಲು ಸಾಧಿಸುವುದು ಕಳೆದ ಹನ್ನೊಂದು ವರುಷಗಳಿಂದಲೂ ನಡೆದು ಬಂದ ಸಂಪ್ರದಾಯ. ಹಿಂದೆ 1999ರಲ್ಲಿ ಸೋನಿಯಾಗಾಂಧಿಯವರು ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದರು. ದೆಹಲಿಗೆ ಹೋದ ಮೇಲೆ ಅವರು ಬಳ್ಳಾರಿಗೆ ಬರುವುದು ಮರೆತು ಹೋಯಿತು. ಆದರೆ ಸೋನಿಯಾ 'ಬಹು' (ಸೊಸೆ) ವಿರುದ್ಧ ಸ್ಪರ್ಧಿಸಿದ್ದ ಸುಷ್ಮಾ 'ಭೇಟಿ' (ಮಗಳು) 'ತಾನಂತೂ ಖಂಡಿತ ಪ್ರತಿವರುಷವೂ ಬರುವೆ, ಕನ್ನಡ ಕಲಿವೆ' ಎಂದು ಪ್ರಮಾಣ ಮಾಡಿದಂತೆ ಪೂಜೆಗೆ ಬರುವುದು ಖಾಯಂ ಆಯಿತು. ಈ ಚುನಾವಣೆಯಲ್ಲೇ ಬಿಜೆಪಿ ಅಖಿಲ ಭಾರತ ನಾಯಕತ್ವದೊಂದಿಗೆ ಸಖ್ಯ ಸಾಧಿಸಿದ ವ್ಯವಹಾರ ನಿಪುಣ ರೆಡ್ಡಿ ಕಂಪನಿ ಈ ಸಂಬಂಧ'ವನ್ನು ಚಾಣಕ್ಷತೆಯಿಂದ ಬಳಸಿಕೊಂಡರು. (ಅವರೂ ಸಹ) ಕಾಲ ಕ್ರಮೇಣ 'ಭೇಟಿ' (ಮಗಳು)ಆಗಿದ್ದ ಸುಷ್ಮಾ, ರೆಡ್ಡಿಗಳ ಅಮ್ಮ ಆದರು!

ಅಂದಹಾಗೇ ಸುಷ್ಮಾ ಮೇಡಂ 2000 ಇಸವಿಯಿಂದ ಬಳ್ಳಾರಿಗೆ ಬರುತ್ತಿದ್ದು ಸಂಘ ಪರಿವಾರದ ಖ್ಯಾತ ವೈದ್ಯರಾದ ಡಾ॥ ಬಿ.ಕೆ.ಶ್ರೀನಿವಾಸಮೂರ್ತಿಯವರ ಮನೆಗೆ. ಅಲ್ಲೆ ವರಮಹಾಲಕ್ಷ್ಮೀ ಪೂಜೆ, ನಂತರ 'ರೆಡ್ಡಿ ಧಣಿ'ಗಳ ಮದುವೆ, ಜಾತ್ರೆ, ಸನ್ಮಾನ ಸಮಾರಂಭ ಇಂತಹ 'ತಾಯಿ' ಮಕ್ಕಳ ಸಂಬಂಧವು ಗಾಡ್ ಫಾದರ್ ಅಲ್ಲ 'ಗಾಡ್ ಮದರ್' ಪಾತ್ರಕ್ಕೆ ರೂಪಾಂತರಗೊಂಡಿತು. ಒಂದೆಡೆ ಕಾಂಗ್ರೆಸ್‌ನ ರಾಜಶೇಖರರೆಡ್ಡಿ, ಮತ್ತೊಂದೆಡೆ ಬಿಜೆಪಿ ನಾಯಕರು. ಹೀಗೆ ರೆಡ್ಡಿ ಕಂಪನಿ ಸಿಕ್ಕ ಅವಕಾಶವನ್ನೆಲ್ಲಾ ಬಳಸಿ ಕಬ್ಬಿಣದ ಅದಿರನ್ನುಲೂಟಿ ಮಾಡಿದ್ದು, ರಾಜಕೀಯವಾಗಿ ಬೆಳೆದದ್ದು, ಮಾಫಿಯಾ ಸಾಮ್ರಾಜ್ಯ ಸ್ಥಾಪಿಸಿದ್ದು ಕಣ್ಣೆದುರುಗೇ ಇದೆ. ಲೋಕಾಯುಕ್ತ ವರದಿ, ಸುಪ್ರೀಂಕೋರ್ಟ್‌ಗಳು ರೆಡ್ಡಿಗಳ ಧಗಾಖೋರತನ, ಅಕ್ರಮಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿವೆ.

ಹೀಗೆ ಅತೀ ಮಧುರ, ಗಾಢ ಸಂಬಂಧಗಳಿದ್ದು, ರೆಡ್ಡಿಗಳ ಕುಖ್ಯಾತಿ ಹೊರಬಂದು, ಅವರ ಮೇಲೆ ತೀವ್ರ ಟೀಕೆ ಇತ್ಯಾದಿಗಳು ಬಂದಾಗಲೂ ಇವರನ್ನು ಸದಾ ಸಮರ್ಥಿಸಿಕೊಳ್ಳುತ್ತಿದ್ದುದು ವಿರೋಧಪಕ್ಷದ ನಾಯಕಿ ಬಿಜೆಪಿ ಹೈಕಮಾಂಡ್‌ನ ಸುಷ್ಮಾರವರೇ. ಆದರೆ ಈ ನಾಲ್ಕಾರು ತಿಂಗಳ ಹಿಂದೆ ರೆಡ್ಡಿಗಳ ಜೊತೆಗಿನ ಸಂಬಂಧವನ್ನು ಝೂಡಿಸಿಕೊಂಡಂತೆ ಮಾತನಾಡಿದ ಸುಷ್ಮಾರ ನಡೆ ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟುಕೊಂಡಂತೆ ಮಾಡಿತ್ತು. ಅಲ್ಲವೇ?. ಅದು ರೆಡ್ಡಿಗಳ ಮೇಲಿನ ಕೋಪದಿಂದಲ್ಲ, ಬದಲಾಗಿ ಪ್ರಧಾನಿಯಾಗುವ ಆಶೆ!

ಪುಟ 15ಕ್ಕೆ

ಕಾರ್ಟೂನ್ ಕಾರ್ನರ್



ಕೃಪೆ : ಪ್ರಜಾವಾಣಿ

ಆಗಸ್ಟ್ 5 : ಬ್ಯಾಂಕ್‌ಗಳಲ್ಲಿ ನೇಮಕಾತಿಗಾಗಿ ಆಗ್ರಹಿಸಿ ಬ್ಯಾಂಕುಗಳ ವಿಲೀನದ ವಿರುದ್ಧ ಐಕ್ಯ ಹೋರಾಟ

ದೇಶದಾದ್ಯಂತ 10ಲಕ್ಷಕ್ಕೂ ಹೆಚ್ಚು ಬ್ಯಾಂಕ್ ಅಧಿಕಾರಿಗಳು ಮತ್ತು ನೌಕರರು ದೇಶದ ಆರ್ಥಿಕ ಸಾರ್ವಭೌಮತೆಯನ್ನು ರಕ್ಷಿಸಲು ಆಗಸ್ಟ್ 5, 2011ರಂದು ಒಂದು ದಿನದ ಮುಷ್ಕರ ನಡೆಸಿದರು. ಹೆಚ್ಚು ಕಡಿಮೆ ಎಲ್ಲಾ ರಾಜ್ಯಗಳಲ್ಲಿ ಮುಷ್ಕರ ಯಶಸ್ವಿಯಾಗಿತ್ತು.

ಸುಮಾರು 6ಲಕ್ಷಕ್ಕೂ ಹೆಚ್ಚು ನೌಕರರನ್ನು ಪ್ರತಿನಿಧಿಸುವ 5 ಸಂಘಟನೆಗಳು ಮತ್ತು ಅಧಿಕಾರಿಗಳನ್ನು ಪ್ರತಿನಿಧಿಸುವ 4ಸಂಘಗಳು ಮುಷ್ಕರಕ್ಕೆ ಕರೆ ನೀಡಿದ್ದವು. ಬಿ.ಇ.ಎಫ್.ಐ., ಎ.ಐ.ಬಿ.ಇ.ಎ., ಐಬೋಕ್ ಮುಂತಾದ 9 ಸಂಘಟನೆಗಳು ಜಂಟಿಯಾಗಿ ಯುನೈಟೆಡ್ ಫೋರಂ ಆಫ್ ಬ್ಯಾಂಕ್ ಯೂನಿಯನ್ಸ್ (ಯುಎಫ್‌ಬಿಯು) ಎಂಬ ಜಂಟಿ ವೇದಿಕೆಯನ್ನು ಬಹಳ ಹಿಂದೆಯೇ ರಚಿಸಿಕೊಂಡಿದ್ದವು. ನೌಕರರ ಮತ್ತು ಅಧಿಕಾರಿಗಳ ಸಾಮಾನ್ಯ ಪ್ರಶ್ನೆಗಳು ಎದುರಾದಾಗ ಜಂಟಿಯಾಗಿ ಹೋರಾಟ ಮಾಡಿವೆ.

ಬ್ಯಾಂಕ್‌ಗಳಲ್ಲಿ ಕೆಲಸದ ಒತ್ತಡ ತೀವ್ರವಾಗಿ ಹೆಚ್ಚಿದೆ. 1991 ರಿಂದ 2010ರ ವರೆಗೆ ಬ್ಯಾಂಕ್‌ಗಳ ವಹಿವಾಟು ಶೇ 650ರಷ್ಟು ಅಗಾಧ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಬ್ಯಾಂಕುಗಳ ಶಾಖೆ ಶೇಕಡ 141ರಷ್ಟು ಹೆಚ್ಚಾಗಿದೆ. ಆದರೆ ನೌಕರರು ಮತ್ತು ಅಧಿಕಾರಿಗಳ ಸಂಖ್ಯೆ 1991ರಲ್ಲಿ 9.47 ಲಕ್ಷ ಇದ್ದುದು 2010ರಲ್ಲಿ 9.41 ಲಕ್ಷಕ್ಕೆ ಕುಸಿದಿದೆ. ಅಂದರೆ 19 ವರ್ಷಗಳಲ್ಲಿ ವಹಿವಾಟು ಜಾಸ್ತಿಯಾಗಿದ್ದರೂ, ಬ್ಯಾಂಕು ಶಾಖೆಗಳ ಸಂಖ್ಯೆ ಜಾಸ್ತಿಯಾಗಿದ್ದರೂ ನೌಕರರ ಸಂಖ್ಯೆ ಕಡಿಮೆಯಾಗಿದೆ. ಇದರಿಂದ ಗ್ರಾಹಕರಿಗೆ ನೀಡುವ ಸೇವೆಯಲ್ಲಿ ಖಂಡಿತ ಕುಂಠಿತ ಆಗಿದೆ. ಆದ್ದರಿಂದ ಬ್ಯಾಂಕುಗಳಲ್ಲಿ ಹೊಸ ನೇಮಕಾತಿಗಳನ್ನು ಮಾಡಬೇಕೆಂದು ಮುಷ್ಕರ ನಿರತರು ಒತ್ತಾಯಿಸಿದ್ದಾರೆ.

ಇಂದು ಬ್ಯಾಂಕುಗಳಲ್ಲಿ ಅಧಿಕಾರಿಗಳಿಗೆ ನಿಗದಿತ ಕೆಲಸದ ಅವಧಿ ಇಲ್ಲ. ಕೆಲವೊಮ್ಮೆ ರಜಾ ದಿನಗಳಲ್ಲಿಯೂ ಕೆಲಸ ಮಾಡಬೇಕಾದ ಒತ್ತಡವಿದೆ. ನೌಕರವರ್ಗದವರಿಗೆ ನಿಗದಿತ ಕೆಲಸದ ಅವಧಿ ಇದ್ದರೂ, ಕೆಲಸದ ಒತ್ತಡದಿಂದಾಗಿ ಹೆಚ್ಚು ಸಮಯ ದುಡಿಯಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ



ಕೆಲಸದ ಅವಧಿಯನ್ನು ನಿಗದಿಗೊಳಿಸುವುದು ಇನ್ನೊಂದು ಬೇಡಿಕೆ.

ಖಾಸಗೀಕರಣಕ್ಕೆ ವಿರೋಧ :

ಬ್ಯಾಂಕುಗಳನ್ನು ಖಾಸಗೀಕರಣಗೊಳಿಸುವುದಾಗಲೀ, ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ ಶೇರುಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವುದಕ್ಕಾಗಲೀ ನೌಕರರು ತೀವ್ರ ವಿರೋಧ ವ್ಯಕ್ತಪಡಿಸಿರುತ್ತಾರೆ. ಇದರಿಂದ ಖಾಸಗಿ ಉದ್ದಿಮೆದಾರರು ತಮ್ಮದೇ ಬ್ಯಾಂಕುಗಳನ್ನು ಸ್ಥಾಪಿಸಲು ಸರಕಾರದ ಅನುಮತಿ ಕೋರಿದ್ದು, ಸರಕಾರವೂ ಒಪ್ಪಿಗೆ ನೀಡಲು ಕಾತರವಾಗಿದೆ. ಆರ್ಥಿಕ ಕುಸಿತದ ಹಿನ್ನೆಲೆಯಲ್ಲಿ ಅಮೇರಿಕಾ ದೇಶದ ಖಾಸಗಿ ಬ್ಯಾಂಕುಗಳು ಮುಚ್ಚಿ ಠೇವಣಿದಾರರಿಗೆ, ನೌಕರರಿಗೆ ಎಷ್ಟು ತೊಂದರೆಯಾಗಿತ್ತು ಎಂಬುದನ್ನು ತಿಳಿದುಕೊಂಡಿದ್ದೇವೆ. ಅಲ್ಲಿನ ಸರಕಾರ ತೆರಿಗೆದಾರರ ಕೋಟಿಗಟ್ಟಲೆ ಡಾಲರ್ ಹಣವನ್ನು ಖಾಸಗಿ ಬ್ಯಾಂಕುಗಳಿಗೆ ನೀಡಿರುವುದನ್ನು ಮರೆತಿಲ್ಲ.

ಭಾರತದಲ್ಲೂ ಶೇರು ಮಾರುಕಟ್ಟೆ ಹಗರಣ, ಖಾಸಗಿ ಆಡಳಿತ ಮಂಡಳಿಗಳ ದುರಾಡಳಿತದಿಂದಾಗಿ ಹಲವಾರು ಬ್ಯಾಂಕುಗಳು ಮುಚ್ಚಿ ನೌಕರರನ್ನು ಬೀದಿಪಾಲು ಮಾಡಿದ್ದವು. ಗ್ರಾಹಕರು ತಮ್ಮ ಠೇವಣಿಯನ್ನು ವಾಪಾಸು ಪಡೆಯಲು ತಿಂಗಳುಗಟ್ಟಲೆ ಪರದಾಡಬೇಕಾಯಿತು.

ದೇಶದ ಬಹುತೇಕ ಆರ್ಥಿಕ ವಹಿವಾಟು ಸರಕಾರಿ ಬ್ಯಾಂಕುಗಳ ಮೂಲಕ ನಡೆಯುತ್ತಿರುವುದರಿಂದ ದೇಶದ ಆರ್ಥಿಕತೆಯನ್ನು ರಕ್ಷಿಸಲು ಸಾಧ್ಯವಾಗಿತ್ತು. ಶ್ರೀಮಂತ ರಾಷ್ಟ್ರಗಳ ಆದರಲ್ಲಿಯೂ ಅಮೇರಿಕಾದ ಆರ್ಥಿಕ ಕುಸಿತವು ಭಾರತದ ಮೇಲೆ ಪರಿಣಾಮವಾಗುವುದಿಲ್ಲ ಎಂದು ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿ ಹೇಳುತ್ತಿದ್ದಾರೆ. ಸಾರ್ವಜನಿಕ ಕ್ಷೇತ್ರದ ಬ್ಯಾಂಕು, ವಿಮೆ ಮತ್ತಿತರ ಹಣಕಾಸು ಸಂಸ್ಥೆಗಳು ಪ್ರಬಲವಾಗಿರುವುದರಿಂದ ಧೈರ್ಯವಾಗಿ ಈ ಹೇಳಿಕೆಯನ್ನು ನೀಡಲು ಹಣಕಾಸು ಮಂತ್ರಿಗಳಿಗೆ ಸಾಧ್ಯವಾಗಿದೆ. ಭಾರತದ ಆರ್ಥಿಕತೆ ಕುರಿತು 'ಯಾಹೂ ನ್ಯೂಸ್'ನಲ್ಲಿ ನತಾಲಿಯಾ ಜಾರ್ಜ್‌ರವರು, 'ಬ್ಯಾಂಕುಗಳ ರಾಷ್ಟ್ರೀಕರಣ, ರಿಯಲ್ ಎಸ್ಟೇಟ್‌ನಂತಹ ಸಟ್ಟಾ ವಹಿವಾಟುಗಳಿಗೆ ಸಾಲ ನೀಡುವಾಗ ಕೈಗೊಂಡ ಕೆಲವು ಕ್ರಮಗಳಿಂದಾಗಿ ದೇಶದ ಆರ್ಥಿಕತೆ ದು:ಸ್ಥಿತಿಗೆ ಹೋಗಿಲ್ಲ' ಎಂದು ಬರೆದಿರುತ್ತಾರೆ.

ಆದ್ದರಿಂದ ಖಾಸಗಿ ಬ್ಯಾಂಕುಗಳ ಸ್ಥಾಪನೆಗೆ ವಿರೋಧ ವ್ಯಕ್ತ ಪಡಿಸುತ್ತಿರುವ ಬ್ಯಾಂಕು ನೌಕರರ ಹೋರಾಟವು ದೇಶಪ್ರೇಮಿ ಹೋರಾಟವಾಗಿದೆ.

ಬ್ಯಾಂಕುಗಳ ವಿಲೀನ :

ಗ್ರಾಮೀಣ ಪ್ರದೇಶದ ಹಲವಾರು ಶಾಖೆಗಳನ್ನು ವಿಲೀನಗೊಳಿಸುವ ಪ್ರಕ್ರಿಯೆ ಆರಂಭಿಸಿದ್ದ ಕೇಂದ್ರ ಸರಕಾರ ಇದೀಗ ಒಂದು ಬ್ಯಾಂಕನ್ನು ಇನ್ನೊಂದು ಬ್ಯಾಂಕ್‌ನೊಂದಿಗೆ ವಿಲೀನಗೊಳಿಸಲು ಪ್ರಯತ್ನಿಸುತ್ತಿದೆ. ಈಗಾಗಲೇ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ಎರಡು ಸಣ್ಣ ಬ್ಯಾಂಕುಗಳನ್ನು ವಿಲೀನಗೊಳಿಲಾಗಿದೆ. ಕರ್ನಾಟಕದ ಹೆಮ್ಮೆಯ ಕೊಡುಗೆಯಾಗಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು(ಮೈಸೂರು ಬ್ಯಾಂಕ್)ನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ವಿಲೀನಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇದರಿಂದ ನೌಕರರ ಸೇವಾ ಭದ್ರತೆಗೆ ಧಕ್ಕೆಯುಂಟಾಗುವುದಲ್ಲದೆ, ವಿಲೀನಗೊಳಿಸುವುದರಿಂದ ಶಾಖೆಗಳ ಸಂಖ್ಯೆ ಕಡಿತವಾಗಿ ಗ್ರಾಹಕರು ತೊಂದರೆಗೊಳಗಾಗುತ್ತಾರೆ.

ಈ ಮುಷ್ಕರದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ನೌಕರರಲ್ಲದೆ, ದೇಶದ ಮತ್ತು ವಿದೇಶದ ಖಾಸಗಿ ಬ್ಯಾಂಕುಗಳು, ಸಹಕಾರಿ ಕ್ಷೇತ್ರದ ಬ್ಯಾಂಕುಗಳ ನೌಕರರು ಸಹ ಭಾಗವಹಿಸಿರುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ಆಗಸ್ಟ್ 5ರ ಮುಷ್ಕರ ಯಾವುದೇ ವೇತನ ಹೆಚ್ಚಳ ಅಥವಾ ಭಡ್ತಿಗಾಗಿ ಆಗಿರದೆ ಈ ದೇಶದ ಆರ್ಥಿಕ ಸಾರ್ವಭೌಮತೆಯನ್ನು ರಕ್ಷಿಸುವ ಹೋರಾಟವಾಗಿತ್ತು. ಯಶಸ್ವಿ ಮುಷ್ಕರ ನಡೆಸಿದ ಬ್ಯಾಂಕು ಅಧಿಕಾರಿಗಳು ಮತ್ತು ನೌಕರರಿಗೆ ಕ್ರಾಂತಿಕಾರಿ ವಂದನೆಗಳು.

- ಬಾಲಕೃಷ್ಣ ಶೆಟ್ಟಿ



ಕೇಂದ್ರ ಸರ್ಕಾರದ ಪ್ರಜಾಸತ್ತಾತ್ಮಕ ಹಕ್ಕುಗಳ ದಮನ ಖಂಡಿಸಿ ಮತ್ತು ಪ್ರತಿಭಟನೆ ನಡೆಸುವ ಹಕ್ಕಿನ ರಕ್ಷಣೆಗಾಗಿ ಕಾರವಾರದಲ್ಲಿ ಸಿ.ಪಿ.ಐ.(ಎಂ) ನೇತೃತ್ವದಲ್ಲಿ ಪ್ರತಿಭಟನೆ ದಿನಾಂಕ 17-08-2011 ರಂದು ನಡೆಯಿತು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ರಾಜ್ಯ ಸಮಿತಿ ಸದಸ್ಯರಾದ ಎಸ್. ವರಲಕ್ಷ್ಮಿ ಹಾಜರಿದ್ದು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಪಕ್ಷದ ಮುಖಂಡರಾದ ಯಮುನಾ ಗಾಂವಕರ, ಎಚ್.ಬಿ. ನಾಯಕ, ಕಾರವಾರ ಶಾಖೆಯ ಕಾರ್ಯದರ್ಶಿ ಶ್ಯಾಮನಾಥ ನಾಯ್ಕ, ಮೋಹಿನಿ ನಮ್ಸೇಕರ, ಕಾರ್ಮಿಕ ಮುಖಂಡರಾದ ಹರೀಶ ನಾಯ್ಕ, ಶಾಲಿನಿ ಕಲ್ಮನೆ, ಗೀತಾ ರಾಯ್ಕರ, ಜೋಸ್ ಥಾಮಸ್, ಯುವಜನ ಮುಖಂಡ ಡಿ. ಶ್ಯಾಮಸನ್ ಮುಂತಾದವರು ಹಾಜರಿದ್ದರು.



ಜನಶಕ್ತಿ ಚಂದಾದಾರರಾಗಿ

ಬಿಡಿ ಪ್ರತಿ	:	ರೂ.5.00
ವಾರ್ಷಿಕ ಚಂದಾ	:	ರೂ.250.00
ದ್ವೈವಾರ್ಷಿಕ ಚಂದಾ	:	ರೂ.500.00

ವಿ.ಸೂ : ಅವಧಿ ಮುಗಿಯುತ್ತಿರುವ ಚಂದಾದಾರರು ತಮ್ಮ ಚಂದಾವನ್ನು ಪರಿಶೀಲಿಸಿ, ನವೀಕರಿಸಬೇಕಾಗಿ ವಿನಂತಿ.

ಆಗಸ್ಟ್ 13–15 : ದಲಿತ ಪ್ರಶ್ನೆಗಳ ಮೇಲಿನ ರಾಜ್ಯಮಟ್ಟದ ಶಿಬಿರ

ಎಡಪಂಥೀಯ ಚಿಂತನೆಗಳನ್ನುಮೈಗೂಡಿಸಿಕೊಂಡು ದಲಿತ ಚಳುವಳಿ ಬೆಳೆಯಬೇಕು

ಆಗಸ್ಟ್ 13 ರಂದು ಶನಿವಾರ ತುಮಕೂರಿನಲ್ಲಿ ದಲಿತ ಹಕ್ಕು ಕಾರ್ಯಾಗಾರದ ಉದ್ಘಾಟನೆ ನಡೆಯಿತು . ಶಿಬಿರ ಉದ್ಘಾಟಿಸಿ ಮಾತನಾಡಿದ ಜನಪರ ಹೋರಾಟಗಾರ ದಲಿ ಕವಿ ಗೊಲ್ಲಹಳ್ಳಿ ಶಿವಪ್ರಸಾದ್ ಜಾತಿ ವ್ಯವಸ್ಥೆಯನ್ನು ಪ್ರಜ್ಞಾಪೂರ್ವಕವಾಗಿ ಬೆಳೆಸುವ ಕೆಲಸ ನಡೆಯುತ್ತಿದೆ. ಮಕ್ಕಳ ಮನಸ್ಸಿನಲ್ಲಿ ವಿಷ ಬೀಜ ಬಿತ್ತಲಾಗುತ್ತಿದೆ. ಅಸತ್ಯ, ಮೌಢ್ಯದ ಪ್ರತಿಪಾದನೆ ಮಾಡಲಾಗುತ್ತಿದೆ. ಇಂತಹ ಅಸತ್ಯಗಳ ಪರಮಾವಧಿ ವಿರುದ್ದ ಸಂಘಟಿತ ಹೋರಾಟ ಮಾಡಬೇಕು.

ಮಾನವ ಸಮಾಜಕ್ಕೆ ಮಹಾನ್ ಸಂದೇಶ ನೀಡಿದ ಬಸವಣ್ಣ, ನಾರಾಯಣಗುರು, ಕುವೆಂಪು ಅವರಂತಹ ವ್ಯಕ್ತಿಗಳನ್ನು ಜಾತಿಗೆ ಸೀಮಿತಗೊಳಿಸಲಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ಜಾತಿಯನ್ನೇ ಪೇಟೆಂಟ್ ಪಡೆಯುವ ಮಟ್ಟಕ್ಕೆ ತಂದು ನಿಲ್ಲಿಸಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಅಭಿವೃದ್ಧಿ ನೆಪದಲ್ಲಿ ಸರ್ವನಾಶ ಮಾಡಲಾಗುತ್ತಿದೆ. ಕಾಡುಗಳಲ್ಲಿ ಫೈವ್‌ಸ್ಟಾರ್ ಹೋಟೆಲ್‌ಗಳು, ಗಣಿಗಾರಿಕೆ, ಮತ್ತಿತರ ಚಟುವಟಿಕೆಗಳು ಹೆಚ್ಚುತ್ತಿರುವುದರಿಂದ ಆನೆಗಳು ನಾಡಿಗೆ ಬರುವಂತಾಗಿದೆ. ಇದರ ಬಗ್ಗೆ ಯಾರೊಬ್ಬರು ಗಮನಹರಿಸುತ್ತಿಲ್ಲ. ಸರ್ಕಾರಗಳಿಗೆ ಕಾಳಜಿ ಇಲ್ಲ ಎಂದರು.

ಪ್ರಜಾಪ್ರಭುತ್ವ ಮಾರಾಟದ ಸರಕಾಗಿದೆ. ಸತ್ಯ ಹೇಳಿದವರನ್ನು ಗುಂಡಿಕ್ಕಿ ಕೊಲ್ಲಲಾಗುತ್ತಿದೆ. ದೇವರು ಧರ್ಮದ ಬಗ್ಗೆ ಮಾತನಾಡಿದರೆ ಅವರಿಗೆ ರಕ್ಷಣೆ ನೀಡಲಾಗುತ್ತಿದೆ. ಆದರೆ ನೊಂದ ಜನರಿಗೆ ಹಕ್ಕು ಕೇಳಿದವರಿಗೆ ರಕ್ಷಣೆ ಇಲ್ಲವಾಗಿದೆ. ಮಠಮಾನ್ಯಗಳನ್ನು ಪೋಷಿಸುವ ಸರ್ಕಾರ ಮಾನವೀಯತೆಯನ್ನು ಮರೆತಿದೆ.



ದೃಶ್ಯಮಾಧ್ಯಮಗಳು ಕ್ರೈಂ ಮತ್ತು ಸೆಕ್ಸ್ ವಿಷಯಗಳನ್ನು ವಿಜೃಂಭಿಸುತ್ತಿವೆ ಎಂದರು.


ಬಂಡವಾಳಶಾಹಿ ವ್ಯವಸ್ಥೆ ಪೋಷಿಸಿಕೊಂಡು ಬರುತ್ತಿರುವ ಜಾತಿ ತಾರತಮ್ಯ ಮತ್ತು ಸಾಮಾಜಿಕ ಅಸಮಾನತೆ ನಾಶವಾಗದ ಹೊರತು ಸಮತಾ ಸಮಾಜ ನಿರ್ಮಾಣ ಸಾಧ್ಯವಾಗುವುದಿಲ್ಲ ಎಂದು ಸಿಪಿಎಂ ಮುಖಂಡ ಜಿ.ವಿ.ಶ್ರೀರಾಮರೆಡ್ಡಿ ಅಭಿಪ್ರಾಯಪಟ್ಟಿದ್ದಾರೆ.

ತುಮಕೂರಿನ ಬಾವಿಕಟ್ಟೆ ಕಲ್ಯಾಣ ಮಂಟಪದಲ್ಲಿ ನಡೆದ ದಲಿತ ಹಕ್ಕುಗಳ ರಕ್ಷಣೆಗಾಗಿ ರಾಜ್ಯ ಮಟ್ಟದ ಅಧ್ಯಯನ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದೇಶದಲ್ಲಿ ಹಿಂಸೆ ಮತ್ತು ಕ್ರೌರ್ಯ ಹೆಚ್ಚುತ್ತಿದೆ. ಕೈರ್ಲಾಂಜಿ ನರಮೇಧ ಪ್ರಕರಣವೇ ಇದಕ್ಕೆ ಪ್ರಮುಖ ಸಾಕ್ಷಿಯಾಗಿದೆ. ಇದು ಬಲಿಷ್ಟ ಸಮುದಾಯದ ಸಾಮಾಜಿಕ ಗುಲಾಮಗಿರಿಯ ಪ್ರತೀಕ. ವಿಶ್ವದ ಬೇರೆ ಬೇರೆ ದೇಶಗಳಲ್ಲಿ ಸಾಮಾಜಿಕ ಅಸಮಾನತೆ ನಿರ್ನಾಮ ಮಾಡಲಾಗಿದೆ. ಆದರೆ ಬಂಡವಾಳಶಾಹಿ ವ್ಯವಸ್ಥೆಯ ಕ್ರೌರ್ಯ ಮುಂದುವರಿದಿದೆ. ದುಷ್ಟ ಶಕ್ತಿಗಳು ಜಾತಿ ವ್ಯವಸ್ಥೆಯನ್ನು ಬೆಂಬಲಿಸುತ್ತ ಬರುತ್ತಿವೆ. ಹೀಗಾಗಿ ಪಾಳೇಗಾರಿಕೆ, ಊಳಿಗಮಾನ್ಯ ಪದ್ಧತಿ ಇಂದಿಗೂ ಕಂಡು ಬರುತ್ತಿದೆ. ಜಾತಿ ವ್ಯವಸ್ಥೆಯ ಸಾಮಾಜಿಕ ಅಸಮಾನತೆಯ ಬೇರುಗಳನ್ನು ನಿರ್ಮೂಲನೆ ಮಾಡಬೇಕು. ಕೇವಲ ಜಾತಿ ವ್ಯವಸ್ಥೆಯ ಸುಧಾರಣಾ ಕ್ರಮಗಳಿಂದ ಪ್ರಯೋಜನವಿಲ್ಲ. ಈವರೆಗೆ ಜಾತಿ ನಾಶಕ್ಕೆ ಕೈಗೊಂಡ ಸುಧಾರಣಾ ಕ್ರಮಗಳು ವಿಫಲವಾಗಿವೆ. ಆದ್ದರಿಂದ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಬೇಕು ಎಂದು ಹೇಳಿದರು.

ಪ್ರಗತಿಪರ ಚಿಂತಕ ಕೆ.ದೊರೈರಾಜ್ ಮಾತನಾಡಿ ಇಂದಿನ ಕ್ಲಿಷ್ಟಕರ ಸನ್ನಿವೇಶದಲ್ಲಿ ತಾತ್ವಿಕ ಹೋರಾಟದ ಅಗತ್ಯವಿದೆ. ಎಡಪಂಥೀಯ ಚಿಂತನೆಗಳನ್ನು ಅಳವಡಿಸಿಕೊಂಡು ದಲಿತ ಚಳವಳಿ ಮುಂದುವರಿಯಬೇಕಾಗಿದೆ ಎಂದು ಹೇಳಿದರು.

ಸಮಾರಂಭದಲ್ಲಿ ಕರ್ನಾಟಕ ಪ್ರಾಂತ ರೈತಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ, ಸಿಪಿಎಂ ರಾಜ್ಯಾಧ್ಯಕ್ಷ ವಿಜೆಕೆ ನಾಯರ್, ಸಿಪಿಎಂ ಮುಖಂಡರಾದ ಸಯ್ಯದ್ ಮುಜೀಬ್, ಬಿ.ಉಮೇಶ್, ಎನ್.ಕೆ. ಸುಬ್ರಹ್ಮಣ್ಯ, ಉಪಸ್ಥಿತರಿದ್ದರು. ಬಿ.ಉಮೇಶ್ ಸ್ವಾಗತಿಸಿದರು. ಡಿವೈಎಫ್ಐ ಮುಖಂಡ ರಾಘವೇಂದ್ರ ನಿರೂಪಿಸಿದರು.





‘ಹಿಂದುತ್ವ ಎಂದರೆ ಜಾತೀಯತೆ ಬಲಗೊಳ್ಳುವುದು’

ಹಿಂದೂ ಧರ್ಮದಿಂದ ಸಮಾಜದಲ್ಲಿ ಜಾತಿ ವ್ಯವಸ್ಥೆ ಬಲಿಷ್ಠಗೊಳ್ಳುತ್ತಿದೆ ಎಂದು ಸಿಪಿಎಂ ಪಾಲಿಟ್‌ಬ್ಯೂರೋ ಸದಸ್ಯ ಕೆ. ವರದರಾಜನ್ ಅಭಿಪ್ರಾಯಪಟ್ಟರು.

ಕೊರಟಗೆರೆಯಲ್ಲಿ ಮೂರು ದಿನಗಳ ಕಾಲ ನಡೆದ ದಲಿತ ಹಕ್ಕುಗಳ ರಕ್ಷಣೆಗಾಗಿ ರಾಜ್ಯ ಮಟ್ಟದ ಆಧ್ಯಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜ್ಯ ಬಿಜೆಪಿ ಸರ್ಕಾರ ಭಗವದ್ಗೀತೆ ಅಭಿಯಾನಕ್ಕೆ ಬೆಂಬಲ ನೀಡುತ್ತಿದೆ. ಮಠಮಾನ್ಯಗಳಿಗೆ ಹಣ ಕೊಡುತ್ತಿದೆ. ಸರ್ಕಾರದ ವೆಚ್ಚದಲ್ಲಿ ಗಂಗಾಜಲ ವಿತರಿಸಿದೆ. ಮುಖ್ಯಮಂತ್ರಿಗಳು ಮತ್ತು ಸಂಪುಟದ ಸಚಿವರು ತಮ್ಮ ಕೊಠಡಿಗಳನ್ನು ದೇವಾಲಯಗಳನ್ನಾಗಿ ಪರಿವರ್ತಿಸಿಕೊಂಡಿದ್ದಾರೆ. ಇದರಿಂದಾಗಿ ರಾಜ್ಯದಲ್ಲಿ ದಲಿತರು ಮತ್ತು ಹಿಂದುಳಿದವರ ಅಭಿವೃದ್ಧಿ ಕನಸಿನ ಮಾತಾಗಿದೆ ಎಂದು ಆರೋಪಿಸಿದರು.

ಜಾತಿ ವ್ಯವಸ್ಥೆ ನಾಶವಾಗಬೇಕೆಂದು ಚಳವಳಿ ನಡೆಯುತ್ತಿದ್ದರೆ, ಇದನ್ನು ಹತ್ತಿಕ್ಕಲು ಕಾಂಗ್ರೆಸ್ ಮತ್ತು ಬಿಜೆಪಿ ಹವಣಿಸುತ್ತಿವೆ. ರಾಷ್ಟ್ರಮಟ್ಟದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಜಾತಿ ವ್ಯವಸ್ಥೆಯನ್ನು ಬಲಗೊಳಿಸಲು ಯತ್ನಿಸುತ್ತಿವೆ. ಉಭಯ ಪಕ್ಷಗಳಲ್ಲಿರುವ ಭೂಮಾಲಿಕರು ಜಾತಿ ವ್ಯವಸ್ಥೆ ಯಥಾಸ್ಥಿತಿ ಮುಂದುವರಿಯುವಂತೆ ನೋಡಿಕೊಳ್ಳುತ್ತಿವೆ.

ಖಾಸಗಿ ರಂಗದಲ್ಲೂ ಸಾಮಾಜಿಕ ನ್ಯಾಯ ಸಿಗುತ್ತಿಲ್ಲ. ಹೀಗಾಗಿ ಖಾಸಗಿ ಕ್ಷೇತ್ರದಲ್ಲಿ ದಲಿತರಿಗೆ ಮೀಸಲಾತಿ ಬೇಕಾಗಿದೆ. ದಲಿತರಿಗೆ ಭೂಮಿ ಕೊಡಬೇಕು. ಭೂಮಿ ಕೊಡಲಿಲ್ಲ ಎಂದರೆ ಅವರ ಸಬಲೀಕರಣ ಸಾಧ್ಯವಿಲ್ಲ ಎಂದು ಹೇಳಿದರು.

ದಲಿತರಿಗೆ ಸೌಲಭ್ಯ ಕೊಡುವ ಬದಲು ಹಿಂದೂ ಧರ್ಮದ ಚೌಕಟ್ಟಿಗೆ ತರುವ ಕೆಲಸ ನಡೆಯುತ್ತಿದೆ. ದೇಶದಲ್ಲಿ ಶೇಕಡ 22ರಷ್ಟು ದಲಿತರಿದ್ದರೂ ಅವರ ಆರ್ಥಿಕ ಸಬಲೀಕರಣಕ್ಕೆ ಯಾವುದೇ ಕಾರ್ಯಕ್ರಮ ರೂಪಿಸುತ್ತಿಲ್ಲ. ದಲಿತರನ್ನು ಮುಖ್ಯವಾಹಿನಿಗೆ ಕರೆತರುವ ಕೆಲಸ ಆಗುತ್ತಿಲ್ಲ ಎಂದರು.


ಕರ್ನಾಟಕದಲ್ಲಿ ವೈದಿಕಶಾಹಿ ತತ್ವಗಳನ್ನು ಪ್ರಚುರಗೊಳಿಸಲು ಆರ್‌ಎಸ್‌ಎಸ್ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಇದಕ್ಕೆ ರಾಜ್ಯ ಬಿಜೆಪಿ ಸರ್ಕಾರ ಬೆಂಬಲ ನೀಡುತ್ತಿದೆ. ಇದರ ಮೂಲಕ ದಲಿತರನ್ನು ಅವಕಾಶಗಳಿಂದ ದೂರ ಸರಿಯುವಂತೆ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬುದ್ಧ, ಬಸವಣ್ಣ, ಅಂಬೇಡ್ಕರ್ ಆಶಯಗಳನ್ನು ಈಡೇರಿಸಲು ಬಲಿಷ್ಠ ಚಳವಳಿ ಕಟ್ಟಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಸಮಾರೋಪ ಸಮಾರಂಭದಲ್ಲಿ ಸಿಪಿಎಂ ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್, ಮುಖಂಡರಾದ ನಿತ್ಯಾನಂದಸ್ವಾಮಿ, ಮಾರುತಿ ಮಾನ್ಪಡೆ, ಜಿಪಂ ಸದಸ್ಯ ಸುಧಾಕರ್ ಲಾಲ್, ದಲಿತ ಮುಖಂಡ ವೆಂಕಟೇಶ್, ಪಾರ್ವತಮ್ಮ ಸಯ್ಯದ್ ಮುಜೀಬ್, ಬಿ.ಉಮೇಶ್, ರಾಘವೇಂದ್ರ, ನೌಷಾದ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಬೆಲೆ ಏರಿಕೆ ವಿರೋಧಿಸಿ ಜನವಾದಿ ಮಹಿಳೆಯರ ಪ್ರತಿಭಟನೆ

ಬಡತನ ನಿವಾರಿಸುವುದಾಗಿ ಹೇಳಿ ಅಧಿಕಾರ ವಹಿಸಿಕೊಂಡ ಕೇಂದ್ರದ ಯುಪಿಎ ಸರಕಾರ ಬೆಲೆ ಏರಿಕೆಗೆ ಕಡಿವಾಣ ಹಾಕುವಲ್ಲಿ ವಿಫಲವಾಗುವ ಮೂಲಕ ಬಡವರನ್ನೇ ಸಂಪೂರ್ಣವಾಗಿ ಖಾಲಿ ಮಾಡಿಸುವ ಕೆಲಸ ಮಾಡಿಸುತ್ತಿದೆ ಎಂದು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿ ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.



ಮಂಗಳೂರಿನಲ್ಲಿ ಆಗಸ್ಟ್ 10 ರಂದು ಜನವಾಧಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ರಾಷ್ಟ್ರವ್ಯಾಪಿ ನಡೆಸುತ್ತಿರುವ ಪ್ರತಿಭಟನಾ ಪ್ರದರ್ಶನ ಭಾಗವಾಗಿ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು. ಪ್ರದರ್ಶನದ ನಡುವೆ ಸುಮಾರು 30ಕ್ಕೂ ಅಧಿಕ ಮಹಿಳೆಯರು ಜಿಲ್ಲಾಧಿಕಾರಿ ಕಚೇರಿಯ ಗೇಟ್ ತೆರೆದು ಒಳ ನುಗ್ಗಲು ಪ್ರಯತ್ನಿಸಿದರು. ನಗರ ಪೋಲೀಸರು ಅದಕ್ಕೆ ತಡೆಯೊಡ್ಡಿದಾಗ, ಅಲ್ಲಿಯೇ ಪ್ರತಿಭಟನಾ ಘೋಷಣೆಗಳನ್ನು ಕೈಗೊಳ್ಳಲಾಯಿತು. ಬಳಿಕ ಸಂಘಟನೆಯ ಆರೇಳು ಮಂದಿ ನಾಯಕಿಯರು ಸರಕಾರದ ನೀತಿಗಳನ್ನು ಖಂಡಿಸಿ ಮಾತನಾಡಿದರು.

ಸಂಘಟನೆಯ ಜಿಲ್ಲಾ ಅಧ್ಯಕ್ಷೆ ಸುಕನ್ಯಾ ಬೆಳ್ತಂಗಡಿ, ಮಾಜಿ ಅಧ್ಯಕ್ಷೆ ಹೇಮಲತಾ, ಉಪಾಧ್ಯಕ್ಷೆ ಪದ್ಮಾವತಿ ಶೆಟ್ಟಿ, ಕಾರ್ಯದರ್ಶಿ ಸಾಜಿದಾ ಅತ್ತಾವರ, ಕಿರಣ ಪ್ರಭಾ, ಜಯಂತಿ ಬಿ.ಶೆಟ್ಟಿ, ಭಾರತಿ ಬೋಳಾರ ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡಿದರು. ವಿಲಾಸಿನಿ ತೊಕ್ಕೊಟು, ವಾಣಿ ಕೊಂಡಾಣ ಮುಂತಾದವರು ಉಪಸ್ಥಿತರಿದ್ದರು.

★

ಪೋಲೀಸ್ ದೌರ್ಜನ್ಯ ವಿರೋಧಿಸಿ ಬೀದಿ ಬದಿ ವರ್ತಕರಿಂದ ಠಾಣೆಗೆ ಮುತ್ತಿಗೆ:

ಮಂಗಳೂರು ನಗರದ ಸ್ಟೇಟ್‌ಬ್ಯಾಂಕ್ ಬಳಿ ವ್ಯಾಪಾರ ಮಾಡುವ ಮಹಿಳೆ ಸಹಿತ ಮೂವರ ಮೇಲೆ ಹಲ್ಲೆ ಮಾಡಿದ ಟ್ರಾಫಿಕ್ ಎಸ್ಸೈ ಮತ್ತಿತರ ಪೊಲೀಸರ ವಿರುದ್ಧ ಕ್ರಮ ಜರಗಿಸಬೇಕು ಎಂದು ಆಗ್ರಹಿಸಿ ಬೀದಿ ಬದಿ ವ್ಯಾಪಾರಿ ಪರ ಹೋರಾಟ ಸಮಿತಿಯ ನೇತೃತ್ವದಲ್ಲಿ ಸಂಚಾರಿ ಠಾಣೆಯ ಎದುರು ಆಗಸ್ಟ 10 ರಂದು ಧರಣಿ ನಡೆಸಲಾಯ್ತು.

ಪ್ರತಿಭಟನಾ ಧರಣಿಯಲ್ಲಿ ನೂರಕ್ಕೂ ಹೆಚ್ಚು ಬೀದಿ ಬದಿ ವರ್ತಕರು ಭಾಗವಹಿಸಿದ್ದರು. ಬೀದಿ ಬದಿ ವರ್ತಕರಲ್ಲಿ ಹೆಚ್ಚಿನವರು ರಮ್ಜಾನ್ ಉಪವಾಸವನ್ನು ಆಚರಿಸುತ್ತಿರುವುದರಿಂದ ಆಗಸ್ಟ್ ಪ್ರಾರಂಭದಿಂದ ಮಂಗಳೂರು ಮಹಾನಗರ ಪಾಲಿಕೆ ' ಟೈಗರ್ ವಾಹನ ' ಕಾರ್ಯಾಚರಣೆ ನಡೆಸಿರಲಿಲ್ಲ. ಆದಾಗ್ಯೂ ಹಿಂದಿನ ದಿನ ಬಂದರು ಸಂಚಾರಿ ಪೊಲೀಸ್ ಠಾಣೆಯ ಎಸ್ಸೈ ಹಾಗೂ ಸಿಬ್ಬಂದಿ ಮೂವರು ಹಲ್ಲೆ ನಡೆಸಿದ್ದರು.

ಪ್ರತಿಭಟಕಾರರನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಹೋರಾಟ ಸಮಿತಿಯ ಸಂಚಾಲಕ ಸುನಿಲ್ ಕುಮಾರ್ ಬಜಾಲ್, ಜೆಡಿಎಸ್ ಕಾರ್ಪರೇಟರ್ ಅಜೀಜ್ ಕುದ್ರೋಳಿ ಮಾತನಾಡಿದರು. ಪ್ರತಿಭಟನೆಯ ಬಳಿಕ ಸಂಚಾರ ಎಸಿಪಿ, ಇನ್ಸ್‌ಪೆಕ್ಟರುಗಳೇ ಮೊದಲಾದ ಹಿರಿಯ ಪೊಲೀಸ್ ಅಧಿಕಾರಿಗಳ ಸಮ್ಮುಖ ನಡೆದ ಮಾತುಕತೆ ಬಳಿಕ ಪ್ರತಿಭಟನೆಯನ್ನು ಕೊನೆಗೊಳಿಸಲಾಯಿತು. ಇದಕ್ಕೆ ಮೊದಲು ಸಿಐಟಿಯು ಕಚೇರಿಯಿಂದ ಠಾಣೆವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಿತು.

★

ಮಂಗಳೂರಿನಲ್ಲಿ ಗ್ರಾಮೀಣ ಕೃಪಾಂಕ ನೌಕರರ ಸಭೆ

ಗ್ರಾಮೀಣ ಕೃಪಾಂಕ ನೌಕರರು 12 ವರ್ಷ ಸೇವೆ ಸಲ್ಲಿಸಿದ್ದರೂ, ಕೇವಲ 7 ವರ್ಷದ ಸೇವೆಯನ್ನು ಆಧರಿಸಿ ವೇತನ ಹಾಗೂ ಸೇವಾ ಜ್ಯೇಷ್ಠತೆಯನ್ನು ನೀಡಲಾಗುತ್ತಿದೆ. ಅದನ್ನು ಸರಿಪಡಿಸಲು ಕೃಪಾಂಕ ನೌಕರರ ನೇಮಕಾತಿ ಸಂಬಂಧವಾದ ವಿಶೇಷ ನಿಯಮಾವಳಿ 2003ಕ್ಕೆ ಅಗತ್ಯ ತಿದ್ದುಪಡಿ ಮಾಡಬೇಕು ಎಂದು ರಾಜ್ಯ ಕೃಪಾಂಕ ನೌಕರರ ವೇದಿಕೆ ಅಧ್ಯಕ್ಷ ಕೆ.ಎನ್.ಉಮೇಶ್ ಆಗ್ರಹಿಸಿದರು.

ಮಂಗಳೂರು ನಗರದ 'ವಿಕಾಸ'ದಲ್ಲಿ ಆಗಸ್ಟ 14 ರಂದು ನಡೆದ ದ.ಕ. ಮತ್ತು ಉಡುಪಿ ಜಿಲ್ಲಾ ಗ್ರಾಮೀಣ ಕೃಪಾಂಕ ನೌಕರರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಸಭೆಯಲ್ಲಿ ಸಂಘದ ಜಿಲ್ಲಾ ಅಧ್ಯಕ್ಷ ಶಿವರಾಮ ಶೆಟ್ಟಿ, ಕಾರ್ಯದರ್ಶಿ ಶ್ರೀಕುಮಾರ್, ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಮತ್ತಿತರರು ಭಾಗವಹಿಸಿದ್ದರು.

★



ಡಿವೈಎಫ್‌ಐ ನಿಂದ ತೊಕ್ಕೊಟಿನಲ್ಲಿ ಸ್ವಾತಂತ್ರ್ಯ ಸಂರಕ್ಷಣಾ ರ್‍ಯಾಲಿ

ಕೇಂದ್ರ ರಾಜ್ಯ ಸಕಾರಗಳು ಅನುಸರಿಸುತ್ತಿರುವ ಆರ್ಥಿಕ ನೀತಿಗಳಿಂದ ದೇಶದ ನಾಗರಿಕರು ನಿರ್ಗತಿಕರಾಗುತ್ತಿದ್ದಾರೆ; ಕಾರ್ಪರೇಟ್ ಬಂಡವಾಳ ಶಾಹಿಗಳನ್ನು ಬೆಂಬಲಿಸುವ ನೀತಿಗಳು ಭ್ರಷ್ಟಾಚಾರದ ಹೆಚ್ಚಳಕ್ಕೆ ಕಾರಣವಾಗಿದೆ; ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳು ದುರ್ಬಲಗೊಳ್ಳುತ್ತಿವೆ. ಇನ್ನೊಂದೆಡೆ ಕೋಮುವಾದಿ ಶಕ್ತಿಗಳು ಜಾತ್ಯಾತೀತತೆ, ಶಾಂತಿ, ಸೌಹಾರ್ದಗಳಿಗೆ ಅಪಾಯವೊಡ್ಡುತ್ತಿವೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಸಂರಕ್ಷಣಾ ರ್‍ಯಾಲಿಯನ್ನು ಉಳ್ಳಾಲ ವಲಯ ಡಿವೈಎಫ್‌ಐ ತೊಕ್ಕೊಟಿನಲ್ಲಿ ಆಗಸ್ಟ 14 ರಂದು ಹಮ್ಮಿಕೊಂಡಿತ್ತು.



ರ್‍ಯಾಲಿಯನ್ನುದ್ದೇಶಿಸಿ ಡಿವೈಎಫ್‌ಐ ಮಾಜಿ ರಾಜ್ಯಾಧ್ಯಕ್ಷರಾದ ಕೆ.ಎನ್.ಉಮೇಶ್ ಮಾತನಾಡಿದರು. ಡಿವೈಎಫ್‌ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ನ್ಯಾಯವಾದಿ ರಾಮಚಂದ್ರ ಬಬ್ಬುಕಟ್ಟೆ, ತೊಕ್ಕೊಟು ವ್ಯಾಪಾರಿಗಳ ಸಂಘದ ಕಾರ್ಯದರ್ಶಿ ಅರುಣ್ ಕುಮಾರ್ ಅತಿಥಿಗಳಾಗಿ ಭಾಗವಹಿಸಿದ್ದರು. ಉಳ್ಳಾಲ ವಲಯದ ಅಧ್ಯಕ್ಷ ಮಹಾಬಲ ದೆಪ್ಪಲಿಮಾರ್, ಕಾರ್ಯದರ್ಶಿ ಅಶೋಕ್ ಶೆಟ್ಟಿ ಬಬ್ಬುಕಟ್ಟೆ ಮುಂತಾದವರು ರ್‍ಯಾಲಿಯನ್ನು ಸಂಘಟಿಸಿದ್ದರು. ತೊಕ್ಕೊಟು ಒಳಪೇಟೆಯಿಂದ ಯೂನಿಟಿ ಹಾಲ್ ವರೆಗೆ ನಡೆದ ಆಕರ್ಷಕ ರ್‍ಯಾಲಿಯಲ್ಲಿ ಐನೂರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.



★

ಮೂಡಬಿದರೆ, ಗುರುಪುರ, ಉಳ್ಳಾಲಗಳಲ್ಲಿ ಭವಿಷ್ಯ ನಿಧಿ ಪಿಂಚಣಿದಾರರ ಸಮಾವೇಶಗಳು

ಕೇಂದ್ರ ಸರಕಾರ ಭವಿಷ್ಯ ನಿಧಿ ಕಾಯ್ದೆಗೆ ತಿದ್ದುಪಡಿ ತಂದರೂ ಪಿಂಚಣಿದಾರರಿಗೆ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ಈಗ ಕೇವಲ 1.16% ನಿಧಿಯನ್ನು ಕೇಂದ್ರ ಸರ್ಕಾರ ಭವಿಷ್ಯ ನಿಧಿಗೆ ನೀಡುತ್ತಿದೆ. ತೀರಾ ನಗಣ್ಯವೆನ್ನಬಹುದಾದ ನಿವೃತ್ತಿ ಪಿಂಚಣಿಯನ್ನು ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ನಿವೃತ್ತಿ ಕಾರ್ಮಿಕರ ಕನಿಷ್ಟ ಪಿಂಚಣಿಯನ್ನು ರೂ.1500ಕ್ಕೆ ಏರಿಸಬೇಕೆಂದೂ, ಕೇಂದ್ರ ಸರ್ಕಾರ ನೀಡುವ ಭವಿಷ್ಯ ನಿಧಿಯನ್ನು ಶೇಕಡಾ 7ಕ್ಕೆ ಏರಿಸಬೇಕೆಂದೂ ಮೂಡಬಿದರೆ, ಗುರುಪುರ ಮತ್ತು ಉಳ್ಳಾಲಗಳಲ್ಲಿ ನಡೆದ ಭವಿಷ್ಯ ನಿಧಿ ಪಿಂಚಣಿದಾರರ ಸಮಾವೇಶದಲ್ಲಿ ಒತ್ತಾಯಿಸಲಾಯಿತು ಮತ್ತು ನವಂಬರ್ ತಿಂಗಳಲ್ಲಿ ನಡೆಯುವ ಪಾರ್ಲಿಮೆಂಟು ಚಲೋ ಕಾರ್ಯಕ್ರಮದಲ್ಲಿ ಭಾಗವಹಿಸುವುದೆಂದು ನಿರ್ಣಯಿಸಲಾಯಿತು.

ಈ ಮೂರು ಕಡೆಯ ಸಮಾವೇಶಗಳಲ್ಲಿ ದ.ಕ.ಜಿಲ್ಲಾ ಭವಿಷ್ಯ ನಿಧಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಸುಕುಮಾರ್ ಮುಖ್ಯ ಭಾಷಣಕಾರರಾಗಿ ಮಾತನಾಡಿದರು.

ಮೂಡಬಿದರೆಯ ಸಮಾವೇಶದಲ್ಲಿ ಕಾರ್ಮಿಕ ಮುಖಂಡರಾದ ವಸಂತ ಆಚಾರಿ, ರಮಣಿ, ರಾಧಾ ಮೂಡಬಿದ್ರೆ, ಸುಂದರ ಶೆಟ್ಟಿ ಮತ್ತಿತರರು ಭಾಗವಹಿಸಿದ್ದರು. ಗುರುಪುರದಲ್ಲಿ ನಡೆದ ಸಮಾವೇಶದಲ್ಲಿ ಯು.ಬಿ.ಲೋಕಯ್ಯ, ನೋಣಯ್ಯ ಗೌಡ ಭಾಗವಹಿಸಿದ್ದರು. ಕೊಲ್ಯದಲ್ಲಿ ನಡೆದ ಉಳ್ಳಾಲ ವಲಯ ಸಮಾವೇಶದಲ್ಲಿ ಸಂಘದ ಜಿಲ್ಲಾಧ್ಯಕ್ಷ ವಸಂತ ಆಚಾರಿ, ಮುಖಂಡರುಗಳಾದ ಜೆ.ಬಾಲಕೃಷ್ಣ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಯು.ಬಿ.ಲೋಕಯ್ಯ, ಸುಂದರ ಕುಂಪಲ, ಜಯಂತ ನಾಯ್ಕ್, ಪದ್ಮಾವತಿ ಶೆಟ್ಟಿ, ವಿಲಾಸಿನಿ ಮತ್ತಿತರರು ಭಾಗವಹಿಸಿದ್ದರು.

ಎಲ್ಲಾ ಮೂರು ಸಮಾವೇಶಗಳಲ್ಲೂ ಸಭಾಂಗಣ ಮಾಡಿ ಪಿಂಚಣಿದಾರರು ಭಾಗವಹಿಸಿದ್ದು, ಅವರ ಸಮಸ್ಯೆಗಳ ತುರ್ತನ್ನು ಎತ್ತಿ ಹೇಳುವಂತಿತ್ತು. □

ಕನ್ನಡ ವಾರಪತ್ರಿಕೆ

ಜಾಗತಿಕ ಹಣಕಾಸು ಕೋಲಾಹಲ

ಶೋಷಣೆಯನ್ನು ತೀವ್ರಗೊಳಿಸಿ ಲಾಭಗಳನ್ನು ಗರಿಷ್ಟಗೊಳಿಸುವ ಬಂಡವಾಳಶಾಹೀ ತರ್ಕದ ಫಲ


ಆಗಸ್ಟ್ 11, 2011 ರ 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ಸಂಪಾದಕೀಯ

ಈಗ ನಡೆಯುತ್ತಿರುವುದು ಇಷ್ಟು-ಬಂಡವಾಳಶಾಹಿ ಪ್ರಭುತ್ವ ಬೃಹತ್ ಕಾರ್ಪೋರೇಟುಗಳನ್ನು ಪಾರು ಮಾಡುವ ಕ್ರಮಗಳಿಗಾಗಿ ಸಂಪನ್ಮೂಲಗಳನ್ನು ಕ್ರೋಡೀಕರಿಸಿದೆ; ಇದರಿಂದಾಗಿ ಬೃಹತ್ ಪ್ರಮಾಣದಲ್ಲಿ ಸಾರ್ವಭೌಮ ಸಾಲವನ್ನು ಶೇಖರಿಸಿದೆ. ಈ ಸಾಲದ ಹೊರೆಯನ್ನು ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಖರ್ಚುಗಳಲ್ಲಿ ಬೃಹತ್ ಪ್ರಮಾಣದ ಕಡಿತಗಳ ಮೂಲಕ ದುಡಿಯುವ ಜನತೆಯ ಹೆಗಲುಗಳಿಗೆ ದಾಟಿಸಲಾಗುತ್ತಿದೆ. ಇದೀಗ ಬಂಡವಾಳಶಾಹಿಯ ಶುದ್ಧ ಮತ್ತು ಸರಳ ತರ್ಕ– ಶೋಷಣೆಯನ್ನು ತೀವ್ರಗೊಳಿಸಿ ಲಾಭಗಳನ್ನು ಗರಿಷ್ಟಗೊಳಿಸಿ! ಭಾರತದಲ್ಲಿರುವ ನಮಗೆ ಇದರಿಂದ ಸರಿಯಾದ ಪಾಠಗಳನ್ನು ಕಲಿಯುವುದು ಬಹಳ ಮಹತ್ವದ್ದಾಗುತ್ತದೆ. ಈಗಿನ ಜಾಗತಿಕ ಹಣಕಾಸು ಕೋಲಾಹಲ ಭಾರತೀಯ ಆರ್ಥಿಕವನ್ನು ಮತ್ತು ಜನತೆಯನ್ನು ವಿಧ್ವಂಸಗೊಳಿಸದಂತೆ ರಕ್ಷಿಸಬೇಕಾದರೆ ಭಾರತ 'ಮುಂದಿನ ಪೀಳಿಗೆಯ' ಹಣಕಾಸು ಸುಧಾರಣೆಗಳತ್ತ ಧಾವಿಸುವ ಅವಿವೇಕತನಕ್ಕೆ ಇಳಿಯಬಾರದು.

ವಿಶ್ವದ ಹಣಕಾಸು ಮಾರುಕಟ್ಟೆಗಳನ್ನು ಭಾರೀ ಕೋಲಾಹಲ ಆವರಿಸಿದೆ. ಇದು, ಮಾನವನಿಂದ ಮಾನವನ, ದೇಶದಿಂದ ದೇಶದ ಶೋಷಣೆಯ ಮೇಲೆ ನಿಂತಿರುವ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆ ಎಂದೂ ಬಿಕ್ಕಟ್ಟುಗಳಿಂದ ಮುಕ್ತವಾಗಿರಲಾರದು ಎಂಬುದನ್ನು ಮತ್ತೊಮ್ಮೆ ತೀಕ್ಷ್ಣವಾಗಿಯೇ ಎತ್ತಿ ತೋರಿದೆ. ಆದರೆ, ನಾವು ಹಿಂದೆ ಹಲವು ಬಾರಿ ಹೇಳಿರುವಂತೆ, ಇಂತಹ ಬಿಕ್ಕಟ್ಟುಗಳಿಂದ, ಅವು ಎಷ್ಟೇ ತೀಕ್ಷ್ಣವಾಗಿರಲಿ, ಬಂಡವಾಳಶಾಹಿ ತಂತಾನೇ ಕುಸಿಯುವುದಿಲ್ಲ. ಅದನ್ನು ಕಿತ್ತೆಸೆಯಬೇಕಾಗುತ್ತದೆ. ಇದಕ್ಕೆ ಕಾರ್ಮಿಕ ವರ್ಗದ ಶಕ್ತಿಯ ನೇತೃತ್ವ ಬೇಕಾಗುತ್ತದೆ- ಬಂಡವಾಳಶಾಹಿಯನ್ನು ಕಿತ್ತೆಸೆಯುವ ಕ್ರಾಂತಿಕಾರಿ ಪರಿವರ್ತನೆಗೆ, ವರ್ಗಹೋರಾಟವನ್ನು ತೀಕ್ಷ್ಣಗೊಳಿಸುವ ಮೂಲಕ ಎಲ್ಲ ಶೋಷಿತ ವರ್ಗಗಳಿಗೆ ನೇತೃತ್ವ ನೀಡುವ ಕಾರ್ಮಿಕ ವರ್ಗದ ಶಕ್ತಿ ಬೇಕಾಗುತ್ತದೆ. ಈ ನಡುವೆ, ಬಂಡವಾಳಶಾಹಿ ತಾನೇ ಸೃಷ್ಟಿಸಿದ ಈ ಬಿಕ್ಕಟ್ಟಿನಿಂದ ಹೊರಬರಲು ಶೋಷಣೆಯನ್ನು ಇನ್ನಷ್ಟು ತೀವ್ರಗೊಳಿಸುತ್ತದೆ. ಈಗ ನಡೆಯುತ್ತಿರುವುದು ಇದೇ.

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ದೀರ್ಘಾವಧಿ ಸಾರ್ವಭೌಮ ಸಾಲ ಅರ್ಹತೆಯ ಮಟ್ಟವನ್ನು ಸ್ಟಾಂಡರ್ಡ್ ಅಂಡ್ ಪೂರ್ ಸಂಸ್ಥೆ 'ಎಎಎ' ಮಟ್ಟದಿಂದ ಕೆಳಗಿಳಿಸಿತು. ಹೀಗೆ ಹಿಂದೆಂದೂ ನಡೆದಿರಲಿಲ್ಲ. ಇದರ ಪರಿಣಾಮವಾಗಿ ವಿಶ್ವಾದ್ಯಂತ ಶೇರು ವಿನಿಮಯ ಕೇಂದ್ರಗಳು ಗಿರಕಿ ಹೊಡೆಯುವಂತಾಯಿತು. ಅಮೆರಿಕಾದಲ್ಲೇ, ಡೌ ಜೋನ್ಸ್ ಉದ್ದಿಮೆ ಸರಾಸರಿ ಸೂಚ್ಯಂಕ 634 ಪಾಯಿಂಟುಗಳಷ್ಟು, ಅಂದರೆ 5.6% ದಷ್ಟು ಬಿದ್ದಿತು. ಟೋಕಿಯೋದಲ್ಲಿ ನಿಕ್ಕಿ ಸೂಚ್ಯಂಕ 3.7%ದಷ್ಟು, ದಕ್ಷಿಣ ಕೊರಿಯಾದ ಸೋಲ್‌ನಲ್ಲಿ ಕೋಸ್ಪಿ ಸೂಚ್ಯಂಕ 6.2%ದಷ್ಟು ಬಿದ್ದವು. ಆಸ್ಟ್ರೇಲಿಯಾದಲ್ಲಿ ಈ ಬೀಳಿಕೆ 2.9%ವಾದರೆ, ಜರ್ಮನಿಯಲ್ಲಿ ಡಾಕ್ಸ್ ಸೂಚ್ಯಂಕ 5% ಇಳಿಯಿತು. ಈ ಮೂಲಕ ಈ ಮೇ ತಿಂಗಳಿಂದ ಅದು 21% ಕಳಕೊಂಡಂತಾಗಿದೆ. ಇವೆಲ್ಲವುಗಳ ಪ್ರತಿಫಲನ ವಿಶ್ವದ ಪ್ರಮುಖ ಬ್ಯಾಂಕುಗಳ ಶೇರು ಬೆಲೆಗಳಲ್ಲೂ ಕಂಡುಬಂತು. ಅವುಗಳ ಬೆಲೆಗಳಲ್ಲಿ ಅತಿ ದೊಡ್ಡ ಇಳಿಕೆ ಕಾಣಬಂದಿದೆ. ಬ್ಯಾಂಕ್ ಆಫ್ ಅಮೆರಿಕಾದ ಶೇರುಗಳ ಬೆಲೆ 20% ಬಿದ್ದಿತು, ಸಿಟಿ ಗ್ರೂಪಿನದ್ದು 16%, ಮಾರ್ಗನ್ ಸ್ಟಾನ್ಲಿಯದ್ದು 14%, ಜೆ ಪಿ ಮಾರ್ಗನ್‌ನದ್ದು 14% ಮತ್ತು ಗೋಲ್ಡ್ಮನ್ ಸ್ಯಾಕ್ಸ್‌ನದ್ದು 6% ಬಿದ್ದವು. ಸ್ಟಾಂಡರ್ಡ್ ಅಂಡ್ ಪೂರ್‌ನ 500 ಶೇರುಗಳ ಸೂಚ್ಯಂಕ ಕಳೆದ ಮೂರು ವಾರಗಳಲ್ಲಿ 16.8% ಮೌಲ್ಯ ಕಳಕೊಂಡಿದೆ. ಕೆಲವು ಶೇರು ವಿನಿಮಯ ಕೇಂದ್ರಗಳಲ್ಲಿ, ನಮ್ಮ ಶೇರು ಸೂಚ್ಯಂಕದಲ್ಲಿಯೂ ಆಮೇಲೆ ಸ್ವಲ್ಪ ಚೇತರಿಕೆ ಕಂಡು ಬಂದಿದೆ. ಆದರೆ ಇದು ಕೂಡ ಕ್ಷಣಿಕ, ಏನೇ ಆಗಲಿ, ಈ ಏರಿಳಿಕೆಗಳೇ ಪ್ರಸಕ್ತ ಕೋಲಾಹಲದ ಪ್ರತಿಫಲನ ತಾನೇ?

ಈ ಬೆಳವಣಿಗೆಗಳು ಎಲ್ಲೆಡೆ ಗಾಬರಿ ಉಂಟು ಮಾಡಿವೆ. 'ಲಂಡನ್ ಇಕನಾಮಿಸ್ಟ್' ಪತ್ರಿಕೆ, ಅಮೆರಿಕಾ ನೇತೃತ್ವದಲ್ಲಿ ದ್ವಿಗುಣ ಇಳಿಕೆಯ ಜಾಗತಿಕ ಹಿಂಜರಿತ ಬರಲಿದೆ ಎಂದು ಭವಿಷ್ಯ ನುಡಿದಿದೆ. ಕಳೆದೊಂದು ವಾರದಲ್ಲೇ ಹೂಡಿಕೆದಾರರ ಸಂಪತ್ತಿನಲ್ಲಿ 2.5 ಟ್ರಿಲಿಯನ್(ಲಕ್ಷ ಕೋಟಿ) ಡಾಲರ್ ನಿರ್ನಾಮವಾಗಿದೆ. ಭಾರತದಲ್ಲಿ ಶೇರು ಸೂಚ್ಯಂಕ ಕುಸಿತದಿಂದ ಕಳೆದ ನಾಲ್ಕು ವ್ಯಾಪಾರೀ ಅವಧಿಗಳಲ್ಲೇ 4 ಲಕ್ಷ ಕೋಟಿ ರೂ.ಗಳು ಮಾಯವಾಗಿವೆ. ಯುರೋವಲಯದಲ್ಲಿ ಏಕಕಾಲಕ್ಕೆ ಹಲವೆಡೆ ಕಾಣಿಸಿಕೊಂಡ ಸಾರ್ವಭೌಮ ಸಾಲ ಬಿಕ್ಕಟ್ಟಿನಿಂದಾಗಿ ಗ್ರೀಸ್, ಐರ್ಲೆಂಡ್ ಮತ್ತು ಪೋರ್ತುಗಾಲ್ ದಿವಾಳಿಯ ಅಂಚಿನಲ್ಲಿ ಬಂದು



ನಿಂತವು, ಅವನ್ನು ಭಾರೀ ಪ್ಯಾಕೇಜುಗಳ ಮೇಲೆ ಪಾರು ಮಾಡಲಾಗಿದೆ. ಈಗ ಈ ಬಿಕ್ಕಟ್ಟಿನ ಬೆದರಿಕೆ ಸ್ಪೇನ್ ಮತ್ತು ಇಟೆಲಿಯನ್ನು ಬಾಧಿಸುತ್ತಿದೆ. ಇದು ಇಲ್ಲಿಗೇ ನಿಲ್ಲುವಂತದ್ದೂ ಅಲ್ಲ.

ಸರಕಾರೀ ದಿವಾಳಿಯಾಗಿಬಿಟ್ಟ ಕಾರ್ಪೊರೇಟ್ ದಿವಾಳಿಗಳು

ಆದರೆ ಈ ಬೆಳವಣಿಗೆಗಳನ್ನು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಒಂದು ಹೊಸ ಘಟ್ಟ ಎಂದು ವರ್ಣಿಸುವುದು ತಪ್ಪಾಗುತ್ತದೆ. ಒಂದರ್ಥದಲ್ಲಿ ಇದು 2007ರಲ್ಲಿ ಆರಂಭವಾಗಿ ಒಂದು ಹಿಂಜರಿತವನ್ನು ತಂದ ಹಣಕಾಸು ಬಿಕ್ಕಟ್ಟಿನ ಮುಂದುವರಿಕೆಯೇ ಆಗಿದೆ. 2007ರಲ್ಲಿ ಆರಂಭವಾದ ಆ ಬಿಕ್ಕಟ್ಟನ್ನು ಮೀರಿ ನಿಲ್ಲಲು ಜಾಗತಿಕ ಬಂಡವಾಳಶಾಹಿ ವರ್ತಿಸಿದ ರೀತಿಯನ್ನು ನೋಡಿದರೆ, ಇದು ನಿರೀಕ್ಷಿತವೇ.

ವಾಸ್ತವವಾಗಿ, ಹಣಕಾಸು ಕುಸಿತವನ್ನು ತಂದ ಆ ಕಾರ್ಪೊರೇಟುಗಳನ್ನೇ ಪಾರು ಮಾಡಲು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಬೃಹತ್ ಪಾರು(ಬೇಲ್ ಔಟ್) ಯೋಜನೆಗಳನ್ನು ಕೈಗೆತ್ತಿಕೊಂಡ ಅಭಿವೃದ್ಧಿ ಹೊಂದಿದ ದೇಶಗಳು ಈ ಮೂಲಕ ತಮ್ಮ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ವನ್ನೂ ಮೀರಿ ಅಪಾರ ಸಾಲವನ್ನು ಮಾಡಿದವು. ಜಾಗತಿಕ ಬಂಡವಾಳಶಾಹಿ ಕಾರ್ಪೊರೇಟ್ ದೀವಾಳಿಗಳನ್ನು ಸಾರ್ವಭೌಮ ದೀವಾಳಿಗಳಾಗಿ ಪರಿವರ್ತಿಸಿತು. ಇದು ಬಿಕ್ಕಟ್ಟನ್ನು ಇನ್ನಷ್ಟು ತೀವ್ರಗೊಳಿಸಿ ವಿಶ್ವ ಆರ್ಥಿಕವನ್ನು ಇಂದು ಅನಿಶ್ಚಿತತೆಯ ಸ್ಥಿತಿಗೆ ತಳ್ಳಿದೆ.

ಅಮೆರಿಕನ್ ಸರಕಾರ ತನ್ನ ಬೇಲ್ ಔಟ್ ಕಾರ್ಯಕ್ರಮಗಳ ಲೆಕ್ಕ ಪರಿಶೋಧನೆ ನಡೆಸಲೆಂದು ನಿರ್ಮಿಸಿದ ಹಣಕಾಸು ಪಾರು ಕಾರ್ಯಕ್ರಮಗಳ ಸ್ಪೆಶಲ್ ಇನ್ಸ್‌ಪೆಕ್ಟರ್ ಜನರಲ್ ಕಚೇರಿ ಅಮೆರಿಕದ ಕಾಂಗ್ರೆಸ್ ಸದನದ ಮೇಲುಸ್ತುವಾರಿ ಸಮಿತಿಗೆ ಸಲ್ಲಿಸಿದ ಸಾಕ್ಷ್ಯದಲ್ಲಿ ಹೀಗಂದಿದೆ: "2007ರಲ್ಲಿ ಹಣಕಾಸು ಬಿಕ್ಕಟ್ಟು ಕಂಡುಬಂದಂದಿನಿಂದ ಒಕ್ಕೂಟ ಸರಕಾರ ವಿವಿಧ ಸಂಸ್ಥೆಗಳ ಮೂಲಕ ಒಟ್ಟಾರೆಯಾಗಿ ಆರ್ಥಿಕಕ್ಕೆ ಮತ್ತು ಹಣಕಾಸು ವ್ಯವಸ್ಥೆಗೆ ಬೆಂಬಲ ನೀಡಲೆಂದು ರೂಪಿಸಿದ ಹತ್ತಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಒಕ್ಕೂಟ ಸರಕಾರ ಕೊಟ್ಟಿರುವ ಒಟ್ಟು ಬೆಂಬಲದ ಮೊತ್ತ 23.7 ಟ್ರಿಲಿಯನ್(ಲಕ್ಷ ಕೋಟಿ) ಡಾಲರ್ ತಲುಪ ಬಹುದು." ಅಮೆರಿಕಾದ ಜಿಡಿಪಿ(ಒಟ್ಟು ಆಂತರಿಕ ಉತ್ಪನ್ನ) 14 ಟ್ರಿಲಿಯನ್‌ಗಿಂತ ತುಸು ಹೆಚ್ಚು ಎಂಬುದರೊಡನೆ ಇದನ್ನು ಹೋಲಿಸಿ ನೋಡಿ. ಆದರೆ ಅಮೆರಿಕಾದ ಖಜಾನೆ ವಕ್ತಾರ ಈ ಅಂಕಿ-ಅಂಶಗಳ ಸತ್ಯಾಸತ್ಯತೆಯನ್ನು ನಿರಾಕರಿಸುತ್ತಾರೆ.

ಸಾಲಮಿತಿ ಏರಿಕೆಯ ರಾಜಕೀಯ

ನಿಜ ಸಂಗತಿಯೆಂದರೆ, ಈ ವರ್ಷದ ಮೇ 16ರ ವೇಳೆಗೆ ಅಮೆರಿಕಾರ ಒಟ್ಟು ಸಾಲದ ಮಿತಿ 14.3 ಟ್ರಿಲಿಯನ್ ಡಾಲರ್ ಎಂದು ನಿಗದಿ ಮಾಡಲಾಗಿತ್ತು. ಅಮೆರಿಕಾದಲ್ಲಿ ಹಳೆಯ ಕಾಲದ (1917ರಲ್ಲಿ ಅಂಗೀಕರಿಸಿದ) ಒಂದು ಕಾನೂನು ಸಾಲದ ಮೊತ್ತ ಎಷ್ಟಿರಬೇಕೆಂದು ಮಿತಿ ಹಾಕುತ್ತದೆ. ಯುರೋಪಿನಲ್ಲಿ ಅಥವ ಭಾರತದಲ್ಲಿ ಹೀಗಿಲ್ಲ; ಇಲ್ಲಿ ಹಣಕಾಸು ಕೊರತೆಯ(ಇದು ಸಾಲಕ್ಕಿಂತ ಭಿನ್ನ) ಪ್ರಮಾಣ ಜಿಡಿಪಿಯ ಒಂದು ನಿರ್ದಿಷ್ಟ ಶೇಕಡಾ ಎಂದು ನಿಗದಿಯಾಗಿದೆ. ಅಮೆರಿಕಾದ ಇತಿಹಾಸದಲ್ಲಿ ಒಟ್ಟು ಮೊತ್ತದ ರೂಪದಲ್ಲಿ ಹಾಕುವ ಈ ಮಿತಿಯನ್ನು ಕಾಲಕಾಲಕ್ಕೆ ಹೆಚ್ಚಿಸಲಾಗಿದೆ. ಪ್ರಸಕ್ತ ಸಾಲ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಇದನ್ನು ಸಂಪ್ರದಾಯದಂತೆ ಹೆಚ್ಚಿಸಬಹುದೆಂಬ ನಿರೀಕ್ಷೆಯಿತ್ತು. ಆದರೆ ಹಾಗಾಲಿಲ್ಲ.

ಈ ಮಿತಿಯನ್ನು ಏರಿಸಲು ರಿಪಬ್ಲಿಕನ್ ಪಕ್ಷದ ಸದಸ್ಯರ ಒಪ್ಪಿಗೆ ಬೇಕಾಗಿತ್ತು, ಅದಕ್ಕೆ ಅವರು ತಕ್ಕ ಬೆಲೆ ಕೇಳುತ್ತಿದ್ದರು. ಜಾರ್ಜ್ ಬುಶ್ ಯುಗದಲ್ಲಿ ಆರಂಭವಾದ ಸಿರಿವಂತರ ತೆರಿಗೆ ಪ್ರಯೋಜನಗಳು ಮುಂದುವರೆಯಬೇಕು ಎಂದು ಆಗ್ರಹಿಸುವುದಿಲ್ಲದೆ, ಬಡವರಿಗೆ ಮತ್ತು ಅಗತ್ಯವಿರುವವರಿಗೆ ಪ್ರಯೋಜನವಾಗುವ ಮೆಡಿಕೇರ್(ಆರೋಗ್ಯ ಪಾಲನೆ)ನಂತಹ ಕ್ರಮಗಳಿಗೆ ಮಾಡುವ ಖರ್ಚುಗಳಲ್ಲಿ ತೀವ್ರ ಕಡಿತ ತರುವುದಾದರೆ ಮಾತ್ರವೇ ಸಾಲ ಮಿತಿ ಏರಿಸಲು ಒಪ್ಪಲು ಸಾಧ್ಯ ಎಂಬ ಶರತ್ತನ್ನು ಹಾಕಿದರು.

ಗ್ರೀಸಿನಂತಹ ಯುರೋವಲಯದ ದೇಶಗಳಿಗೂ ಐಎಂಎಫ್ ಮತ್ತು ಯುರೋಪಿಯನ್ ಒಕ್ಕೂಟ ಕೊಡುವುದಾಗಿ ಹೇಳಿದ ಸಾರ್ವಭೌಮ ಪಾರು ಯೋಜನೆಗಳ ಹಿಂದಿರುವ ತರ್ಕವೂ ಇಂತದ್ದೇ. ಈ ದೇಶಗಳು ಖರ್ಚುಗಳಲ್ಲಿ ಕಡಿತ ತರಲು ಬೃಹತ್ ಪ್ರಮಾಣದಲ್ಲಿ 'ಮಿತವ್ಯಯ ಕ್ರಮಗಳನ್ನು' ಕೈಗೊಳ್ಳಬೇಕಾಗಿತ್ತು. ಇದು ದುಡಿಯುವ ಜನಗಳ ಮೇಲೆ ಅಭೂತಪೂರ್ವ ಹೊರೆಗಳನ್ನು ಹೇರಿದೆ. ಅವರ ಸಂಬಳ ಸೇರಿದಂತೆ ಹಲವಾರು ಸೌಲಭ್ಯಗಳಲ್ಲಿ ತೀವ್ರ ಕಡಿತ ಉಂಟಾಗಿದೆ. ಕಳೆದೆರಡು ವರ್ಷಗಳಲ್ಲಿ ಗ್ರೀಸಿನಲ್ಲಿ ಜನತೆಯ ಪ್ರತಿಭಟನೆಗಳಲ್ಲಿ 17 ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಗಳು ನಡೆದಿವೆ. ಯುರೋವಲಯದ ಇತರ ದೇಶಗಳನ್ನು ಬಿಕ್ಕಟ್ಟಿನಿಂದ ಹೊರಗೆಳೆಯಬಲ್ಲ ಯುರೋಪಿಯನ್ ಒಕ್ಕೂಟದ ಶಕ್ತಿಗೂಡು ಎನಿಸಿಕೊಂಡ ಜರ್ಮನಿ ಕೂಡ ಆರ್ಥಿಕ ನಿಧಾನಗತಿಯ ಲಕ್ಷಣಗಳನ್ನು ತೋರುತ್ತಿದೆ. ಅದರ ಉತ್ಪಾದನಾ ಚಟುವಟಿಕೆಯ ಸೂಚ್ಯಂಕ ಜುಲೈ ತಿಂಗಳಲ್ಲಿ 52ಕ್ಕಿಳಿದಿದೆ. ಇದು ಅಕ್ಟೋಬರ್ 2009ರ ನಂತರದ ಅತ್ಯಂತ ಕಡಿಮೆ ಮಟ್ಟ. ಸತತ ಮೂರನೇ ತಿಂಗಳು ಈ ಸೂಚ್ಯಂಕದಲ್ಲಿ ಇಳಿ

ಪುಟ 10ಕ


ಪ್ರಧಾನಿಗಳ ದೀರ್ಘ ಹೇಳಿಕೆ ಎಂಬ ಕಸರತ್ತಿನಿಂದ ಸಹಜವಾಗಿಯೇ ಹೆಚ್ಚೇನು ಪ್ರಯೋಜನವಾಗಲಿಲ್ಲ. ಲೋಕಸಭೆಯಲ್ಲಿ ಪ್ರಧಾನಿಗಳ ಹೇಳಿಕೆಯ ಮೇಲಿನ ಚರ್ಚೆ ಅಕ್ಷರಶಃ ಪಿಸುಮಾತಿನಲ್ಲೇ ಮುಕ್ತಾಯಗೊಂಡಿತು, ಪ್ರಧಾನಮಂತ್ರಿಗಳು ಬೇಡ, ಗೃಹಮಂತ್ರಿಗಳು ಉತ್ತರ ಕೊಡಲಿ ಎಂದು ಬಿಜೆಪಿ ಒಪ್ಪಿಕೊಂಡದ್ದು, ಸಹಜವಾಗಿಯೇ ಬಿಜೆಪಿ ಮತ್ತು ಕಾಂಗ್ರೆಸ್ ಈ ವಿಷಯದಲ್ಲೂ ಏನೋ ಒಪ್ಪಂದಕ್ಕೆ ಬಂದಿದ್ದಾರೆಯೇ ಎಂಬ ಪ್ರಶ್ನೆಗಳನ್ನು ಎತ್ತಿದೆ. ಭ್ರಷ್ಟಾಚಾರದ ಪ್ರಶ್ನೆಯ ಮೇಲೆ ಯಾವುದೇ ರಾಜಿಗೆ ಒಪ್ಪುವುದು ಸಾಧ್ಯವಿಲ್ಲ. ಕರಡು ಮಸೂದೆಯ ಮೇಲೆ ಚರ್ಚೆ ನಡೆದಾಗ ಒಂದು ಪರಿಣಾಮಕಾರಿ ಲೋಕಪಾಲ ವ್ಯವಸ್ಥೆಗಾಗಿ ಹೋರಾಟವನ್ನು ಸಂಸತ್ತಿನೊಳಗೆ ನಡೆಸಲಾಗುವುದು. ಅದರೊಂದಿಗೇ, ಒಂದು ಪರಿಣಾಮಕಾರಿ ಲೋಕಪಾಲ ವ್ಯವಸ್ಥೆಗಾಗಿ ಸರಕಾರದ ಮೇಲೆ ಜನತೆಯ ಒತ್ತಡವನ್ನು ಹಾಕಲಿಕ್ಕಾಗಿ ಜನತೆಯನ್ನು ಹೆಚ್ಚೆಚ್ಚು ಪ್ರಮಾಣದಲ್ಲಿ ಅಣಿನೆರೆಸಲಾಗುವುದು.

ಜನಗಳ ಪ್ರತಿಭಟನೆಗಳು ನಿರಾಕರಿಸಲಾಗದ ಒಂದು ಹಕ್ಕು

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಆಗಸ್ಟ್ 18 ರ ಸಂಪಾದಕೀಯ

ಕೊನೆಗೂ ಪ್ರಧಾನ ಮಂತ್ರಿಗಳು ಅಣ್ಣಾ ಹಝಾರೆಯವರ ಬಂಧನದ ಕುರಿತು ಸಂಸತ್ತಿನ ಎರಡೂ ಸದನಗಳಲ್ಲಿ ಒಂದು ಹೇಳಿಕೆ ನೀಡಲೇಬೇಕಾಗಿ ಬಂತು. ಮೊದಲು ಇದನ್ನು ನಿರಾಕರಿಸಲಾಗಿತ್ತು. ಆಗ ಕೆಲವು ಪ್ರತಿಪಕ್ಷಗಳು ಬೊಫೋರ್ಸ್ ಭ್ರಷ್ಟಾಚಾರ-ವಿರೋಧಿ ಚಳುವಳಿಯ ಸಮಯದಲ್ಲಿ ಮಾಡಿದಂತೆ ಸಂಸತ್ತನ್ನು ಬಹಿಷ್ಕರಿಸಬಾರದೇಕೆ ಎಂದು ಯೋಚಿಸುತ್ತಿದ್ದರು. ಏನೋ ದಯೆ, ಈ ಅಭಿಪ್ರಾಯದ ಕೈಮೇಲಾಗಲಿಲ್ಲ. ಇಲ್ಲವಾದರೆ, ಸರಕಾರಕ್ಕೆ ಸಂಸತ್ತಿನ ಮುಂದೆ ಉಳಿದಿದ್ದ ಎಲ್ಲ ಶಾಸನಗಳನ್ನು ಯಾವುದೇ ವಿರೋಧವಿಲ್ಲದೆ ಪಾಸು ಮಾಡಿಸಿಕೊಳ್ಳಲು ಮುಕ್ತ ಅವಕಾಶ ಕೊಟ್ಟಂತಾಗುತ್ತಿತ್ತು, ಜತೆಗೆ ಪ್ರಧಾನಿಗಳು ಹೇಳಿಕೆ ನೀಡಬೇಕಾದ ಒತ್ತಡವೂ ಸಡಿಲವಾಗುತ್ತಿತ್ತು.

ಪ್ರಧಾನಿಗಳ ದೀರ್ಘ ಹೇಳಿಕೆ, ಈ ಎಲ್ಲ ಬೆಳವಣಿಗೆಗಳು ಪ್ರಥಮತಃ ಕಾನೂನು ವ್ಯವಸ್ಥೆ ಸಂಸ್ಥೆಗಳ ಮತ್ತು ದಿಲ್ಲಿ ಪೋಲೀಸರ ಜವಾಬ್ದಾರಿ ಎಂದು ವಿವರಿಸುವ ಒಂದು ಪರಿಶ್ರಮದ ಕಸರತ್ತೇ ಆಗಿತ್ತು, ಸಹಜವಾಗಿಯೇ, ಇದರಿಂದ ಹೆಚ್ಚೇನು ಪ್ರಯೋಜನವಾಗಲಿಲ್ಲ. ಅಣ್ಣಾ ಹಝಾರೆ ಮತ್ತು ಅವರ ಸಹಯೋಗಿಗಳನ್ನು ಬಹಳ ನಾಜೂಕಿನಿಂದ ಕಂಡದ್ದು ಇದೇ ಸರಕಾರ ತಾನೇ! ಒಂದು ಜಂಟಿ ಕರಡು ಸಮಿತಿಯನ್ನು ಅಧಿಕೃತವಾಗಿ ರಚಿಸಲಾಯಿತು. ನಂತರ ಅನಾವರಣಗೊಂಡ ಬೆಳವಣಿಗೆಗಳನ್ನು ಇಡೀ ದೇಶವೇ ಕಂಡಿದೆ. ರಾಂದೇವ್ ಒಂದು ಖಾಸಗಿ ಜೆಟ್‌ನಲ್ಲಿ ಬಂದಿಳಿದಾಗ ಆತನನ್ನು ಅತ್ಯಾದರದಿಂದ ಬರಮಾಡಿಕೊಳ್ಳಲು ನಾಲ್ಕು ಅತ್ಯಂತ ಹಿರಿಯ ಮಂತ್ರಿಗಳನ್ನು ಕಳಿಸಿದ ಸರಕಾರ ಇದೇ ಅಲ್ಲವೇ?



ಜನತೆಯ ಸಾರ್ವಭೌಮತೆ

ಈಗ ಪ್ರಧಾನ ಮಂತ್ರಿಗಳು ಸಂಸತ್ತಿನ ಪಾರಮ್ಯದ ಬಗ್ಗೆ ಮಾತಾಡುತ್ತಿದ್ದಾರೆ, ನಮ್ಮ ಸಂವಿಧಾನಿಕ ವ್ಯವಸ್ಥೆಯಲ್ಲಿ ಸಂಸತ್ತು ಮಾತ್ರವೇ ಶಾಸನಗಳನ್ನು ರಚಿಸಲು ಸಾಧ್ಯ ಎನ್ನುತ್ತಿದ್ದಾರೆ. ಇದನ್ನು ಎಂದೂ ಯಾರೂ ಗಂಭೀರವಾಗಿ ಪ್ರಶ್ನಿಸಿಯೇ ಇಲ್ಲ. ನಮ್ಮ ಸಂವಿಧಾನದ ಕೇಂದ್ರ ಬಿಂದುವೆಂದರೆ ಜನತೆಯ ಸಾರ್ವಭೌಮತೆ, ಅದನ್ನು ಜನತೆ ತಾವು ಸಂಸತ್ತಿಗೆ ಚುನಾಯಿಸಿದ ಪ್ರತಿನಿಧಿಗಳ ಮೂಲಕ ಚಲಾಯಿಸುತ್ತಾರೆ, ಸರಕಾರ ಇವರಿಗೆ ಲೆಕ್ಕ ಕೊಡಬೇಕಾಗಿದೆ, ಉತ್ತರದಾಯಿಯಾಗಿದೆ.

ಆದರೆ ಇದರಿಂದ, ಪರಿಣಾಮಕಾರಿ ಶಾಸನಗಳನ್ನು ಅಂಗೀಕರಿಸುವಂತೆ ಜನರನ್ನು ಅಣಿನೆರೆಸಿ ಒತ್ತಡ ಹಾಕುವ ವ್ಯಕ್ತಿಗಳು ಅಥವ ಗುಂಪುಗಳ ಹಕ್ಕಿಗೇನೂ ಚ್ಯುತಿ ಬರುವುದಿಲ್ಲ. ಈ ಹಿಂದೆ ಹಲವು ಬಾರಿ ಇದು ನಡೆದಿದೆ, ಹಲವು ಸಂದರ್ಭಗಳಲ್ಲಿ ಸಂಸತ್ತು ಅಂಗೀಕರಿಸಿದ ಟಾಡಾ ಮುಂತಾದ ಕಾನೂನುಗಳನ್ನು ಬೃಹತ್ ಪ್ರಮಾಣದಲ್ಲಿ ಜನರನ್ನು ಅಣಿನೆರೆಸುವ ಮೂಲಕ ವಿರೋಧಿಸಲಾಗಿದೆ. ಯಾವುದೇ ಅರ್ಥಪೂರ್ಣ ಪ್ರಜಾಪ್ರಭುತ್ವ ನಿರಾಕರಿಸಲಾಗದ ಒಂದು ಹಕ್ಕು ಇದು.

ಇದೆಂತಾ ಯುಪಿಎ ಎಚ್ಚರಿಕೆ!

ಕುತೂಹಲಕಾರಿ ಸಂಗತಿಯೆಂದರೆ, ಪ್ರಧಾನ ಮಂತ್ರಿಗಳು ತನ್ನ ಹೇಳಿಕೆಯ ಕೊನೆಗೆ ಬರುವಾಗ ಭಾರತ ಒಂದು ಮೂಡಿ ಬರುತ್ತಿರುವ ಆರ್ಥಿಕ ಎನ್ನುತ್ತ "ಜಾಗತಿಕ ರಂಗದಲ್ಲಿ ನಾವೀಗ ಮಹತ್ವದ ಪಾತ್ರಧಾರಿಗಳಲ್ಲಿ ಒಬ್ಬರಾಗಿ ಮೂಡಿ ಬರುತ್ತಿದ್ದೇವೆ. ಗೌರವಶಾಲಿ ದೇಶಗಳ ಸಾಲಿನಲ್ಲಿ ಭಾರತ ತನ್ನ ನಿಜವಾದ ಸ್ಥಾನ ಪಡೆಯಬಾರದು ಎಂದು ಬಯಸುವ ಶಕ್ತಿಗಳು ಬಹಳಷ್ಟಿವೆ. ನಾವು ಅವರ ಆಟದಲ್ಲಿ ಸಿಲುಕಿಕೊಳ್ಳಬಾರದು. ನಮ್ಮ ಆರ್ಥಿಕ ಪ್ರಗತಿಯನ್ನು ಆಂತರಿಕ ಭಿನ್ನಮತಗಳು ಬೇರೆಡೆಗೆ ತಿರುಗಿಸುವಂತಹ ಒಂದು ವಾತಾವರಣವನ್ನು ನಾವು ಸೃಷ್ಟಿಸಬಾರದು. ನಾವು 'ಆಮ್ ಆದ್ಮಿ'ಯ ಉದ್ಧಾರಕ್ಕಾಗಿ ಆರ್ಥಿಕ ಪ್ರಗತಿಯನ್ನು ಮುಂದೊತ್ತುವ ಅಗತ್ಯದ ಮೇಲೆಯೇ ನಮ್ಮ ಗಮನವನ್ನು ಕೇಂದ್ರೀಕರಿಸಿಡಬೇಕು" ಎಂದು ಹೇಳಿದರು.

ಆತಂಕದ ಸಂಗತಿಯೆಂದರೆ, ಇದು 1975ರಲ್ಲಿ ದಿವಂಗತ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯ ಹೇರಿಕೆಯನ್ನು ಸಮರ್ಥಿಸಲು ವಿದೇಶಿ ಕೈಗಳ ಕೂಗೆಬ್ಬಿಸಿದಾಗ ಮುಂದಿಟ್ಟ ತರ್ಕಗಳಂತೆ ಕೇಳ ಬರುತ್ತಿದೆ. ಭಾರತೀಯ ಜನತೆ ಆಗ ಪ್ರಜಾಪ್ರಭುತ್ವದ ಮೇಲಿನ ಅಂತಹ ದಾಳಿಯನ್ನು ವೀರಾವೇಶದಿಂದ ಸೋಲಿಸಿದರು. ಇಂದು ಅವರು ಇಂತಹ ಯಾವುದೇ ಪ್ರಯತ್ನವನ್ನು ವಿಫಲಗೊಳಿಸಲು ಹಿಂದೆಂದಿಗಿಂತಲೂ ಹೆಚ್ಚಾಗಿ ಕಟಿಬದ್ಧರಾಗಿದ್ದಾರೆ

ವಿಚಿತ್ರವೆಂದರೆ, ಇಂತಹ ಎಚ್ಚರಿಕೆಯ ಮಾತು, ಅಮೆರಿಕನ್ ಸಾಮ್ರಾಜ್ಯಶಾಹಿಯ ಒಂದು ಅಡಿಯಾಳು ಮಿತ್ರನ ಸ್ಥಾನಮಾನವನ್ನು ಸ್ವೇಚ್ಛೆಯಿಂದ ಆರಿಸಿಕೊಂಡಿರುವ ಯುಪಿಎ ಸರಕಾರದಿಂದ ಬರುತ್ತಿದೆ! ಇತ್ತೀಚೆಗೆ ಇಂತಹ ಸ್ಥಾನಮಾನವನ್ನು ಹಿಲರಿ ಕ್ಲಿಂಟನ್‌ರವರ ಭಾರತ ಭೇಟಿಯ ಸಂದರ್ಭದಲ್ಲಿ ಹೊರಡಿಸಿದ ಜಂಟಿ ಭಾರತ-ಅಮೆರಿಕಾ ಹೇಳಿಕೆಯಲ್ಲಿ ಇನ್ನಷ್ಟು ದೃಢವಾಗಿ ಬೆಸೆಯಲಾಯಿತು. ಜಗತ್ತಿನ ದೇಶಗಳ ಸಾಲಿನಲ್ಲಿ ಭಾರತ ತನ್ನ ಗೌರವದ ಸ್ಥಾನವನ್ನು ಗಳಿಸುವುದು, ಅದು ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಿ ಅಭಿವೃದ್ಧಿಶೀಲ ಜಗತ್ತಿನೊಂದಿಗೆ ಸೌಹಾರ್ದ ಬಂಧಗಳನ್ನು ಬಲಪಡಿಸಿಕೊಂಡಾಗ ಮಾತ್ರವೇ ಸಾಧ್ಯ. ಈ ದಿಕ್ಕನ್ನು ತ್ಯಜಿಸಿದುದರ ಪರಿಣಾಮಗಳ ಬಗ್ಗೆ ಕೊರಗುವುದರಲ್ಲಿ ಅರ್ಥವೇನಿಲ್ಲ. ನಮ್ಮ ದೇಶದ ಪ್ರಗತಿ ಮತ್ತು ಅಭಿವೃದ್ಧಿಯೊಂದಿಗೆ ಮುಂದೊತ್ತಬೇಕೆಂದಿದ್ದರೆ, ಈ ದಿಕ್ಕನ್ನು ಬದಲಿಸಬೇಕಾಗಿದೆಯಷ್ಟೇ.

ಇಲ್ಲೂ ಒಪ್ಪಂದ !

ಆದರೆ, ಲೋಕಸಭೆಯಲ್ಲಿ ಪ್ರಧಾನಿಗಳ ಹೇಳಿಕೆಯ ಮೇಲಿನ ಚರ್ಚೆ ಅಕ್ಷರಶಃ ಪಿಸುಮಾತಿನಲ್ಲೇ ಮುಕ್ತಾಯಗೊಂಡಿತು, ಪ್ರಧಾನಮಂತ್ರಿಗಳು ಬೇಡ, ಗೃಹಮಂತ್ರಿಗಳು ಉತ್ತರ ಕೊಡಲಿ ಎಂದು ಬಿಜೆಪಿ ಒಪ್ಪಿಕೊಂಡಿತು. ಸಹಜವಾಗಿಯೇ ಇದು, ಬಿಜೆಪಿ ಮತ್ತು ಕಾಂಗ್ರೆಸ್ ಬೆಲೆಯೇರಿಕೆಯ ಪ್ರಶ್ನೆಯಲ್ಲಿ ಮಾಡಿಕೊಂಡಂತೆ ಏನೋ ಒಪ್ಪಂದಕ್ಕೆ ಬಂದಿದ್ದಾರೆಯೇ ಎಂಬ ಪ್ರಶ್ನೆಗಳನ್ನು ಎತ್ತಿದೆ.

ಭ್ರಷ್ಟಾಚಾರದ ಪ್ರಶ್ನೆಯ ಮೇಲೆ ಯಾವುದೇ ರಾಜಿಗೆ ಒಪ್ಪುವುದು ಸಾಧ್ಯವಿಲ್ಲ. ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ಸಿಪಿಐ(ಎಂ) ಪ್ರಧಾನ ಮಂತ್ರಿಗಳನ್ನೂ ತನ್ನ ವ್ಯಾಪ್ತಿಯಲ್ಲಿ ಒಳಗೊಂಡ ಒಂದು ಬಲಿಷ್ಟ ಲೋಕಪಾಲ ವ್ಯವಸ್ಥೆ ಬೇಕೆಂದು ಪ್ರತಿಪಾದಿಸಿಕೊಂಡು ಬಂದಿದೆ. ಈ ದಶಕಗಳಲ್ಲಿ ಸಂಸತ್ತಿನ ಮುಂದೆ ಲೋಕಪಾಲ ಮಸೂದೆ ಬಂದಿದ್ದರೆ, ಅದು ಸಿಪಿಐ(ಎಂ) ಒತ್ತಾಯದಿಂದಲೇ– 1996ರಲ್ಲಿ ಸಂಯುಕ್ತ ರಂಗ ಸರಕಾರದ ಅಡಿಯಲ್ಲಿಯೂ ಮತ್ತು 2004ರಲ್ಲಿ ಯುಪಿಎ–1 ಸರಕಾರದ ಅಡಿಯಲ್ಲಿಯೂ.

ಕರಡು ಮಸೂದೆಯ ಮೇಲೆ ಚರ್ಚೆ ನಡೆದಾಗ ಒಂದು ಪರಿಣಾಮಕಾರಿ ಲೋಕಪಾಲ ವ್ಯವಸ್ಥೆಗಾಗಿ ಹೋರಾಟವನ್ನು ಸಂಸತ್ತಿನೊಳಗೆ ನಡೆಸಲಾಗುವುದು. ಅದರೊಂದಿಗೇ, ಒಂದು ಪರಿಣಾಮಕಾರಿ ಲೋಕಪಾಲ ವ್ಯವಸ್ಥೆಗಾಗಿ ಸರಕಾರದ ಮೇಲೆ ಜನತೆಯ ಒತ್ತಡವನ್ನು ಹಾಕಲಿಕ್ಕಾಗಿ ಜನತೆಯನ್ನು ಹೆಚ್ಚೆಚ್ಚು ಪ್ರಮಾಣದಲ್ಲಿ ಅಣಿನೆರೆಸಲಾಗುವುದು.

ಆಗಸ್ಟ್ 23 : ಪರಿಣಾಮಕಾರಿ ಲೋಕಪಾಲ್ ಕಾಯ್ದೆ ಪ್ರಜಾಪ್ರಭುತ್ವ ಹಕ್ಕಿಗಾಗಿ ದೇಶವ್ಯಾಪಿ ಪ್ರತಿಭಟನೆಗೆ ಒಂಬತ್ತು ಪಕ್ಷಗಳ ಕರೆ

ಆಗಸ್ಟ್ 19ರಂದು ನವದೆಹಲಿಯಲ್ಲಿ ಸಭೆ ಸೇರಿದ್ದ ಒಂಭತ್ತು ಪಕ್ಷಗಳ ನಾಯಕರು ಇದೇ ಆಗಸ್ಟ್ 23 ರಂದು ಅಖಿಲ ಭಾರತ ಪ್ರತಿಭಟನೆ ನಡೆಸಲು ಕರೆ ನೀಡಿದ್ದಾನೆ. ಪರಿಣಾಮಕಾರಿ ಲೋಕಪಾಲ್ ಕಾಯ್ದೆತನಬೇಕು. ನ್ಯಾಯಾಂಗದ ಉತ್ತರದಾಯತ್ವಕ್ಕೆ ನ್ಯಾಯಾಂಗ ಆಯೋಗದ ರಚನೆ, ಚುನಾವಣಾ ಪರಿಸ್ಥಿತಿಯಲ್ಲಿ ಸುಧಾರಣೆ ಕಪ್ಪು ಹಣ ಹಿಂದೆ ತರುವುದಕ್ಕೆ ಅಗತ್ಯ ಕ್ರಮ ಇವು ಬೇಡಿಕೆಗಳಿವೆ.

ಸತ್ಯಾಗ್ರಹಕ್ಕೆ ಮುಂದಾದ ಅಣ್ಣಾಹಜಾರೆ, ಅವರ ಬೆಂಬಲಿಗರ ಬಂಧನವನ್ನು ಖಂಡಿಸಿದ ನಾಯಕರು ದೆಹಲಿ ಮತ್ತು ದೇಶದ ಇತರೆಡೆ ಜನತೆಯ ಪ್ರತಿಭಟನೆ ಹಕ್ಕನ್ನೇ ನಿರ್ಬಂಧಿಸುತ್ತಿರುವುದನ್ನು ವಿರೋಧಿಸಿದರು.

ಪರಿಣಾಮಕಾರಿ ಲೋಕಪಾಲ್ ಕಾಯ್ದೆ, ಪ್ರಜಾಪ್ರಭುತ್ವದ ಹಕ್ಕುಗಳ ಸಾಧನದ ವಿರೋಧಿಸಿ ಆಗಸ್ಟ್ 23 ರಂದು ಕಟ್ಟಡಗಳ ರಾಜಧಾನಿ, ಜಿಲ್ಲಾ ಕೇಂದ್ರಗಳಲ್ಲಿ ಧರಣಿ ಇತ್ಯಾದಿಗಳನ್ನು ನಡೆಸಲು ಸಿಪಿಐ(ಎಂ), ಸಿಪಿಐ, ಎಫ್.ಬಿ. ಆರ್.ಎಸ್.ಪಿ. ಜೆಡಿ(ಎಸ್) ಎಐಎಡಿಎಂಕೆ, ಬಿಜು ಜನತಾದಳ, ಮುಂತಾದ ಪಕ್ಷಗಳು ಕರೆ ನೀಡಿವೆ. ಸಭೆಯನ್ನು ಹೆಚ್.ಡಿ.ದೇವೇಗೌಡ, ಸೀತಾರಾಂ ಯೆಚೂರಿ ಬರ್ದನ್, ಚಂದ್ರಬಾಬುನಾಯ್ಡು, ಮುಂತಾದವರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಜನ ಚಳುವಳಿಗಳ ಮೇಲಿನ ನಿರ್ಬಂಧ, ದಮನಗಳಿಗೂ ದೇಶದಲ್ಲಿ ಜಾಗತೀಕರಣದ ನೀತಿಗಳಿಗೂ ಸಂಬಂಧವಿದೆ...

ಚಳುವಳಿಗಳು V/s ನಿಬಂಧನೆಗಳು ಪ್ರಜಾಪ್ರಭುತ್ವ V/s ಜಾಗತೀಕರಣ

(ಅಣ್ಣಾ ಹಜಾರೆ ಬಂಧನ ಎತ್ತಿರುವ ಪ್ರಶ್ನೆಗಳು)

ಜಿ.ಎನ್.ನಾಗರಾಜ್

ಅಣ್ಣಾ ಹಜಾರೆ ಮತ್ತು ಸಂಗಡಿಗರು, ಭ್ರಷ್ಟಾಚಾರದ ವಿರುದ್ಧ ಆಂದೋಲನ ಆಗಸ್ಟ್ 16 ರಿಂದ ನವದೆಹಲಿಯಲ್ಲಿ ಸಬಲ ಲೋಕಪಾಲ ಕಾನೂನಿಗಾಗಿ ಹಮ್ಮಿಕೊಂಡಿದ್ದ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹದ ಮೇಲೆ, ಪೋಲೀಸರ ಮೂಲಕ ಕೇಂದ್ರ ಸರ್ಕಾರ ಚಳುವಳಿ ವಿರೋಧಿಸಿ ನಿಬಂಧನೆಗಳನ್ನು ವಿಧಿಸಿತು. ಅವುಗಳಲ್ಲಿ ಕೇವಲ ಮೂರು ದಿನ ಮಾತ್ರ ಉಪವಾಸ ಸತ್ಯಾಗ್ರಹ ನಡೆಸಬೇಕು. ಕೇವಲ 5000 ಜನರಿಗೆ ಮಾತ್ರ ಅವಕಾಶ ಎಂಬ ನಿಬಂಧನೆಗಳು ಸೇರಿದಂತೆ 6 ನಿಬಂಧನೆಗಳನ್ನು ಒಪ್ಪುವುದಿಲ್ಲ ಎಂದು ಅಣ್ಣಾ ಹಜಾರೆ ಮತ್ತು ತಂಡ ಘೋಷಿಸಿತು. ಅದಕ್ಕೆ ಉತ್ತರವಾಗಿ ದೆಹಲಿ ಪೋಲೀಸರು ಸತ್ಯಾಗ್ರಹ ನಡೆಸಲು ನಿರಾಕರಣೆ ಮತ್ತು ಸತ್ಯಾಗ್ರಹ ನಡೆಸಲುದ್ದೇಶಿಸಿದ್ದ ಜೆಪಿ ಪಾರ್ಕ್ ಸುತ್ತ 144ರ ಪ್ರತಿಬಂಧಕಾಜ್ಞೆ ವಿಧಿಸಿದರು. ಈ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಉಪವಾಸ ಸತ್ಯಾಗ್ರಹ ನಡೆಸಿಯೇ ನಡೆಸುವುದಾಗಿ ಅಣ್ಣಾಹಜಾರೆ ತಂಡದ ಘೋಷಿಸಿತು. ಅದಕ್ಕೆ ಉತ್ತರವಾಗಿ ಪೋಲೀಸರಿಂದ ಆಗಸ್ಟ್ 16 ರಂದು ಅಣ್ಣಾ ಹಜಾರೆ ಮತ್ತು ತಂಡಕ್ಕೆ ಮುನ್ನೆಚ್ಚರಿಕೆ ಸ್ಥಾನ ಬದ್ಧತೆ ಎಂಬ ಹೆಸರಿನ ಬಂಧನ. ಅಂದು ಮಧ್ಯಾಹ್ನವೇ ನಾವು ಸತ್ಯಾಗ್ರಹ ಮಾಡುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟರೆ ಸ್ಥಾನ ಬದ್ಧತೆಯಿಂದ ಮುಕ್ತಿಗೊಳಿಸುವುದಾಗಿ ಪೋಲೀಸರ ಹೇಳಿಕೆ. ಅದಕ್ಕೆ ನಿರಾಕರಿಸಿದ ಅಣ್ಣಾ ಹಜಾರೆ ತಂಡಕ್ಕೆ ನ್ಯಾಯಾಂಗ ಬಂಧನ, ದೆಹಲಿಯಲ್ಲಿ ಹಾಗೂ ದೇಶದ ಪ್ರಮುಖ ನಗರಗಳಲ್ಲಿ ಸಾವಿರಾರು ಜನರಿಂದ ಅಣ್ಣಾ ಹಜಾರೆ ಬಂಧನದ ವಿರುದ್ಧ ಪ್ರತಿಭಟನೆ. ಗೃಹಮಂತ್ರಿ ಚಿದಂಬರಂ ಹಾಗೂ ಕಪಿಲ್ ಸಿಬಲ್, ಅಂಬಿಕಾಸೋನಿಯವರಿಂದ ಬಂಧನದ ಸಮರ್ಥನೆ. ಸಂಜೆ ರಾಹುಲ್ ಗಾಂಧಿ ಪ್ರಧಾನಮಂತ್ರಿ ಭೇಟಿ ಮತ್ತು ಅಣ್ಣಾ ಹಜಾರೆ ಬಿಡುಗಡೆಗೆ ಒತ್ತಾಯ. ನಂತರ ಅಣ್ಣಾ ಹಜಾರೆ ಬಿಡುಗಡೆ. ಅಣ್ಣಾ ಹಜಾರೆಯವರಿಂದ ಬಿಡುಗಡೆಯ ನಿರಾಕರಣೆ. ಜೈಲಿನ ಸುತ್ತ ಹಾಗೂ ದೆಹಲಿಯ ವಿವಿಧ ಮೈದಾನಗಳಲ್ಲಿ ಸೇರಿದ ಹತ್ತಾರು ಸಾವಿರ ಜನರಿಂದ ಪ್ರತಿಭಟನೆ. ದೇಶದ ಪ್ರಮುಖ ನಗರಗಳಲ್ಲಿಯೂ ಸಾವಿರಾರು ಜನರ ಪ್ರತಿಭಟನೆ. ಕರ್ನಾಟಕದ ವಿವಿಧ ನಗರಗಳು, ಹಲವು ತಾಲ್ಲೂಕು ಕೇಂದ್ರಗಳಲ್ಲಿಯೂ ಪ್ರತಿಭಟನೆ. ಆರೆಸ್ಸೆಸ್ ಮತ್ತು ಅದರ ಅಂಗ ಸಂಘಟನೆಗಳೂ ಕೂಡ ಭಾಗವಹಿಸಿದವು.

ಅಣ್ಣಾ ಹಜಾರೆ ಬಂಧನದ ಬಗ್ಗೆ ಸಂಸತ್ತಿನಲ್ಲಿ ಬಿರುಸಿನ ಚರ್ಚೆ ಬಿಜೆಪಿ ಮತ್ತು ಎಡಪಕ್ಷಗಳಿಂದ ಮನಮೋಹನ್‌ಸಿಂಗ್‌ರ ಮತ್ತು ಅವರ ಸರ್ಕಾರದ ಛೀಮಾರಿ. ಕೊನೆಗೆ ಆಗಸ್ಟ್ 17ರ ಮಧ್ಯರಾತ್ರಿಯ ವೇಳೆಗೆ ಪೋಲೀಸರು ವಿಧಿಸಿದ ನಿಬಂಧನೆಗಳನ್ನು ಒಂದೊಂದಾಗಿ ತೆಗೆಯಲೊಪ್ಪಿದ ಮೇಲೆ ಲಕ್ಷಾಂತರ ಜನರು ಸೇರಲವಕಾಶವಿರುವ ರಾಮಲೀಲಾ ಮೈದಾನದಲ್ಲಿ 15 ದಿನಗಳ ಕಾಲ ಅವಶ್ಯವಿದ್ದರೆ ಮತ್ತೆ ಮುಂದುವರೆಸಲು ಒಪ್ಪಿದ ಮೇಲೆ ಅಣ್ಣಾ ಹಜಾರೆಯವರಿಂದ ಜೈಲಿನಿಂದ ಹೊರಬರಲು ಒಪ್ಪಿಗೆ ಈ ಇಡೀ ಅವಧಿಯಲ್ಲಿ ಅಣ್ಣಾ ಹಜಾರೆಯವರಿಂದ ಜೈಲಿನ ಒಳಗೆ ಅವರ ಹಿಂಬಾಲಕರಿಂದ ದೇಶದ ವಿವಿಧ ನಗರಗಳಲ್ಲಿ ಉಪವಾಸ ಸತ್ಯಾಗ್ರಹ ಆರಂಭ ಮತ್ತು ಮುಂದುವರಿಕೆ.



ಆಗಸ್ಟ್ 15 ರಿಂದ ಆರಂಭವಾಗಿ 17ರ ಮಧ್ಯರಾತ್ರಿಯವರೆಗೂ ನಡೆದ ಘಟನೆಗಳು ಕಾಲಾನುಕ್ರಮ ವಿವರಣೆ ಇದು. ಅಣ್ಣಾ ಹಜಾರೆ ಮತ್ತು ತಂಡದ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹದ ಮೇಲೆ ನಿರ್ಬಂಧಗಳನ್ನು ವಿಧಿಸಿದ್ದು ಮತ್ತು ಅವರ ಬಂಧನ ನಮ್ಮ ದೇಶದಲ್ಲಿ ಸಂವಿಧಾನದಲ್ಲಿ ಘೋಷಿಸಲಾಗಿರುವ ವಾಕ್ ಸ್ವಾತಂತ್ರ್ಯ, ಸಭೆ ಸೇರುವ ಸ್ವಾತಂತ್ರ್ಯಗಳನ್ನೇ ಭಾರತದ ಪ್ರಭುತ್ವ ಯಾವ ರೀತಿಯ ಬಂಧನದಲ್ಲಿರಿಸಿವೆ ಎಂಬುದನ್ನು ಭಾರತದ ಜನತೆಯ ಮುಂದೆ ತೆರೆದಿರಿಸಿವೆ. ಭಾರತದ ಪ್ರಭುತ್ವ ಮತ್ತು ಜನತೆಯ ನಡುವಣ ಸಂಘರ್ಷದ ಒಂದು ಸಂದರ್ಭವಾಗಿದೆ.

ಸ್ವಾತಂತ್ರ್ಯ ದಿನಾಚರಣೆಯ ದಿನಗಳಲ್ಲಿಯೇ ಭಾರತದ ಪ್ರಜಾಪ್ರಭುತ್ವ ಎಷ್ಟರಮಟ್ಟಿಗೆ ಪ್ರಜಾಪ್ರಭುತ್ವ ಹಾಗೂ ಎಷ್ಟರಮಟ್ಟಿಗೆ ಪ್ರಭುತ್ವ ಆಳುವ ವರ್ಗಗಳ ಪ್ರಭುತ್ವ ಎಂಬುದರ ಒಂದು ಕ್ಷಣ ಮಾತ್ರದ ದರ್ಶನವಾಗಿದೆ. ಅಂದರೆ ಪ್ರಜಾಪ್ರಭುತ್ವದ ಮಿತಿ ಹಾಗೂ ಶಕ್ತಿಗಳೆರಡನ್ನೂ ತೋರಿಸಿದೆ. ಚಳುವಳಿಯನ್ನು ಹೇಗೆ, ಎಷ್ಟು ದಿನ ನಡೆಸಬೇಕು, ಎಷ್ಟು ಜನ ಅದರಲ್ಲಿ ಭಾಗವಹಿಸಬೇಕು ಎಂಬುದನ್ನು ಪೋಲಿಸರೇ ನಿರ್ಧರಿಸುವ ಮೂಲಕ ಜನತೆಯ ಹೋರಾಟದ ಕತ್ತು ಹಿಸುಕುವ ಮತ್ತು ಜನತೆಯ ಸಮಸ್ಯೆಗಳನ್ನು ಹೋರಾಟದ ಮೂಲಕ ಬಗೆಹರಿಸಿಕೊಳ್ಳುವ ಅವಕಾಶಗಳನ್ನು ಭಾರತದ ಆಳುವ ವರ್ಗಗಳು ನಿರಾಕರಿಸುತ್ತಿವೆ ಎಂಬುದು ಈ ಘಟನಾವಳಿಗಳ ಮೂಲಕ ಭಾರತದ ಜನತೆ ಅರ್ಥ ಮಾಡಿಕೊಳ್ಳಬೇಕಾಗಿದೆ.

ಭಾರತ ಸ್ವತಂತ್ರ್ಯವಾದಂದಿನಿಂದ ಅಣ್ಣಾ ಹಜಾರೆಯವರನ್ನು ಬಿಡುಗಡೆ ಮಾಡಲು ನಿರ್ಧರಿಸಲಾಯಿತು. ಹೀಗೆ ರಾಜಕೀಯ ಯಜಮಾನರು ಗಳೇ ಈ ಪ್ರಮುಖ ತೀರ್ಮಾನಗಳಿಗೆ ಕಾರಣರು ಎಂಬುದು ಸಾಬೀತಾಗುತ್ತದೆ.

ನಾಲ್ಕು: ಕೇಂದ್ರ ಸರ್ಕಾರದ ರಾಜಕೀಯ ನಾಯಕರು ಮೊದಲು ಗೃಹಮಂತ್ರಿ ಮತ್ತಿತರ ಮಂತ್ರಿಗಳು ಪತ್ರಿಕಾಗೋಷ್ಠಿಯ ಮೂಲಕ ನಂತರ ಸಂಸತ್ತಿನಲ್ಲಿ ಪ್ರಧಾನಮಂತ್ರಿ ಹೇಳಿಕೆ ಅದರಲ್ಲಿ ಅವರ ಆಷಾಢಭೂತನದ ಹೇಳಿಕೆ "ನನಗೆ ನೋವಾಗಿದೆ" ಇವೆಲ್ಲವೂ ಭ್ರಷ್ಟಾಚಾರವನ್ನು ಸಂರಕ್ಷಿಸಿಕೊಳ್ಳಲು ಯಾವ ಕೆಳಮಟ್ಟಕ್ಕೂ ಕೂಡ ಅತಿ ಎತ್ತರದ, ಅತ್ಯಂತ "ಪ್ರಾಮಾಣಿಕ" ನಾಯಕರೂ ಇಳಿಯಬಲ್ಲರು ಎಂಬುದನ್ನೂ ತೋರಿಸುತ್ತದೆ.

ಐದು: ಪ್ರಜಾಪ್ರಭುತ್ವ ಸಂಸತ್ತಿಗೆ ಮಾತ್ರ ಕಾನೂನು ಮಾಡುವ ಹಕ್ಕು ಸಂಸತ್ತಿನ ಪಾರಮ್ಯ, ಕಾನೂನಿನ ಪ್ರಕಾರ ಆಡಳಿತ ಎಂಬುವುದೆಲ್ಲಾ ಜನರ ಕಣ್ಣಿಗೆ ಮಣ್ಣೆರಚುವುದಕ್ಕೆ ಆಳುವ ವರ್ಗದ ರಾಜಕೀಯ ನಾಯಕರು ತಮಗೆ ಬೇಕಾದಂತೆ ದುರ್ಬಳಕೆ ಮಾಡಿ ಕೊಳ್ಳುತ್ತಾರೆ.

ಆರು: ಹೀಗೆ ನಿರಂತರವಾಗಿ ಪ್ರಜಾಪ್ರಭುತ್ವದ ಕತ್ತು ಹಿಸುಕಲು ಯತ್ನಿಸುತ್ತಿರುವಾಗಲೇ ರಾಹುಲ್‌ಗಾಂಧಿಯವರನ್ನು ಪ್ರಾಮಾಣಿಕ ನಾಯಕನಾಗಿ ಬಿಂಬಿಸಲು ಅಣ್ಣಾ ಹಜಾರೆಯವರ ಬಿಡುಗಡೆಯ ಬಳಕೆ ಮಾಡಿಕೊಳ್ಳುವ ನೀಚಬುದ್ಧಿ.

ಜಾಗತೀಕರಣ, ಭ್ರಷ್ಟಾಚಾರ ಮತ್ತು ಕೋರ್ಟುಗಳು ಚಳುವಳಿಗಳ ಮೇಲಿನ ನಿರ್ಬಂಧಗಳು

ಅಣ್ಣಾ ಹಜಾರೆಯ ಬಂಧನ ಎಂಬ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ಹಲ್ಲೆಗೆ ಎರಡು ಮೂಲಕ ಕಾರಣಗಳಿವೆ.

ಒಂದು ಭ್ರಷ್ಟಾಚಾರ. ಭ್ರಷ್ಟಾಚಾರವನ್ನು ನಿಯಂತ್ರಿಸಲು ಸಬಲವಾದ ಲೋಕಪಾಲ್ ಕಾಯಿದೆಗಾಗಿ ಅಣ್ಣಾ ಹಜಾರೆ ಮತ್ತು ತಂಡದ ಹೋರಾಟ. ದುರ್ಬಲ ಲೋಕಪಾಲ್ ಕಾಯಿದೆಯನ್ನು ಜಾರಿಗೊಳಿಸದೆ ಜನರ ಕಣ್ಣಿಗೆ ಮಣ್ಣೆರಚಲು ಭ್ರಷ್ಟಾಚಾರ ವನ್ನು ಸಂರಕ್ಷಿಸಲು ಅಣ್ಣಾಹಜಾರೆ ತಂಡದ ಸಬಲ ಲೋಕಪಾಲ್ ಮಸೂದೆಗಾಗಿ ಹೋರಾಟವನ್ನು ಹಕ್ಕಿತ್ತಬೇಕು.

ಎರಡು: ಚಳುವಳಿಗಳ ಮೇಲೆ ನಿರ್ಬಂಧಗಳನ್ನು–ಮನಸೇಚ್ಛೆಯಾದ ನಿರ್ಬಂಧಗಳನ್ನು ಹೇರಲು ಅವಕಾಶ. ಇದು ಇಡೀ ದೇಶದ ಎಲ್ಲ ನಗರಗಳಲ್ಲಿಯೂ ಸರ್ಕಾರಗಳು ಪೋಲೀಸರಿಗೆ ನೀಡಿದ ಅವಕಾಶ. ಚಳುವಳಿಗಾಗಿ ನಿಗದಿತ ನಮೂನೆಯಲ್ಲಿ ಎಲ್ಲಾ ವಿವರ ನೀಡಿ ಅರ್ಜಿ ಸಲ್ಲಿಸಬೇಕು. ಯಾವ ಘೋಷಣೆ ಕೂಗಲಾಗುತ್ತದೆ, ಏನು ಭಾಷಣ ಮಾಡಲಾಗುತ್ತದೆ, ಎಷ್ಟು ಜನ ಬರುತ್ತಾರೆ ಎಲ್ಲಿಂದ ಎಷ್ಟು ದಿನ ಇತ್ಯಾದಿ ಚಳುವಳಿಯ ಸ್ವರೂಪವನ್ನೇ ನಿಯಂತ್ರಿಸುವ ಅಥವಾ ಪೋಲೀಸರೇ ಚಳುವಳಿಯ ಸ್ವರೂಪವನ್ನು ನಿರ್ಧರಿಸುವ ಅಧಿಕಾರ ನೀಡುವ ನಿಯಮಗಳು ಪೋಲಿಸರು ಬಯಸುವ ಮುಚ್ಚಳಿಕೆಗಳು, ನೀಡುವ ಅಕಾರಣ ನಿರ್ದೇಶನಗಳು, ಕೊನೆಯಲ್ಲಿ ಅನುಮತಿಯನ್ನೇ ನಿರಾಕರಿಸುವ ಅವಕಾಶ. ಜನರು ಚಳುವಳಿ ಮಾಡಬೇಕೇ ಬೇಡವೇ ಯಾವ ರೀತಿ, ಸ್ವರೂಪ ಎಲ್ಲವನ್ನೂ ಪೋಲೀಸರು ನಿರ್ಧರಿಸುವುದು.

ಇದಕ್ಕೆ ಪೋಲೀಸರು ಉಲ್ಲೇಖಿಸುವುದು ಸುಪ್ರೀಂಕೋರ್ಟ್, ಹೈಕೋರ್ಟ್‌ಗಳ ತೀರ್ಮಾನಗಳನ್ನು, ಸಭೆ ನಡೆಸುವ ಹಕ್ಕಿನ ಮೇಲೆ ಸರ್ಕಾರ ನಿರ್ಬಂಧಗಳನ್ನು ಹೇರಬಹುದು ಎಂಬ ತೀರ್ಮಾನಗಳನ್ನು. ಹೀಗೆ ಇಂದು ಉಚ್ಛ ನ್ಯಾಯಾಲಯಗಳೇ ಈ ನಿರ್ಬಂಧಗಳ ಹೇರಿಕೆಗೆ ಕಾರಣವಾಗಿವೆ.

ಅಣ್ಣಾ ಹಜಾರೆ ಹಲವಾರು ಪ್ರಶ್ನೆಗಳಲ್ಲಿ 'ಸುಪ್ರೀಂಕೋರ್ಟಿಗೆ ಹೋಗ್ತೀನಿ' ಎನ್ನುತ್ತಿದ್ದವರು ಕೇಂದ್ರ ಸರ್ಕಾರ ಹೋರಾಟವನ್ನು ನಿಷೇಧಿಸಿದರೂ ಕೋರ್ಟಿಗೆ ಹೋಗಲಿಲ್ಲ. ಕೋರ್ಟ್‌ಗೆ ಹೋಗಲು ಎಲ್ಲ ಸಿದ್ಧ ಮಾಡಿಟ್ಟುಕೊಂಡಿದ್ದರು. ಆದರೆ ಇವತ್ತಿನ

ಪುಟ 10ಕ್ಕೆ

ಜಾಗತಿಕ ಹಣಕಾಸು ಕೋಲಾಹಲ....

ಪುಟ 7ರಿಂದ

ಕಂಡು ಬಂದಿದೆ. 'ಆಂತರಿಕ ಬೇಡಿಕೆಯ ಮೂಲಗಳು ಇನ್ನೂ ಪ್ರಕಟಗೊಂಡಿಲ್ಲ' ಎಂಬುದು ಜರ್ಮನಿಯ ಆತಂಕದ ಪ್ರಧಾನ ಮೂಲವೆಂದು ವಿಶ್ಲೇಷಕರು ಹೇಳುತ್ತಿದ್ದಾರೆ.

ಬಂಡವಾಳಶಾಹಿಯ ಸರಳ ತರ್ಕ

ಅಂದರೆ ಈಗ ನಡೆಯುತ್ತಿರುವುದು ಇಷ್ಟು- ಬಂಡವಾಳಶಾಹಿ ಪ್ರಭುತ್ವ ಬೃಹತ್ ಕಾರ್ಪೊರೇಟುಗಳನ್ನು ಪಾರು ಮಾಡುವ ಕ್ರಮಗಳಿಗಾಗಿ ಸಂಪನ್ಮೂಲಗಳನ್ನು ಕ್ರೋಡೀಕರಿಸುತ್ತದೆ; ಇದರಿಂದಾಗಿ ಬೃಹತ್ ಪ್ರಮಾಣದಲ್ಲಿ ಸಾರ್ವಭೌಮ ಸಾಲವನ್ನು ಶೇಖರಿಸಿದೆ. ಈ ಸಾಲದ ಹೊರೆಯನ್ನು ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಖರ್ಚುಗಳಲ್ಲಿ ಬೃಹತ್ ಪ್ರಮಾಣದ ಕಡಿತಗಳ ಮೂಲಕ ದುಡಿಯುವ ಜನತೆಯ ಹೆಗಲುಗಳಿಗೆ ದಾಟಿಸಲಾಗುತ್ತಿದೆ. ಇದೀಗ ಬಂಡವಾಳಶಾಹಿಯ ಶುದ್ಧ ಮತ್ತು ಸರಳ ತರ್ಕ- ಶೋಷಣೆಯನ್ನು ತೀವ್ರಗೊಳಿಸಿ ಲಾಭಗಳನ್ನು ಗರಿಷ್ಟಗೊಳಿಸಿ!

ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ 2009ರಿಂದ ಕಾರ್ಪೊರೇಟ್ ತೆರಿಗೆ ಪಾವತಿಗಳ ಅಂಕಿ-ಅಂಶಗಳ ಪ್ರಕಾರ ಕಾರ್ಪೊರೇಟ್ ಲಾಭಗಳು 8.3% ದಿಂದ 2010ರಲ್ಲಿ 10.8% ಕ್ಕೇರಿವೆ. ಆ ವರ್ಷ ಒಟ್ಟು ರಾಷ್ಟ್ರೀಯ ಆದಾಯದಲ್ಲಿ ಕಾರ್ಪೊರೇಟ್ ಲಾಭಗಳ ಪಾಲು 14%. ಇಷ್ಟೊಂದು ಪಾಲು ಎಂದೂ ದಾಖಲಾಗಿಲ್ಲ. ಕಾಲುವಾರ್ಷಿಕ ಅಂಕಿ-ಅಂಶಗಳನ್ನು ನೋಡಿದಾಗ ಕಳೆದ ಸತತ ಹತ್ತು ಅವಧಿಗಳಲ್ಲಿ ಕಾರ್ಪೊರೇಟ್ ಲಾಭಗಳು ವಿಸ್ತರಿಸುತ್ತಲೇ ಇವೆ. ಈ ಪ್ರಕ್ರಿಯೆಯಲ್ಲಿ ಎಲ್ಲ ಕಾರ್ಪೊರೇಟುಗಳು ರಾಶಿ ಹಾಕಿರುವ ಮೀಸಲು ನಗದಿನ ಪ್ರಮಾಣ ದಿಗ್ಭ್ರಾಂತಿ ತರುವಂತದ್ದು. ಆಪಲ್ ಕಂಪನಿಯೊಂದರ ಮೀಸಲು ನಗದು ಪ್ರಮಾಣವೇ 72 ಬಿಲಿಯ(ಶತಕೋಟಿ) ಡಾಲರುಗಳು- ಇದು ಜಗತ್ತಿನ ಅರ್ಧದಷ್ಟು ದೇಶಗಳ ಜಿಡಿಪಿಗಿಂತ ಹೆಚ್ಚು. ಮೈಕ್ರೊಸಾಫ್ಟ್ ಮತ್ತು ಗೂಗಲ್ ಒಟ್ಟಾಗಿ 100 ಬಿಲಿಯನ್‌ಗಿಂತಲೂ ಹೆಚ್ಚು ಮೀಸಲು ನಗದು ಹೊಂದಿವೆ. ಇತರ ಕಾರ್ಪೊರೇಟ್‌ಗಳ ಕತೆಯೂ ಇದೇ. ಇದು ಅಲ್ಲಿಯ ಸಮಾಜದ ಒಂದು ತುದಿಯ ಕತೆಯಾದರೆ, ಇನ್ನೊಂದು ತುದಿಯಲ್ಲಿ ಆ ದೇಶ 10% ದಷ್ಟು ಅಭೂತಪೂರ್ವ ನಿರುದ್ಯೋಗವನ್ನು ಕಾಣುತ್ತಿದೆ.

ಮೂಲಭೂತ ಬಿಕ್ಕಟ್ಟಿನ ಬೀಜ

ಸನ್ನಿವೇಶ ಈಗ ಜಾಗತಿಕ ಹಣಕಾಸಿನಲ್ಲಿ ಕೋಲಾಹಲಕ್ಕಷ್ಟೇ ಸೀಮಿತವಾಗಿಲ್ಲ. ಅದು ಇನ್ನಷ್ಟು ಮೂಲಭೂತವಾದ ಬಿಕ್ಕಟ್ಟಿನ ಬೀಜಗಳನ್ನು ಬಿತ್ತಿದೆ. ಸಾರ್ವಭೌಮ ಸಾಲದ ಹೊರೆಯನ್ನು ಜನಸಾಮಾನ್ಯರ ಮೇಲೆ ಎಷ್ಟು ದಾಟಿಸಲಾಗುತ್ತದೋ ಅಷ್ಟು ಪ್ರಮಾಣದಲ್ಲಿ ಅವರ ಕೊಳ್ಳುವ ಸಾಮರ್ಥ್ಯ ಇಳಿಮುಖಗೊಳ್ಳುತ್ತದೆ. ನಿರುದ್ಯೋಗದ ಹೆಚ್ಚಳವೂ ಇದರೊಂದಿಗೆ ಸೇರಿಕೊಂಡರೆ ಆಂತರಿಕ ಬೇಡಿಕೆಯ ಪ್ರಮಾಣ ತೀವ್ರವಾಗಿ ಕುಗ್ಗುತ್ತದೆ. ಅಲ್ಲದೆ ಈ ಜಾಗತಿಕ ಬಿಕ್ಕಟ್ಟು ಜಾಗತಿಕ ವ್ಯಾಪಾರವನ್ನೂ ತೀವ್ರವಾಗಿ ಇಳಿಸುತ್ತದೆ. ಉದಾಹರಣೆಗೆ, ಜರ್ಮನಿಯ ರಫ್ತು ಬೆಳವಣಿಗೆಯ ದರ ಮೇ ತಿಂಗಳಲ್ಲಿ 20.1% ಇದ್ದದ್ದು, ಜೂನ್ ತಿಂಗಳಲ್ಲಿ ಕೇವಲ 3.1%ಕ್ಕಿಳಿಯಿತು. ಇಂತಹ ಸನ್ನಿವೇಶದಲ್ಲಿ ಅಮೆರಿಕಾ ತನ್ನ ಸಾಲ ಮಿತಿ ಪ್ರಶ್ನೆಯನ್ನು ನಿರ್ವಹಿಸಿದ ರೀತಿ ಅದರ ಆಂತರಿಕ ಆರ್ಥಿಕದ ಮೇಲೆ ಮಾತ್ರವಲ್ಲ, ಜಾಗತಿಕ ಆರ್ಥಿಕದ ಮೇಲೂ ಪ್ರಭಾವ ಬೀರುವಂತದ್ದು. ಆಂತರಿಕ ಬೇಡಿಕೆ ಎಲ್ಲ ಪ್ರಮುಖ (ಚೀನಾ ಬಿಟ್ಟು) ಆರ್ಥಿಕಗಳಲ್ಲಿ ಕುಂಠಿತಗೊಳ್ಳುವುದರೊಂದಿಗೆ, ಈ ಎಲ್ಲ ದೇಶಗಳ ಜಿಡಿಪಿ ಕೂಡ ಅನಿವಾರ್ಯವಾಗಿಯೇ ಕುಂಠಿತಗೊಳ್ಳುತ್ತದೆ. ಇದರಿಂದ ಸರಕಾರೀ ಆದಾಯಗಳೂ ಇನ್ನಷ್ಟು ಕುಂಠಿತಗೊಂಡು ಇನ್ನಷ್ಟು ಸಾಲ ಹೇರಲ್ಪಡುತ್ತದೆ. ಈ ವಿಷಚಕ್ರ ಆರಂಭವಾಗಿದ್ದು ಜನತೆಯ ಮೇಲೆ ಅಭೂತಪೂರ್ವ ಹೊರೆಗಳು, ಸಂಕಟಗಳನ್ನು ಹೇರುತ್ತಿದೆ. ಇದು ಇಂಗ್ಲೆಂಡಿನಲ್ಲಿ ಹರಡುತ್ತಿರುವ ಗಲಭೆಗಳು ಮತ್ತು ಲೂಟಿಯಂತಹ ಸಾಮಾಜಿಕ ಸೆಳೆತಗಳ ಹಲವು ಹೊಲಸು ಅಭಿವ್ಯಕ್ತಿಗಳಿಗೆ ಹಾದಿ ಮಾಡಿಕೊಡುತ್ತದೆ.

ಭಾರತದಲ್ಲಿರುವ ನಮಗೆ ಇದರಿಂದ ಸರಿಯಾದ ಪಾಠಗಳನ್ನು ಕಲಿಯುವುದು ಬಹಳ ಮಹತ್ವದ್ದಾಗುತ್ತದೆ. ಸಾಕಷ್ಟು ಪ್ರಮಾಣದಲ್ಲಿ ಬೆಳವಣಿಗೆಯನ್ನು ಸಾಧಿಸುವ ಒಂದು ಸಾಧನವಾಗಿ, ಮತ್ತು ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಗಳನ್ನು ತಡೆದಿಡಲು ಕೂಡ ಆಂತರಿಕ ಬೇಡಿಕೆಯನ್ನು ವೃದ್ಧಿಸಬೇಕಾಗಿದೆ ಎಂಬುದು ಸ್ಪಷ್ಟ. ಅಂದರೆ ಕಾನೂನು ಪ್ರಕಾರ ಸರಕಾರಕ್ಕೆ ಬರಬೇಕಾದ ಆದಾಯಗಳನ್ನು ಉತ್ತೇಜಕ ಪ್ಯಾಕೇಜುಗಳ ಹೆಸರಿನಲ್ಲಿ ಬಿಟ್ಟುಕೊಡುವ ಪ್ರಕ್ರಿಯೆಯನ್ನು ಹಿಮ್ಮೆಟ್ಟಿಸಬೇಕು. ಕಳೆದ ಎರಡು ವರ್ಷಗಳಲ್ಲಿ, ಬಜೆಟ್ ದಾಖಲೆಗಳ ಪ್ರಕಾರವೇ, 9.5 ಲಕ್ಷ ಕೋಟಿ ರೂ.ಗಳನ್ನು ಈ ರೀತಿ ಬಿಟ್ಟು ಕೊಡಲಾಗಿದೆ. ಇದರ ಬದಲು ಈ ಅಪಾರ ಮೊತ್ತಗಳನ್ನು ವಸೂಲಿ ಮಾಡಿ ನಮ್ಮ ಬಹು ಆಗತ್ಯವಾದ ಮೂಲರಚನೆಗಳನ್ನು ಕಟ್ಟಲು ಬೃಹತ್ ಪ್ರಮಾಣದ ಸಾರ್ವಜನಿಕ ಹೂಡಿಕೆಗಳಿಗೆ ಬಳಸಬೇಕು. ಇದರಿಂದ ಉನ್ನತ ಮಟ್ಟದಲ್ಲಿ ಉದ್ಯೋಗ ನಿರ್ಮಾಣ ಮತ್ತು ಆಂತರಿಕ ಬೇಡಿಕೆಗೆ ಕುಮ್ಮಕ್ಕು ಸಿಕ್ಕು, ಒಂದು ತಾಳಿಕೆಯ ಬೆಳವಣಿಗೆಯ ಹಾದಿ ಹಿಡಿಯಲು ಉತ್ತೇಜನೆ ಸಿಗುತ್ತದೆ. ಜಾಗತಿಕ ಹಣಕಾಸು ಕೋಲಾಹಲದ ಈ ಸಂದರ್ಭದಲ್ಲಿ ಭಾರತ 'ಮುಂದಿನ ಪೀಳಿಗೆಯ' ಹಣಕಾಸು ಸುಧಾರಣೆಗಳತ್ತ ಧಾವಿಸುವ ಅವಿವೇಕತನಕ್ಕೆ ಇಳಿಯಬಾರದು. ಮೊದಲನೆಯದಾಗಿ, ಭಾರತಕ್ಕೆ 2008ರ ಜಾಗತಿಕ ಕುಸಿತದ ವಿಧ್ವಂಸಕಾರಿ ಪರಿಣಾಮಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗಿದ್ದರೆ, ಅದು ಯುಪಿಎ-1 ರ ಮುಂದಿದ್ದ ಇಂತಹ ಹಣಕಾಸು ಸುಧಾರಣೆಗಳ ಶಾಸನಗಳನ್ನು ತರದಂತೆ ಎಡಪಕ್ಷಗಳು ಮಾಡಿದ್ದರಿಂದಲೇ. ಈಗಿನ ಜಾಗತಿಕ ಕೋಲಾಹಲ ಭಾರತೀಯ ಆರ್ಥಿಕವನ್ನು ಮತ್ತು ಜನತೆಯನ್ನು ವಿಧ್ವಂಸಗೊಳಿಸದಂತೆ ರಕ್ಷಿಸಬೇಕಾದರೆ ಇಂತಹ ವಿವೇಕದ ಕೈಮೇಲಾಗಬೇಕು. ○

'ಸಾರ್ವಭೌಮ ಸಾಲ' ಎಂದರೇನು?

ಒಂದು ರಾಷ್ಟ್ರೀಯ ಸರಕಾರ ತನ್ನ ದೇಶದ ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸಲು ತೆರಿಗೆಗಳನ್ನು ಹೆಚ್ಚಿಸಬಹುದು ಅಥವ ಸಾಲ ಎತ್ತಬಹುದು. ಇದಕ್ಕಾಗಿ ಅದು ಸಾಲಪತ್ರಗಳನ್ನು (ಸರಕಾರೀ ಬಾಂಡುಗಳು ಅಥವ 'ಗಿಲ್ಟ್'ಗಳನ್ನು) ಹೊರಡಿಸುತ್ತದೆ. ಇದು ಸಾಮಾನ್ಯವಾಗಿ ವಿದೇಶಿ ಕರೆನ್ಸಿಯಲ್ಲಿರುತ್ತದೆ. ಈ ಸಾಲಗಳಿಗೆ ಆ ಸರಕಾರವೇ ಗ್ಯಾರಂಟಿ ನೀಡುತ್ತದೆ. ಇದೇ ಸಾರ್ವಭೌಮ ಸಾಲ. ಹೂಡಿಕೆದಾರರು ಸಂಬಂಧಪಟ್ಟ ದೇಶಕ್ಕೆ ಸಾಲವನ್ನು ತೀರಿಸುವ ಶಕ್ತಿ ಇದೆಯೇ ಎಂಬ ಆಧಾರದಲ್ಲಿ ಆ ಸಾಲಪತ್ರಗಳನ್ನು ಖರೀದಿಸುತ್ತಾರೆ. ಇದರಲ್ಲಿ ಆ ದೇಶದ ಸರಕಾರದ ಸ್ಥಿರತೆಯೂ ಒಂದು ಅಂಶವಾಗುತ್ತದೆ. ಸಾಮಾನ್ಯವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸಾರ್ವಭೌಮ ಸಾಲದ ಅರ್ಹತೆ ಅಭಿವೃದ್ಧಿ ಹೊಂದಿರುವ ದೇಶಗಳ ಸಾರ್ವಭೌಮ ಸಾಲದ ಅರ್ಹತೆಗಿಂತ ಕಡಿಮೆ ಎಂದು ಪರಿಗಣಿಸಲಾಗುತ್ತದೆ. ಆದರೆ ಜಗತ್ತಿನ ಅತ್ಯಂತ ಮುಂದುವರೆದ, ಅಭಿವೃದ್ಧಿ ಹೊಂದಿದ ದೇಶ ಎನ್ನಿಸಿಕೊಂಡು ಕಳೆದ ಎಪ್ಪತ್ತು ವರ್ಷಗಳಿಂದ ಅತ್ಯುನ್ನತ ಸಾಲ ಅರ್ಹತೆ ಪಡೆದಿದ್ದ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಈ ಅರ್ಹತೆ ಕೆಳಮಟ್ಟಕ್ಕೆ ಬಂತು ಎಂಬುದು ಈಗ ಜಾಗತಿಕ ಹಣಕಾಸು ಮಾರುಕಟ್ಟೆಗಳಲ್ಲಿ ದೊಡ್ಡ ಕೋಲಾಹಲವನ್ನೇ ಸೃಷ್ಟಿಸಿದೆ.

ಅಮೆರಿಕಾ ದೇಶದ ಒಟ್ಟು ರಾಷ್ಟ್ರೀಯ ಸಾಲದ ಮೊತ್ತ 15 ಟ್ರಿಲಿಯನ್(ಲಕ್ಷ ಕೋಟಿ) ಡಾಲರುಗಳನ್ನು ಸಮೀಪಿಸಿದೆ. ಭಾರತವೂ ಅಮೆರಿಕಾ ಸರಕಾರದ ಸಾಲಪತ್ರಗಳನ್ನು ಖರೀದಿಸಿದೆ, ಅಂದರೆ ಅಮೆರಿಕನ್ ಸರಕಾರಕ್ಕೆ ಸಾಲ ಕೊಟ್ಟಿದೆ. ಅಮೆರಿಕನ್ ಸಾಲ ಪತ್ರಗಳ 15 ದೊಡ್ಡ ವಿದೇಶಿ ಖರೀದಿದಾರರಲ್ಲಿ ಭಾರತವೂ ಒಂದು. ಇದರ ಮೊತ್ತ 41 ಬಿಲಿಯ ಡಾಲರುಗಳು (ಸುಮಾರು 1.83 ಲಕ್ಷ ಕೋಟಿ ರೂ.). ಇದು ಇತರ ಮುಂದುವರೆದ ದೇಶಗಳಾದ ಫ್ರಾನ್ಸ್ ಮತ್ತು ಆಸ್ಟ್ರೇಲಿಯ ಕೊಟ್ಟಿರುವ ಸಾಲಗಳಿಗಿಂತಲೂ ಹೆಚ್ಚು.

ಈ ಸಾಲಪತ್ರಗಳಲ್ಲಿ ಬಹುಪಾಲು ಭಾರತೀಯ ರಿಝರ್ವ್ ಬ್ಯಾಂಕ್ ಬಳಿಯಿದೆ, ಅದರ ವಿದೇಶಿ ವಿನಿಮಯ ಭಂಡಾರದ ಭಾಗವಾಗಿ. ಅಮೆರಿಕಾ ಸರಕಾರದ ಸಾಲಪತ್ರ ಜಗತ್ತಿನ ಅತ್ಯಂತ ವಿಶ್ವಾಸಾರ್ಹ ಸಾಲಪತ್ರಗಳಲ್ಲಿ ಪ್ರಮುಖವಾದುದು ಎಂದು ಹೇಳಿಕೊಂಡು ರಿಝರ್ವ್ ಬ್ಯಾಂಕ್ ಅಲ್ಲಿ ಸಾಲ ಬಿಕ್ಕಟ್ಟು ಆಳವಾಗುತ್ತಿದೆ ಎಂದು ಕಂಡು ಬಂದರೂ ಕಳೆದ ಒಂದೇ ವರ್ಷದಲ್ಲಿ ಈ ಸಾಲಪತ್ರ ಖರೀದಿಯ ಪ್ರಮಾಣ 10 ಬಿಲಿಯ ಡಾಲರುಗಳಷ್ಟು (ಅಂದರೆ ಮೂರನೇ ಒಂದು ಪಾಲಿನಷ್ಟು) ಹೆಚ್ಚಿತು ಎಂದು ಹೇಳಲಾಗುತ್ತಿದೆ. ○

ಚಳುವಳಿಗಳ ಮೇಲಿನ ನಿರ್ಬಂಧಗಳು

ಪುಟ 9 ರಿಂದ

ಸಂದರ್ಭದಲ್ಲಿ ಸುಪ್ರೀಂಕೋರ್ಟಿನಿಂದ ಯಾವ ರೀತಿಯ ತೀರ್ಪು ಬರುತ್ತದೋ ಎಂಬ ಆತಂಕದಿಂದ ಆ ವಿಚಾರ ಕೈಬಿಟ್ಟರು.

ಸುಪ್ರೀಂಕೋರ್ಟ್ ಹೋರಾಟಗಳ ಕುರಿತು ಇಂತಹ ತೀರ್ಪು ಕೊಟ್ಟ ಕೂಡಲೇ ಕೇಂದ್ರ ಸರ್ಕಾರ ಎಲ್ಲಾ ರಾಜ್ಯ ಸರ್ಕಾರಗಳಿಗೆ ಚಳುವಳಿಕಾರರಿಂದ ಮುಚ್ಚಳಿಕೆ (Under taking) ತೆಗೆದುಕೊಳ್ಳಬೇಕೆನ್ನುವ ಎಂದು ಲಿಖಿತ ಸೂಚನೆ ನೀಡಿತು. ಕೋಮುವಾದಿ ಸಂಘಟನೆಗಳು, ಕೋಮುವಾದಿ ಕಿಡಿಗೇಡಿಗಳು ಕೋಮುದ್ವೇಷ ಕೆರಳಿಸುವ ಉಗ್ರ ಭಾಷಣ ಮಾಡಿ ಕೋಮುಗಲಭೆಗೆ ಪ್ರಚೋದನೆ ನೀಡುವ ಪ್ರಶ್ನೆಯನ್ನು ಕೂಡ ಇಲ್ಲಿ ನೆಪವಾಗಿ ಇಟ್ಟುಕೊಂಡು ಬಳಸಿಕೊಳ್ಳಲಾಯಿತು. ಇಂತಹದ್ದೊಂದು ಲಿಖಿತ ಸೂಚನೆ ಬಂದದ್ದೇ ತಡ ದೇಶಾದ್ಯಂತ ಪೋಲೀಸರಿಗೆ ಇದ್ದಕ್ಕಿದ್ದಂತೆ ದೈತ್ಯ ಬಲ ಬಂದಂತಾಗಿ ಪೋಲೀಸರು ಚಳುವಳಿಕಾರರ ಮೇಲೆ ಹತ್ತಾರು ಕಟ್ಟಳೆ ವಿಧಿಸಲು ಶುರು ಮಾಡಿಕೊಂಡರು. ಮತ್ತು ತಮ್ಮ ಲಾಠಿಗಳನ್ನು ಸವರಿ ಸಿದ್ಧ ಮಾಡಿಟ್ಟುಕೊಂಡರು. ಈ ಎಲ್ಲಾ ಬೆಳವಣಿಗೆಗಳ ಫಲವೇ ಬೆಂಗಳೂರಿನಲ್ಲಿ 'ಅಲ್ಲಿ ನಿಲ್ಲಬೇಡಿ, ಇಲ್ಲಿ ಕೂರಬೇಡಿ' ಎಂಬ ನಿರ್ಬಂಧಗಳು. ಮೈಸೂರಿನಲ್ಲಿ ಶಾಂತಿಯುತ ಪ್ರತಿಭಟನಾಕಾರರ ಮೇಲೆ ಹಾಗೂ ಪ್ರತಿಭಟನೆಯ ಹಕ್ಕು ನಿರಾಕರಿಸುವ ವ್ಯಾಪಕ ಅಡೆತಡೆಗಳು ಲಾಠಿ ಪ್ರಹಾರಗಳು ಹೊಡೆತಗಳು.

ಆದರೆ ಭ್ರಷ್ಟಾಚಾರಕ್ಕೂ ಹಾಗೂ ಸುಪ್ರೀಂಕೋರ್ಟ್ ತೀರ್ಪುಗಳೆರಡಕ್ಕೂ ಮೂಲ ಜಾಗತೀಕರಣ, ಖಾಸಗೀಕರಣ ನೀತಿಗಳು, ಜಾಗತೀಕರಣ, ಖಾಸಗೀಕರಣ ನೀತಿಗಳಿಂದ ಪ್ರಭಾವಿತವಾದ ಕೋರ್ಟ್‌ಗಳು ಚಳುವಳಿಯ ಮೇಲೆ ಬಂದ್, ಮುಷ್ಕರ, ಹರತಾಳಗಳ ಮೇಲೆ ಹೇರಿದ ನಿರ್ಬಂಧಗಳನ್ನು ಈ ಸಮಯದಲ್ಲಿ ನೆನಪಿಸಿಕೊಳ್ಳಬೇಕು.

ಆಗಸ್ಟ್ 6 ಮತ್ತು 7, 2011 ರಂದು ಕೊಲ್ಕತ್ತಾದಲ್ಲಿ ಸೇರಿದ್ದ ಸಿ.ಪಿ.ಐ(ಎಂ) ಕೇಂದ್ರ ಸಮಿತಿ ಸಭೆಯ ನಿರ್ಣಯಗಳು

ಪ್ರಬಲ ಲೋಕಪಾಲ್, ಆಹಾರ ಭದ್ರತೆ–ಚಿಲ್ಲರೆ ವ್ಯಾಪಾರ–ವ್ಯಾಪಾರಿಗಳ ರಕ್ಷಣೆಗಾಗಿ – ಬೆಲೆ ಏರಿಕೆ – ಬಂಗಾಳದಲ್ಲಿ ಎಡರಂಗದ ಮೇಲಿನ ದಾಳಿಗಳ ವಿರುದ್ಧ

ಗರಿಗೆದರಲಿ ಜನಾಂದೋಲನ

ಾಗತಿಕ ಆರ್ಥಿಕ ಬಿಕ್ಕಟ್ಟು

2008ರಲ್ಲಿ ಪ್ರಾರಂಭವಾದ ಜಾಗತಿಕ ಆರ್ಥಿಕ ಿಕ್ಕಟ್ಟು ಇನ್ನೂ ಚೇತರಿಸಿಕೊಂಡಿಲ್ಲ ಎಂದು ೇಂದ್ರ ಸಮಿತಿಯು ಗಮನಿಸಿದೆ. ಇತ್ತೀಚೆಗೆ ಮೆರಿಕಾದಲ್ಲಿ ಉಂಟಾದ ಸಾಲ ಗರಿಷ್ಠದ ಮಸ್ಯೆ ಮತ್ತು ಕೆಲವು ಯುರೋಪಿಯನ್ ೇಶಗಳಲ್ಲಿ ಮುಂದುವರಿಯುತ್ತಿರುವ ಾರ್ವಭೌಮ ಸಾಲದ ಬಿಕ್ಕಟ್ಟು, ನವ ದಾರೀಕರಣದ ನೀತಿಗಳು ದಾರಿಯ ಅಂಚಿಗೆ ಂದು ನಿಂತಿದೆ ಎಂಬ ಸತ್ಯವನ್ನು ಹೇಳುತ್ತಿವೆ. ್ಯಾಂಕುಗಳನ್ನು ಮತ್ತು ಹಣಕಾಸಿನ ಸಂಸ್ಥೆಗಳನ್ನು ಿಕ್ಕಟ್ಟಿನಿಂದ ಪಾರು ಮಾಡಿದ ನಂತರ, ಅಮೇರಿಕಾ ುತ್ತು ಕೆಲವು ಯುರೋಪಿನ ದೇಶಗಳ ರ್ಕಾರಗಳು ತೆಗೆದುಕೊಂಡಿದ್ದ ಕಠಿಣ ಕ್ರಮಗಳು ನಸಾಮಾನ್ಯರ ಬದುಕಿನ ಮೇಲೆ ಪರಿಣಾಮ ೀರಿವೆ. ವೆಚ್ಚದ ಮೇಲೆ ವಿಧಿಸಿದ ಕಡಿತವು ಲ್ಯಾಣ ಕಾರ್ಯಕ್ರಮಗಳನ್ನು ುರ್ಬಲಗೊಳಿಸಿವೆ ಮತ್ತು ಆರ್ಥಿಕ ಂಜರಿತವನ್ನು ಇನ್ನೂ ಹದಗೆಡಿಸಿವೆ. ಏರಿದ ಿರುದ್ಯೋಗ, ನಿವೃತ್ತಿ ವೇತನ ಮತ್ತು ಇನ್ನಿತರ ೌಲಭ್ಯಗಳನ್ನು ಕಡಿತಗೊಳಿಸಿರುವುದು ುರೋಪಿನ ಹಲವಾರು ದೇಶಗಳಲ್ಲಿ ಾರ್ಮಿಕರು, ವಿದ್ಯಾರ್ಥಿಗಳು, ಯುವಜನರ ್ಯಾಪಕ ಪ್ರತಿಭಟನೆಗೆ ಕಾರಣವಾಗಿವೆ.

ಈ ಹಣಕಾಸಿನ ಹಾಗೂ ಆರ್ಥಿಕ ಿಕ್ಕಟ್ಟಿನಿಂದ ಯಾವುದೇ ಪಾಠಗಳನ್ನು ಕಲಿಯದ ಾರತದ ಯು.ಪಿ.ಎ ಸರ್ಕಾರವು ಅದೇ ನವ ದಾರೀಕರಣ ನೀತಿಗಳನ್ನು ಅನುಸರಿಸಿ ೊಂಡು ಬರುತ್ತಿವೆ ಮತ್ತು ಆ ನೀತಿಗಳ ಲವಾಗಿ ಕ್ರೂರ ಬೆಲೆ ಏರಿಕೆ, ುದ್ಯೋಗಾವಕಾಶಗಳ ಕೊರತೆ ಹಾಗೂ ಪರೀತ ಭ್ರಷ್ಟಾಚಾರ ಉಂಟಾಗಿ ಜನರ ಪರಿಸ್ಥಿತಿ ಹದಗೆಡುತ್ತಿದೆ.

ುಂಬಿ ತುಳುಕುತ್ತಿರುವ ಭ್ರಷ್ಟಾಚಾರ

ಯು.ಪಿ.ಎ. ಸರ್ಕಾರವು ಉನ್ನತ ಮಟ್ಟದ ್ರಷ್ಟಾಚಾರಕ್ಕೆ ಹೆಸರುವಾಸಿಯಾಗಿದೆ. ಸರ್ಕಾರದ ೊಡ್ಡ ದೊಡ್ಡ ಹುದ್ದೆಯಲ್ಲಿರುವವರು ಾಗಿಗಳಾಗಿರುವ ಹೊಸ ಹೊಸ ಭ್ರಷ್ಟಾಚಾರದ ಗರಣಗಳು ಪ್ರತಿನಿತ್ಯ ಹೊರಬರುತ್ತಿವೆ. 2ಜಿ ರಂಗಾಂತರ ಹಗರಣವಲ್ಲದೆ ಇನ್ನೂ ದೊಡ್ಡ ್ಣ ಗೋದಾವರಿ ಜಲಾನಯನ(ಕೆ.ಜಿ.) ್ರದೇಶದ ಅನಿಲ ಗುತ್ತಿಗೆ ಅವ್ಯವಹಾರ ಸಿ.ಎ.ಜಿ [illegible] ಮೂಲಕ ಜಗಜ್ಜಾಹೀರಾಗಿದೆ. ಇತ್ತೀಚೆಗೆ ಸಂಸತ್ತಿನಲ್ಲಿ ಮಂಡಿಸಲಾದ ಕಾಮನ್ ವೆಲ್ತ್ ಗೇಮ್ಸ್ (ಸಿ.ಡಬ್ಲ್ಯೂ.ಜಿ) ಕುರಿತ ಸಿ.ಎ.ಜಿ ವರದಿಯು ದೆಹಲಿ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ಭ್ರಷ್ಟ ಕೃತ್ಯಗಳನ್ನು ಬಯಲು ಮಾಡಿದೆ.

ಅದು 2ಜಿ ತರಂಗಾಂತರ ವ್ಯವಹಾರವಾಗಿರಬಹುದು ಅಥವಾ ಕೆ.ಜಿ. ಅನಿಲ ಗುತ್ತಿಗೆ ವಿಷಯವಾಗಿರಬಹುದು ಅಥವಾ ಸಿ.ಡಬ್ಲ್ಯೂ.ಜಿ ಸಂಘಟನಾ ಸಮಿತಿಗೆ ಸುರೇಶ್ ಕಲ್ಮಾಡಿಯನ್ನು ಅಧ್ಯಕ್ಷನನ್ನಾಗಿ ನೇಮಕ ಮಾಡಿದ್ದಿರಬಹುದು ಇವೆಲ್ಲವುಗಳಲ್ಲಿ ಪ್ರಧಾನಮಂತ್ರಿಗಳ ಪಾತ್ರ ಪ್ರಶ್ನಾರ್ಹವಾಗಿದೆ. 2ಜಿ ತರಂಗಾಂತರ ಮತ್ತು ಕೆ.ಜಿ. ಅನಿಲ ಗುತ್ತಿಗೆ ಈ ಎರಡು ಹಗರಣಗಳಲ್ಲಿನ ಬೆಳವಣಿಗೆಗಳು ಪ್ರಧಾನಮಂತ್ರಿಗಳ ಗಮನಕ್ಕೆ ಬಂದಿದ್ದಾಗಲೂ ಆ ಅವ್ಯವಹಾರಗಳನ್ನು ತಡೆಯಲು ಅವರು ಮುಂದಾಗಲಿಲ್ಲ. ಇಂತಹ ಭ್ರಷ್ಟ ಆಡಳಿತದ ಉತ್ತುಂಗ ಸ್ಥಾನದಲ್ಲಿರುವ ಅವರು ಹೊಣೆ ಹೊರಲೇಬೇಕು.

ದೊಡ್ಡ ಬಂಡವಾಳಿಗರ ಮತ್ತು ಖಾಸಗೀ ಉದ್ದಿಮೆಗಳ ಅನಿರ್ಬಂಧಿತ ಸುಲಿಗೆ ಮತ್ತು ದರೋಡೆಗೆ ಯು.ಪಿ.ಎ ಸರ್ಕಾರ ಮಧ್ಯವರ್ತಿಯಾಗಿ ಮತ್ತು ಅಡಿಯಾಳಾಗಿ ಕೆಲಸ ಮಾಡಲು ಅದು ಅನುಸರಿಸುತ್ತಿರುವ ನವ ಉದಾರೀಕರಣ ನೀತಿಗಳೇ ಮುಖ್ಯ ಕಾರಣ ಎಂಬ ಅಂಶವನ್ನು ಕೇಂದ್ರ ಸಮಿತಿಯು ಒತ್ತಿಹೇಳಲು ಬಯಸುತ್ತದೆ. ಈ ಆರ್ಥಿಕ ದೌಲತ್ತಿನಿಂದಲೇ ನೇರವಾಗಿ ಉನ್ನತ ಮಟ್ಟದ ಭ್ರಷ್ಟಾಚಾರ ಹುಟ್ಟಿದ್ದು.

ಬೇಕಾಬಿಟ್ಟಿಯಾಗಿ ಅನೈತಿಕ ಗಣಿಗಾರಿಕೆ ನಡೆಯುತ್ತಿರುವ ಸಂಗತಿ ನೈಸರ್ಗಿಕ ಸಂಪತ್ತು ಹೇಗೆ ಲೂಟಿಯಾಗುತ್ತಿದೆ ಎಂಬುದನ್ನು ಸೋದಾಹರಣವಾಗಿ ಬಿಚ್ಚಿಡುತ್ತಿದೆ. ಕರ್ನಾಟಕ ಬಿ.ಜೆ.ಪಿ. ಸರ್ಕಾರದ ಮೌನ ಸಮ್ಮತಿಯಿಂದ ದೊಡ್ಡಮಟ್ಟದಲ್ಲಿ ಅನೈತಿಕ ಕಬ್ಬಿಣ ಗಣಿಗಾರಿಕೆ ನಡೆಯುತ್ತಿರುವುದನ್ನು ಕರ್ನಾಟಕ ಲೋಕಾಯುಕ್ತ ವರದಿಯು ದಾಖಲೆ ಸಮೇತ ಹೊರಗೆಡಹಿದೆ. ಲೋಕಾಯುಕ್ತರ ವರದಿಯ ಆಧಾರದಲ್ಲಿ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಇನ್ನಿತರ ಆಪಾದಿತರ ಮತ್ತು ಸಂಸ್ಥೆಗಳ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಬೇಕು ಮತ್ತು ಶಿಕ್ಷೆಗೊಳಪಡಿಸಬೇಕು.

ಲೋಕಪಾಲ್ ಮಸೂದೆ.

ಒಂದು ಪರಿಣಾಮಕಾರಿಯಾದ ಲೋಕಪಾಲ್‌ರನ್ನು ನೇಮಕ ಮಾಡಲು ಎಂತಹ ಶಾಸನದ ಅಗತ್ಯವಿದೆ ಎಂಬ ವಿಚಾರವನ್ನು ಸಿ.ಪಿ.ಐ(ಎಂ) ಈಗಾಗಲೇ ಪ್ರಚುರಪಡಿಸಿದೆ. ಸರ್ಕಾರದ ಲೋಕಪಾಲ್ ಮಸೂದೆ ದುರ್ಬಲವಾಗಿದೆ ಮತ್ತು ಅಸಮರ್ಥವಾಗಿದೆ. ಅದು ಪ್ರಧಾನ ಮಂತ್ರಿಗಳನ್ನು ಅದರ ವ್ಯಾಪ್ತಿಗೆ ಒಳಪಡಿಸಿಲ್ಲ. ಅದನ್ನೊಂದು ಸ್ವತಂತ್ರ ಸಂಸ್ಥೆಯನ್ನಾಗಿಸುವುದರ ಮೂಲಕ ಉನ್ನತ ಮಟ್ಟದಲ್ಲಿನ ಭ್ರಷ್ಟಾಚಾರವನ್ನು ಮಟ್ಟಹಾಕಲು ಸಾಕಷ್ಟು ಅಧಿಕಾರವನ್ನು ಅದಕ್ಕೆ ನೀಡಿಲ್ಲ. ಈ ನಿಟ್ಟಿನಲ್ಲಿ, ಒಂದು ಪ್ರಭಾವಯುತವಾದ ಲೋಕಪಾಲ್‌ಗಾಗಿ ಮತ್ತು ಅದರ ಪರವಾಗಿ ಜನಾಭಿಪ್ರಾಯ ಮೂಡಿಸಲು ವ್ಯಾಪಕ ಪ್ರಚಾರಾಂದೋಲನ ಕೈಗೊಳ್ಳಲು ಕೇಂದ್ರ ಸಮಿತಿಯು ನಿರ್ಧರಿಸಿದೆ. ಉನ್ನತ ನ್ಯಾಯಾಂಗದಲ್ಲಿನ ಭ್ರಷ್ಟಾಚಾರ ತಡೆಯಲು ರಾಷ್ಟ್ರೀಯ ನ್ಯಾಯಾಧಿಕರಣ ಆಯೋಗವನ್ನು ಸ್ಥಾಪಿಸುವುದು, ಚುನಾವಣೆಗಳಲ್ಲಿ ಧನಬಲದ ಬಳಕೆಗೆ ಕಡಿವಾಣ ಹಾಕಲು ಚುನಾವಣಾ ಸುಧಾರಣೆಗಳನ್ನು ತರುವುದು ಹಾಗೂ ಕಪ್ಪು ಹಣ ಹೊರತೆಗೆಯಲು ಮತ್ತು ವಿದೇಶಗಳಲ್ಲಿ ಬಚ್ಚಿಟ್ಟಿರುವ ಕಪ್ಪು ಹಣವನ್ನು ಹಿಂದಕ್ಕೆ ತರಲು ಕ್ರಮ ಕೈಗೊಳ್ಳುವುದನ್ನೂ ಒಳಗೊಂಡಂತೆ ಉನ್ನತ ಮಟ್ಟದ ಭ್ರಷ್ಟಾಚಾರ ತೊಡೆದುಹಾಕಲು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಿ.ಪಿ.ಐ(ಎಂ) ಒತ್ತಾಯಿಸುತ್ತದೆ.

> **ಪಕ್ಷದ ಮಹಾಧಿವೇಶನ**
>
> **ಪಕ್ಷದ 20ನೇ ಮಹಾಧಿವೇಶನವನ್ನು ಕೇರಳದ ಕೋಝಿಕೋಡ್‌ನಲ್ಲಿ ನಡೆಸಲು ಕೇಂದ್ರ ಸಮಿತಿಯು ತೀರ್ಮಾನಿಸಿತು. ಮಹಾಧಿವೇಶನವು 2012ರ ಏಪ್ರಿಲ್ 4 ರಿಂದ 9 ರವರೆಗೆ ನಡೆಯಲಿದೆ. ಮಹಾಧಿವೇಶನದಲ್ಲಿ ಭಾಗವಹಿಸಲು, ಆಯ್ಕೆಯಾಗಬೇಕಾದ ರಾಜ್ಯವಾರು ಪ್ರತಿನಿಧಿಗಳ ಸಂಖ್ಯೆಯನ್ನು ಕೇಂದ್ರ ಸಮಿತಿ ನಿರ್ಧರಿಸಿತು.**

ಬೆಲೆ ಏರಿಕೆ ಮತ್ತು ಹಣದುಬ್ಬರ

ಇತ್ತೀಚೆಗೆ ಏರಿಸಿದ ಡೀಸೆಲ್, ಸೀಮೆಎಣ್ಣೆ ಮತ್ತು ಅಡುಗೆ ಅನಿಲದ ಬೆಲೆಗಳನ್ನೂ ಒಳಗೊಂಡಂತೆ ಪದೇ ಪದೇ ಪೆಟ್ರೋಲಿಯಂ ವಸ್ತುಗಳ ಬೆಲೆಗಳನ್ನು ಏರಿಸುವ ಸರ್ಕಾರದ ನೀತಿಯನ್ನು ಕೇಂದ್ರ ಸಮಿತಿಯು [illegible] ಖಂಡಿಸಿದೆ. [illegible] ಮತ್ತು 10 ರ [illegible] ಹಣದುಬ್ಬರ ಏರಿಕೆಯು [illegible] ಏರಿಕೆಯನ್ನು ತಡೆಯಲು [illegible] ಹಾಗೂ ಅಗತ್ಯವಿರುವ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಮನಸ್ಸಿಲ್ಲ ಎಂಬ ಸತ್ಯ ಇತ್ತೀಚೆಗೆ ಸಂಸತ್ತಿನಲ್ಲಿ ಬೆಲೆ ಏರಿಕೆ ಕುರಿತ ಚರ್ಚೆಯ ಸಂದರ್ಭದಲ್ಲಿ ವ್ಯಕ್ತವಾಗಿದೆ.

ಕೇಂದ್ರ ಸರ್ಕಾರ ಮತ್ತು ಬಿ.ಜೆ.ಪಿ ಪರಸ್ಪರ ಒಪ್ಪಿತವಾದ ಹೇಳಿಕೆಗೆ ಒಂದಾಗೂಡಿ ಆ ನಿರ್ಣಯವನ್ನು ಅಂಗೀಕರಿಸಿದ್ದನ್ನು ಕೇಂದ್ರ ಸಮಿತಿ ಗಮನಿಸಿದೆ. ಬೆಲೆ ಏರಿಕೆ ಹತ್ತಿಕ್ಕುವಲ್ಲಿ ಆದ ವಿಫಲತೆಯಲ್ಲಿ ಸರ್ಕಾರದ ಹೊಣೆಯೂ ಇದೆ ಎಂಬ ವಾಸ್ತವವನ್ನು ಮರೆಮಾಚಿದ್ದಲ್ಲದೆ ಏರಿಸಿರುವ ಪೆಟ್ರೋಲಿಯಂ ವಸ್ತುಗಳ ಬೆಲೆಯನ್ನು ಹಿಂದಕ್ಕೆ ಪಡೆಯಬೇಕೆಂಬ ಒತ್ತಾಯ ಕೂಡ ಆ ನಿರ್ಣಯದಲ್ಲಿರಲಿಲ್ಲ. ಆ ನಿರ್ಣಯಕ್ಕೆ ಒಂದು ತಿದ್ದುಪಡಿಯನ್ನು ತರಬೇಕೆಂದು ಎಡಪಕ್ಷಗಳು ಮತ್ತಿತರ ಜಾತ್ಯತೀತ ವಿರೋಧ ಪಕ್ಷಗಳು ಒತ್ತಾಯಮಾಡಿದವು ಮತ್ತು ಸಭಾತ್ಯಾಗ ಮಾಡಿ ಪ್ರತಿಭಟಿಸಿದವು. ಬೆಲೆಏರಿಕೆ ವಿರುದ್ಧ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆ ನೀತಿಯನ್ನು ಬದಲಾಯಿಸಬೇಕೆಂಬ ತಮ್ಮ ಹೋರಾಟವನ್ನು ಪಕ್ಷದ ಎಲ್ಲಾ ಘಟಕಗಳು ಮುಂದುವರಿಸಬೇಕೆಂದು ಕೇಂದ್ರ ಸಮಿತಿ ಕರೆ ಕೊಡುತ್ತದೆ.

ಆಹಾರ ಸುಭದ್ರತೆ ಮಸೂದೆ

ಆಹಾರ ಸುಭದ್ರತೆ ಮಸೂದೆಯನ್ನು ಸರ್ಕಾರವು ಅಂತಿಮಗೊಳಿಸಿದೆ. ಸಾರ್ವತ್ರಿಕ ಪಡಿತರ ಪದ್ಧತಿಯ ಬೇಡಿಕೆಯನ್ನು ಅದು ತಳ್ಳಿಹಾಕಿದೆ ಮತ್ತು ಎಪಿಎಲ್ ಹಾಗೂ ಬಿಪಿಎಲ್ ಪರಿಭಾಷೆಯನ್ನು ಸ್ವಲ್ಪ ಬದಲಾಯಿಸಿ ಅದೇ ನಿರ್ದಿಷ್ಟ ಗುರಿಯ(ಟಾರ್ಗೆಟೆಡ್) ಪದ್ಧತಿಯನ್ನು ಮುಂದುವರಿಸಿದೆ. ಯೋಜನಾ ಆಯೋಗದ ಬಡತನದ ಅಂದಾಜು ಮತ್ತು ಬಡವರು ಎಂದು ಅಧಿಕೃತವಾಗಿ ಗುರುತಿಸಲ್ಪಟ್ಟ ರಾಜ್ಯವಾರು ಗರಿಷ್ಠಮಿತಿಯ ನಡುವಿನ ಕೊಂಡಿ ವ್ಯವಸ್ಥೆಯನ್ನು ಮಸೂದೆಯು ಕಾನೂನುಬದ್ಧಗೊಳಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಗರಿಷ್ಠ ಮಿತಿಯನ್ನು ಜನಸಂಖ್ಯೆಯ ಶೇಕಡಾ 46 ಮತ್ತು ಪಟ್ಟಣ ಪ್ರದೇಶಗಳಲ್ಲಿ ಶೇಕಡಾ [illegible] ಎಂದು ನಿಗದಿಪಡಿಸಲಾಗಿದೆ. ಇದರಿಂದಾಗಿ ದೊಡ್ಡ ಸಂಖ್ಯೆಯ ಬಡವರು ಬಡತನದ ವಿವರಣೆಯ ವ್ಯಾಪ್ತಿಯಿಂದ ಹೊರಗುಳಿಯುತ್ತಾರೆ. ರಾಜ್ಯ ಸರ್ಕಾರಗಳ ಸಬ್ಸಿಡಿ ಪಡೆಯುತ್ತಿರುವ ಬಿಪಿಎಲ್ ಯೋಜನೆಗಳ ಫಲಾನುಭವಿಗಳ ರಾಷ್ಟ್ರೀಯ ಸರಾಸರಿ ಈಗ ಶೇಕಡಾ 56 ಇದೆ. ಎರಡನೆಯದಾಗಿ, ಅನೇಕ ರಾಜ್ಯಗಳಲ್ಲಿ ಎರಡು

ಸಿ.ಪಿ.ಐ(ಎಂ) ಕೇಂದ್ರ ಸಮಿತಿ ಸಭೆಯ ನಿರ್ಣಯಗಳು...

ಪುಟ 10 ರಿಂದ

ರೂಪಾಯಿಗೆ ಸಿಗುತ್ತಿರುವ ಅಕ್ಕಿಯ ಬೆಲೆಯನ್ನು ಮೂರು ರೂಪಾಯಿಗೆ ನಿಗದಿ ಮಾಡಲಾಗಿದೆ. ಮೂರನೆಯದಾಗಿ, ಒಬ್ಬ ವ್ಯಕ್ತಿಗೆ ಬಿ.ಪಿ.ಎಲ್ ಕೋಟಾ 7ಕೆ.ಜಿ ಯಾದರೆ ಎ.ಪಿ.ಎಲ್ ಕೋಟಾ ಕೇವಲ 3ಕೆ.ಜಿ ಇದೆ. ಎ.ಪಿ.ಎಲ್ ಕಾರ್ಡುದಾರರ ಸಂಖ್ಯೆಯನ್ನು ಕಡಿತಗೊಳಿಸಬಹುದು. ಏಕೆಂದರೆ ಗ್ರಾಮಾಂತರ ಪ್ರದೇಶದಲ್ಲಿ ಜನಸಂಖ್ಯೆಯ ಶೇಕಡಾ 25 ರಷ್ಟನ್ನು ಮತ್ತು ಪಟ್ಟಣ ಪ್ರದೇಶಗಳಲ್ಲಿ ಜನಸಂಖ್ಯೆಯ ಶೇಕಡಾ 50 ರಷ್ಟನ್ನು ಕಾನೂನುಬದ್ಧವಾಗಿ ಹೊರಗಿಡಲಾಗುತ್ತಿದೆ. ಆಹಾರಧಾನ್ಯಗಳ ಬೆಂಬಲ ಬೆಲೆಯ ಅರ್ಧಬೆಲೆಯನ್ನು ನಿಗದಿ ಮಾಡುವುದರಿಂದ ಎ.ಪಿ.ಎಲ್.ನವರಿಗೆ ಅಕ್ಕಿ ಬೆಲೆ ಸ್ಥಿರವಾಗಿರದೆ ಪದೇ ಪದೇ ಬದಲಾಗಿ ಎ.ಪಿ.ಎಲ್ ಕಾರ್ಡುದಾರರು ಸದಾ ತಾರತಮ್ಯಕ್ಕೆ ಒಳಗಾಗುತ್ತಿದ್ದಾರೆ. ಈ ಮೂಲಕ ಬೆಳೆಗಾರ ಮತ್ತು ಗ್ರಾಹಕನ ಹಿತಾಸಕ್ತಿಯ ನಡುವೆ ತಿಕ್ಕಾಟದ ಅಥವಾ ಸಂಘರ್ಷದ ಬೀಜವನ್ನು ಬಿತ್ತಲಾಗುತ್ತಿದೆ.

ಆಹಾರ ಧಾನ್ಯಗಳ ಬದಲಾಗಿ ನೇರವಾಗಿ ಹಣ ವರ್ಗಾವಣೆ ಮಾಡುವ ಕೇಂದ್ರದ ಯೋಜನೆಯನ್ನು ಶಾಸನಾತ್ಮಕ ಪ್ರತಿಬಂಧದ ಮೂಲಕ ರಾಜ್ಯ ಸರ್ಕಾರಗಳು ಒಪ್ಪಲೇಬೇಕಾಗುವ ಸ್ಥಿತಿಯನ್ನು ಉಂಟುಮಾಡುವ ಒಂದು ಆಕ್ಷೇಪಾರ್ಹವಾದ ಪ್ರಯತ್ನ ಈ ಮಸೂದೆಯಲ್ಲಿದೆ. ಇದು ಆಹಾರ ಸುಭದ್ರತೆಯ ಮೇಲೆ ತೀವ್ರತರದ ಪರಿಣಾಮವನ್ನುಂಟುಮಾಡುತ್ತದೆ ಮತ್ತು ಧಾನ್ಯಸಂಗ್ರಹಣೆ ಹಾಗೂ ರೈತರ ರಕ್ಷಣೆಯ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಪೂರೈಸುವ ಸಮಗ್ರ ಆಹಾರ ಸುಭದ್ರತೆ ಶಾಸನವೊಂದನ್ನು ಸಿ.ಪಿ.ಐ(ಎಂ) ಒತ್ತಾಯಿಸುತ್ತದೆ.

ಜಮೀನು ಸ್ವಾಧೀನತೆ

ಜಮೀನು ಸ್ವಾಧೀನತೆಯ ಕುರಿತ ಪಕ್ಷದ ನಿಲುವನ್ನು ಕೇಂದ್ರ ಸಮಿತಿಯು ಚರ್ಚೆ ಮಾಡಿತು. ಈಗ ಅಸ್ತಿತ್ವದಲ್ಲಿರುವ 1894ರ ಜಮೀನು ಸ್ವಾಧೀನತೆ ಕಾಯಿದೆಯ ಬದಲು ಒಂದು ಸಂಯುಕ್ತ ಜಮೀನು ಸ್ವಾಧೀನ ಮತ್ತು ಪುನಸ್ಥಾಪನೆ ಹಾಗೂ ಪುನರ್ವಸತಿ ಕಾಯಿದೆಯೊಂದರ ಅಗತ್ಯತೆಯನ್ನು ಕೇಂದ್ರ ಸಮಿತಿ ಪುನರುಚ್ಚರಿಸಿತು.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ

ವಿವಿಧ ಬ್ರಾಂಡ್ ವಲಯದಲ್ಲಿ ವಿದೇಶಿ ನೇರ ಬಂಡವಾಳ ಪ್ರವೇಶಕ್ಕೆ ಅನುವು ಮಾಡಿಕೊಡುವ ಮೂಲಕ ಚಿಲ್ಲರೆ ವ್ಯಾಪಾರದಲ್ಲೂ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ಮಾಡಿಕೊಡುವ ಸರ್ಕಾರದ ಉದ್ದೇಶಿತ ಕ್ರಮವನ್ನು ಕೇಂದ್ರ ಸಮಿತಿಯು ತೀವ್ರವಾಗಿ ವಿರೋಧಿಸುತ್ತದೆ. ಯು.ಪಿ.ಎ ಸರ್ಕಾರವು ವಾಲ್‌ಮಾರ್ಟ್ ನಂತಹ ಅಮೆರಿಕಾದ ದೊಡ್ಡ ಬಹುರಾಷ್ಟ್ರೀಯ ಕಂಪನಿಯ ಹಿತಾಸಕ್ತಿಯನ್ನು ಕಾಪಾಡುತ್ತಿದೆ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಬಂದರೆ ಬೆಲೆ ಏರಿಕೆಯನ್ನು ತಡೆಯಲು ಸಹಾಯವಾಗುತ್ತದೆ ಎಂಬ ಕುಂಟು ನೆಪವನ್ನು ಒಡ್ಡುತ್ತಿದೆ.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡುವ ಕ್ರಮ ಮುಂದುವರಿಸಬಾರದೆಂದು ಪಕ್ಷ ಸರ್ಕಾರಕ್ಕೆ ಎಚ್ಚರ ನೀಡಿದೆ. ಚಿಲ್ಲರೆ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶದ ವಿರುದ್ಧ ಲಕ್ಷಾಂತರ ಅಂಗಡಿಮುಗ್ಗಟ್ಟುಗಳು ಮತ್ತು ವ್ಯಾಪಾರಿಗಳ ಹಿತಾಸಕ್ತಿಯನ್ನು ಕಾಪಾಡಲು ಬಯಸುವ ಎಲ್ಲಾ ಶಕ್ತಿಗಳು ಒಂದುಗೂಡಿ ಐಕ್ಯ ಹೋರಾಟವನ್ನು ಕಟ್ಟಲು ಮುಂದಾಗಬೇಕೆಂದು ಕೇಂದ್ರ ಸಮಿತಿಯು ಕರೆ ನೀಡಿದೆ.

ಭಯೋತ್ಪಾದಕರ ಹಿಂಸೆ

ಭಯೋತ್ಪಾದಕರ ಹಿಂಸೆ ಮುಂದುವರಿಯುತ್ತಿರುವುದನ್ನು ಕೇಂದ್ರ ಸಮಿತಿಯು ಕಳವಳದಿಂದ ಗಮನಿಸಿದೆ. ಮುಂಬಯಿ ನಗರದಲ್ಲಿ ಜುಲೈನಲ್ಲಿ ನಡೆದ ಮೂರು ಸ್ಫೋಟಗಳು ಇತ್ತೀಚಿನವು. ಕಳವಳಕಾರಿ ಅಂಶವೆಂದರೆ ಮುಂಬಯಿ ಸ್ಫೋಟ ಮತ್ತು ಪುಣೆಯ ಜರ್ಮನ್ ಬೇಕರಿ ಸ್ಫೋಟದಂತಹ ಘಟನೆಗಳಿಗೆ ಕಾರಣರಾದಂಥವರನ್ನು ಇನ್ನೂ ಗುರುತಿಸಿಲ್ಲ ಮತ್ತು ಬಂಧಿಸಿಲ್ಲ. ಇದು ಗುಪ್ತಚಾರ ದಳದ ಮುಂದುವರಿದ ವಿಫಲತೆಯನ್ನು ತೋರಿಸುತ್ತದೆ ಹಾಗೂ ಹಲವಾರು ಭದ್ರತಾ ದಳಗಳ ನಡುವೆ ಹೊಂದಾಣಿಕೆಯ ಕೊರತೆಯನ್ನು ತೋರಿಸುತ್ತದೆ.

ತೆಲಂಗಾಣ ಹೋರಾಟ

ಶ್ರೀಕೃಷ್ಣಾ ಆಯೋಗದ ವರದಿ ಬಂದು ಏಳು ತಿಂಗಳಾದರೂ ತೆಲಂಗಾಣ ಮತ್ತು ಆಂಧ್ರ ಪ್ರದೇಶದ ಭವಿಷ್ಯದ ಬಗ್ಗೆ ಕೇಂದ್ರ ಸರ್ಕಾರವು ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ. ತೀರ್ಮಾನ ತೆಗೆದುಕೊಳ್ಳುವಲ್ಲಿ ಆಗುತ್ತಿರುವ ವಿಳಂಬವು ಪರಿಸ್ಥಿತಿಯನ್ನು ಇನ್ನೂ ಹದಗೆಡಿಸುತ್ತಿದೆ. ಪ್ರಾದೇಶಿಕ ವಾದದ ದಿಕ್ಕಿನಲ್ಲಿ ಜನರ ನಡುವೆ ಒಡಕು ಉಂಟಾಗುತ್ತಿದೆ. ಇನ್ನು ವಿಳಂಬ ಮಾಡದೆ ಕೇಂದ್ರ ಸರ್ಕಾರವು ತೀರ್ಮಾನವನ್ನು ತೆಗೆದಕೊಳ್ಳಬೇಕೆಂದು ಕೇಂದ್ರ ಸಮಿತಿಯು ಒತ್ತಾಯಿಸುತ್ತದೆ.

ಪಶ್ಚಿಮ ಬಂಗಾಳದ ಪರಿಸ್ಥಿತಿ

ಪಶ್ಚಿಮ ಬಂಗಾಳದ ಸಿ.ಪಿ.ಐ(ಎಂ) ಮತ್ತು ಎಡರಂಗದ ವಿರುದ್ಧ ನಡೆಯುತ್ತಿರುವ ದಾಳಿಗಳು ಮತ್ತು ದೌರ್ಜನ್ಯವನ್ನು ಕೇಂದ್ರ ಸಮಿತಿ ಖಂಡಿಸಿದೆ. ಚುನಾವಣೆಯ ನಂತರ 30 ಜನ ಸಿ.ಪಿ.ಐ(ಎಂ) ಸದಸ್ಯರು ಮತ್ತು ಬೆಂಬಲಿಗರನ್ನು ಹತ್ಯೆಮಾಡಲಾಗಿದೆ, ನೂರಾರು ಪಕ್ಷದ ಕಛೇರಿಗಳನ್ನು ಧ್ವಂಸ ಮಾಡಲಾಗಿದೆ ಮತ್ತು ವಶಪಡಿಸಿಕೊಳ್ಳಲಾಗಿದೆ. ಪಂಚಾಯತ್ ಸದಸ್ಯರುಗಳಿಗೆ ಬೆದರಿಕೆ ಒಡ್ಡಿ ಕೆಲಸ ಮಾಡದಂತೆ ನೋಡಿಕೊಳ್ಳಲಾಗಿದೆ. ಇನ್ನೂ ಸಾವಿರಾರು ಜನ ಮನೆ ಬಿಟ್ಟು ಹೋದವರು ಹಿಂತಿರುಗಿ ಬರಲಾಗಿಲ್ಲ.

ಹೊಸ ಸರ್ಕಾರದಡಿಯಲ್ಲಿ, ಅನೇಕ ಸ್ಥಳಗಳಲ್ಲಿ ಬರ್ಗಾದಾರರ, ಪಟ್ಟಾದಾರರ ಹಾಗೂ ಕೃಷಿ ಕೆಲಸಗಾರರ ಹಕ್ಕುಗಳ ಮೇಲೆ ದಾಳಿಗಳಾಗುತ್ತಿವೆ. ಕಳೆದ ಮೂರು ದಶಕಗಳಲ್ಲಿ ರೈತರು ಮತ್ತು ಗ್ರಾಮೀಣ ಜನರು ಗಳಿಸಿದ್ದನ್ನು ಕಸಿದುಕೊಳ್ಳುವ ಪ್ರಯತ್ನ ನಡೆಯುತ್ತಿದೆ. ತೃಣಮೂಲ ಕಾಂಗ್ರೆಸ್ ಸರ್ಕಾರ ಈ ದಾಳಿಗಳನ್ನು ತಡೆಯಲು ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ ಮತ್ತು ಅದಕ್ಕೆ ಕಾರಣರಾದವರ ಮೇಲೂ ಕ್ರಮ ಕೈಗೊಳ್ಳುತ್ತಿಲ್ಲ.

ಪಶ್ಚಿಮ ಬಂಗಾಳದಲ್ಲಿನ ದೌರ್ಜನ್ಯದ ವಿರುದ್ಧ ಮತ್ತು ಪ್ರಜಾಪ್ರಭುತ್ವ ರಕ್ಷಣೆಗಾಗಿ ಸಿ.ಪಿ.ಐ(ಎಂ) ಮತ್ತು ಎಡಪಕ್ಷಗಳು ದೇಶಾದ್ಯಂತ ಪ್ರಚಾರಾಂದೋಲನ ಹಮ್ಮಿಕೊಂಡಿವೆ. ಇನ್ನೂ ಮುಂದುವರಿಯುತ್ತಿರುವ ಈ ದಾಳಿ ಮತ್ತು ದೌರ್ಜನ್ಯಗಳು ಪಶ್ಚಿಮ ಬಂಗಾಳದ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ದಾಳಿ ಮಾತ್ರವಾಗಿರದೆ ಇಡೀ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿದೆ.

ಶ್ರೀಲಂಕಾ ತಮಿಳರ ಸಮಸ್ಯೆಗಳು

ಶ್ರೀಲಂಕಾದಲ್ಲಿ ಶಸ್ತ್ರಸಜ್ಜಿತ ಕಾಳಗ ಕೊನೆಗೊಂಡು ಎರಡು ವರ್ಷಗಳ ಕಳೆಯುತ್ತಾ ಬಂದಿದ್ದರೂ ಅಲ್ಲಿಯ ತಮಿಳರ ಸಮಸ್ಯೆಯನ್ನು ರಾಜಕೀಯವಾಗಿ ಇತ್ಯರ್ಥಗೊಳಿಸಲು ಯಾವುದೇ ಪ್ರತಿಫಲದಾಯಕ ಕ್ರಮವನ್ನು ಶ್ರೀಲಂಕಾ ಸರ್ಕಾರ ಕೈಗೊಳ್ಳುತ್ತಿಲ್ಲ. ಕಾಳಗ ಕೊನೆಗೊಂಡ ಕೂಡಲೇ ಒಂದು ರಾಜಕೀಯ ಪರಿಹಾರ ಕಂಡುಕೊಳ್ಳುತ್ತೇವೆ ಎಂದು ಅಧ್ಯಕ್ಷ ರಾಜಪಕ್ಸೆ ವಾಗ್ದಾನ ಮಾಡಿದ್ದಾಗ್ಯೂ ಸಹ, ಆ ನಿಟ್ಟಿನಲ್ಲಿ ಯಾವುದೇ ಪ್ರಗತಿ ಕಂಡು ಬಂದಿಲ್ಲ. ಸಂಯುಕ್ತ ಶ್ರೀಲಂಕಾದಲ್ಲಿ ತಮಿಳರು ಗೌರವದಿಂದ ಬೇರೆಯವರಂತೆ ಸಮಾನ ನಾಗರಿಕ ಹಕ್ಕನ್ನು ಪಡೆದು ಬದುಕು ನಡೆಸುವಂತೆ, ತಮಿಳು ಮಾತನಾಡುವ ಉತ್ತರ ಹಾಗೂ ಪೂರ್ವ ಪ್ರದೇಶಗಳಿಗೆ ಸ್ವಾಯತ್ತತೆಯನ್ನು ಘೋಷಿಸುವ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ.

ಇದರ ಜತೆಯಲ್ಲೇ, ಆ ಕಾಳಗದಿಂದಾಗಿ ನೆಲೆಕಳೆದುಕೊಂಡಿದ್ದವರಿಗೆ ಪುನರ್ವಸತಿ ಕಲ್ಪಿಸುವ ಕಾರ್ಯವನ್ನು ತ್ವರಿತಗತಿಯಲ್ಲಿ ಶ್ರೀಲಂಕಾ ಸರ್ಕಾರ ಮಾಡಬೇಕು. ಸೇನೆಯಿಂದ ದೌರ್ಜನ್ಯ ಮತ್ತು ಗಂಭೀರ ಮಾನವ ಹಕ್ಕುಗಳ ದಮನಗಳ ದೂರಿನ ಬಗ್ಗೆ ಒಂದು ಉನ್ನತ ಮಟ್ಟದ ಸ್ವತಂತ್ರ ತನಿಖಾ ಸಮಿತಿಯಿಂದ ತನಿಖೆ ನಡೆಸಬೇಕು. ಯಾವುದೇ ವಿಳಂಬಕ್ಕೆ ಅವಕಾಶವಿರದಂತೆ ತಮಿಳರ ಸಮಸ್ಯೆಗೆ ರಾಜಕೀಯ ಪರಿಹಾರ ತ್ವರಿತವಾಗಿ ಸಿಗುವಂತೆ ಭಾರತ ಸರ್ಕಾರ ಎಲ್ಲಾರೀತಿಯ ಪ್ರಯತ್ನ ಮಾಡಬೇಕು.

ಮುಂದಿನ ಕಾರ್ಯಕ್ರಮಗಳು

ಮುಂದಿನ ದಿನಗಳಲ್ಲಿ ಈ ಕೆಳಗಿನ ಕಾರ್ಯಾಚರಣೆಗಳನ್ನು ಮತ್ತು ಕಾರ್ಯಕ್ರಮಗಳನ್ನು ನಡೆಸಬೇಕೆಂದು ಕೇಂದ್ರ ಸಮಿತಿ ತೀರ್ಮಾನಿಸಿತು:

1. ಒಂದು ಪರಿಣಾಮಕಾರಿ ಲೋಕಪಾಲ್ ಕಾಯಿದೆಯನ್ನು ಮತ್ತು ಭ್ರಷ್ಟಾಚಾರ ವಿರೋಧಿ ಕ್ರಮಗಳನ್ನು ಪಕ್ಷ ಮತ್ತು ಎಡರಂಗ ಒತ್ತಾಯಿಸುತ್ತದೆ. ಇದಕ್ಕಾಗಿ ಎಡಪಕ್ಷಗಳು ಸೆಪ್ಟೆಂಬರ್ 2, 2011 ರಂದು ಸಂಸತ್ ಭವನದ ಎದುರು ಪ್ರತಿಭಟನೆಯನ್ನು ನಡೆಸಲಿವೆ;
2. ಪಶ್ಚಿಮ ಬಂಗಾಳದಲ್ಲಿ ಸಿ.ಪಿ.ಐ(ಎಂ) ಮತ್ತು ಎಡರಂಗದ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ದಾಳಿಗಳ ವಿರುದ್ಧ ದೇಶಾದ್ಯಂತ ಪ್ರಚಾರಾಂದೋಲನವನ್ನು ಪಕ್ಷ ಮುಂದುವರಿಸುತ್ತದೆ; ಪಶ್ಚಿಮ ಬಂಗಾಳ ಎಡರಂಗವು ಆಗಸ್ಟ್ 25, 2011 ರಂದು ದೆಹಲಿಯಲ್ಲಿ ಪ್ರತಿಭಟನಾ ಧರಣಿಯನ್ನು ನಡೆಸಲಿದೆ; ಅಂದು ಎಲ್ಲಾ ರಾಜ್ಯಗಳ ರಾಜಧಾನಿಯಲ್ಲಿ ಪ್ರತಿಭಟನಾ ಸಭೆಗಳನ್ನು ನಡೆಸಿ ರಾಜ್ಯಪಾಲರಿಗೆ ಮನವಿಪತ್ರ ಸಲ್ಲಿಸಲಾಗುವುದು;
3. ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೂ ಒಳಗೊಂಡಂತೆ ಒಂದು ಆಹಾರ ಸುಭದ್ರತಾ ಕಾನೂನಿಗಾಗಿ ಪಕ್ಷವು ಪ್ರಚಾರ ನಡೆಸುವುದು; ಎಲ್ಲಾ ವಿಭಾಗದ ಬಡ ಜನರನ್ನು ಒಳಗೊಳ್ಳುವಂತೆ ಬಿ.ಪಿ.ಎಲ್ ಅಡಿಯಲ್ಲಿ ನೋಂದಾಯಿಸುವ ಕೆಲಸವನ್ನು ಪಕ್ಷ ಮಾಡುತ್ತದೆ;
4. ಕಾರ್ಮಿಕ ಸಂಘಗಳು ಮತ್ತು ವ್ಯಾಪಾರಿಗಳ ಸಂಘಗಳೊಂದಿಗೆ ಸೇರಿಕೊಂಡು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಪ್ರವೇಶವನ್ನು ವಿರೋಧಿಸಲು ಜನರನ್ನು ಅಣಿನೆರೆಸುತ್ತದೆ;
5. ಹಲವಾರು ಕ್ಷೇತ್ರದ ಕಾರ್ಮಿಕರ ಮುಷ್ಕರ ಹೋರಾಟಗಳನ್ನು ಮತ್ತು ಕಾರ್ಮಿಕ ಸಂಘಗಳ ಐಕ್ಯ ಕಾರ್ಯಾಚರಣೆಗಳನ್ನು ಪಕ್ಷ ಸಂಪೂರ್ಣವಾಗಿ ಬೆಂಬಲಿಸುತ್ತದೆ. ಪಕ್ಷವು ಬೆಲೆಏರಿಕೆಯ ವಿರುದ್ಧ ಚಳುವಳಿಗಳನ್ನು ನಡೆಸುತ್ತದೆ ಮತ್ತು ಖಾಸಗಿ ಕಂಪನಿಗಳ ಭೂಸ್ವಾಧೀನ ವಿರುದ್ಧದ ಹಾಗೂ ರೈತರ ಹಕ್ಕುಗಳ ರಕ್ಷಣೆಗಾಗಿ ನಡೆಯುವ ಹೋರಾಟಗಳಲ್ಲಿ ಪಕ್ಷ ಭಾಗಿಯಾಗುತ್ತದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

'ಭ್ರಷ್ಟಾಚಾರ–ವಿರೋಧಿ ಚಳುವಳಿ'ಯೆಂದರೆ ಬೆಚ್ಚಿ ಬೀಳುವ ಯುಪಿಎ–2

"ಈ ಯಶೋಗಾಥೆಗಳು ಸಾಮಾನ್ಯದ್ದೇನಲ್ಲ. ಇಂದು ಜಗತ್ತು ಪ್ರಮುಖ ಜಾಗತಿಕ ಆರ್ಥಿಕ ಶಕ್ತಿಗಳಲ್ಲಿ ಒಂದೆನಿಸುವ ನಮ್ಮ ಸಾಮರ್ಥ್ಯವನ್ನು ಗುರುತಿಸುತ್ತಿದೆ. ಆದರೆ ಭ್ರಷ್ಟಾಚಾರದ ಸಮಸ್ಯೆ ಈ ಪರಿವರ್ತನೆಯಲ್ಲಿ ಒಂದು ದೊಡ್ಡ ಅಡ್ಡಿ" ಎಂದರು ಸ್ವತಂತ್ರ ಭಾರತದ ಇತಿಹಾಸದಲ್ಲೇ ಅತ್ಯಂತ ಭ್ರಷ್ಟ ಸರಕಾರ ಎಂದು ದಾಖಲೆ ನಿರ್ಮಿಸುತ್ತಿರುವ ಯುಪಿಎ–2 ಸರಕಾರದ ಪ್ರಧಾನಿಗಳು– ತಮ್ಮ ಸಾಂಪ್ರದಾಯಿಕ ಆಗಸ್ಟ್ 15 ಕೆಂಪುಕೋಟೆ ಭಾಷಣದಲ್ಲಿ. ಆದರೆ 65ನೇ ಸ್ವಾತಂತ್ರ್ಯ ದಿನಾಚರಣೆ ಮುಗಿಯುತ್ತಿದ್ದಂತೆಯೇ ಅವರ ಸರಕಾರ ಮತ್ತೊಮ್ಮೆ ತನ್ನ ದಮನಕಾರೀ ಮುಖವನ್ನು, ಜತೆಗೇ ಮೂರ್ಖತನವನ್ನೂ ಪ್ರದರ್ಶಿಸಿದೆ.

ರಾಂದೇವ್ ಪ್ರಕರಣದಿಂದಲಾದರೂ ಅದು ಬುದ್ಧಿ ಕಲಿತಿರಬಹುದೆಂಬ ನಿರೀಕ್ಷೆಯನ್ನು ಹುಸಿಗೊಳಿಸಿ ಅಣ್ಣಾ ಹಝಾರೆ ಮತ್ತು ಅವರ ಸಹಯೋಗಿಗಳನ್ನು ಬಂಧಿಸಿದ ಆಡಳಿತ ದೇಶಾದ್ಯಂತ ಈ ಪ್ರಜಾಪ್ರಭುತ್ವ–ವಿರೋಧಿ ಕ್ರಮಕ್ಕೆ ತೀವ್ರ ಪ್ರತಿಭಟನೆ, ಖಂಡನೆ ವ್ಯಕ್ತವಾದಾಗ, ಯುಪಿಎ ಅಧ್ಯಕ್ಷೆ ಸೋನಿಯಾ ಗಾಂಧಿ ಅಧ್ಯಕ್ಷತೆಯ 'ರಾಷ್ಟ್ರೀಯ ಸಲಹಾ ಮಂಡಳಿ'ಯ ಸದಸ್ಯರೂ ಕೂಡ ಖಂಡನೆಗಿಳಿದಾಗ, ಬಿಡುಗಡೆ ಮಾಡುವ ಆದೇಶ ಹೊರಡಿಸಿತು. ಎಂದಿನಂತೆ ಮೌನಿಯಾಗಿದ್ದ ಪ್ರಧಾನ ಮಂತ್ರಿಗಳು ಕೊನೆಗೂ ಬಾಯಿ ತೆರೆದು ಸಂಸತ್ತಿನಲ್ಲಿ ನೀಡಿದ ಹೇಳಿಕೆಯಲ್ಲಿ ತಮ್ಮದಲ್ಲ, ದಿಲ್ಲಿ ಪೋಲೀಸರದು ಎಂದಿದ್ದ ಕ್ರಮಗಳನ್ನು ಸಮರ್ಥಿಸಿಕೊಂಡರು, ಸಂಸತ್ತಿನ ಪಾರಮ್ಯವನ್ನು ನೆನಪಿಸಿಕೊಂಡರು.


ಆದರೆ ಬಂಧಿತರ ಬಿಡುಗಡೆಗೆ ಅವರು ನೀಡಿದ ಸಮಜಾಯಿಷಿ ಮತ್ತು ಗೃಹಮಂತ್ರಿಗಳು ನೀಡಿರುವ ಸಮಜಾಯಿಷಿ ಭಿನ್ನವಾಗಿದೆ. ಅಣ್ಣಾ ಹಝಾರೆಯವರು ಕಾನೂನು ಕ್ರಮದ ಬಗ್ಗೆ ಯೋಚಿಸುತ್ತಿದ್ದು ಶಾಂತಿ ಮತ್ತು ಕಾನೂನು ವ್ಯವಸ್ಥೆಗೆ ಭಂಗದ ಬೆದರಿಕೆ ಇಲ್ಲವೆಂದೆನಿಸಿ ದಿಲ್ಲಿ ಪೋಲೀಸರು ಈ ಕ್ರಮ ಕೈಗೊಂಡರು ಎಂದು ಪ್ರಧಾನ ಮಂತ್ರಿಗಳು ಹೇಳಿದರೆ, ಗೃಹಮಂತ್ರಿಗಳು ಇದು ರಾಜಕೀಯ ನಿರ್ಧಾರ, ತನ್ನ ಸಲಹೆಯ ಮೇರೆಗೆ ಪೋಲೀಸ್ ಕಮಿಶನರ್ ಈ ಕ್ರಮಕ್ಕೆ ಮುಂದಾದರು ಎಂದಿದ್ದಾರೆ. ಈ ನಡುವೆ ಕಾಂಗ್ರೆಸಿನವರು ಅಣ್ಣಾ ಹಝಾರೆಯವರ ಮೇಲೆ ವೈಯಕ್ತಿಕ ದೂಷಣೆಗಳನ್ನು ಮಾಡುವುದನ್ನು ನಿಲ್ಲಿಸಬೇಕು, ಅವರನ್ನು ಬಿಡುಗಡೆ ಮಾಡಬೇಕು ಎಂಬ ಕಾಂಗ್ರೆಸಿನ 'ಯುವರಾಜ'ರ ಸೂಚನೆಯ ಮೇರೆಗೆ ಇದು ನಡೆದಿದೆ ಎಂದೂ ಸುದ್ದಿ ಹರಡಿಸಲಾಗುತ್ತಿದೆ. ಒಟ್ಟಿನಲ್ಲಿ ಭ್ರಷ್ಟಾಚಾರದ ಬಗ್ಗೆ ಚರ್ಚೆಗೆ ತನ್ನ ಅಸಹನೆ ಮತ್ತು ಭೀತಿಯನ್ನು ಮುಚ್ಚಿಕೊಳ್ಳಲು ಯುಪಿಎ–2 ವಿವಿಧ ನಾಟಕಗಳನ್ನಾಡಬೇಕಾಗಿ ಬಂದಿದೆ ಎಂಬುದು ಸ್ಪಷ್ಟ. ಎಷ್ಟೆಂದರೆ, ಕಳೆದ ಏಳು ವರ್ಷಗಳಿಂದ ಯಾರ ಅಡಿಯಾಳು ಮಿತ್ರನಾಗಲು ಯುಪಿಎ–2 ಸರಕಾರ ತಿಪ್ಪರಲಾಗ ಹಾಕುತ್ತಿದೆಯೋ ಅವರೇ ಹಝಾರೆ ಆಂದೋಲನಕ್ಕೆ ನೆರವು ನೀಡುತ್ತಿದ್ದಾರೆ ಎಂದು ಟೀಕಿಸಲೂ ಹಿಂಜರಿಯಲಿಲ್ಲ (ಈ ಕುರಿತು ಈ ಸಂಚಿಕೆಯಲ್ಲೇ ಪ್ರಕಟವಾಗಿರುವ ಲೇಖನವನ್ನು ನೋಡಿ).

ಇಂತಹ ವಿಕಟ ನಾಟಕಗಳನ್ನು ನಿಲ್ಲಿಸಿ, ಭ್ರಷ್ಟಾಚಾರದ ವಿರುದ್ಧ ಮಾತಾಡುವವರ ಮೇಲೆ ಗುರಿಯಿಡಲು ಸಂಸತ್ತಿನ ಹೆಗಲನ್ನು ಬಳಸುವುದನ್ನು ನಿಲ್ಲಿಸಿ ಎನ್ನುತ್ತ ಸಿಪಿಐ(ಎಂ) ಸಂಸತ್ ಸದಸ್ಯರು, ಬೃಂದಾ ಕಾರಟ್ ರಾಜ್ಯಸಭೆಯಲ್ಲಿ ಯುಪಿಎ–2 ಸರಕಾರದ ಗೋಸುಂಬೆತನವನ್ನು ಬಯಲಿಗೆಳೆದಿದ್ದಾರೆ.

★

ಹಣದುಬ್ಬರವನ್ನು ಎದುರಿಸಲಾಗಿಲ್ಲ ಎಂದ ಯುಪಿಎ ಪ್ರಧಾನ ಮಂತ್ರಿಗಳು

ಹಣದುಬ್ಬರದ ದರ ಮತ್ತೆ ಎರಡಂಕಿಯನ್ನು ಸಮೀಪಿಸುತ್ತಿರುವಂತೆ ಯುಪಿಎ–2 ರ ಪ್ರಧಾನ ಮಂತ್ರಿಗಳು ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಅದನ್ನು ಎದುರಿಸುವುದು ತಮಗೆ ಸರಕಾರಕ್ಕೆ



ಸಾಧ್ಯವಾಗಿಲ್ಲ ಎಂದು ಒಪ್ಪಿಕೊಂಡರು. ಆದರೆ ಅದಕ್ಕೆ ಸಬೂಬು ಕೊಡಲು ಮರೆತಿಲ್ಲ. ಸಬೂಬು ಕೂಡ ಹೊಸದೇನಲ್ಲ–ಈ ಬೆಲೆಯೇರಿಕೆಗಳಿಗೆ ಕಾರಣ ದೇಶದ ಹೊರಗಿದೆ, ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳು, ಆಹಾರ ಧಾನ್ಯಗಳು ಮತ್ತು ಅಡುಗೆ ಎಣ್ಣೆಯ ಬೆಲೆಗಳು ಏರಿರುವುದರಿಂದ, ಮತ್ತು ನಾವು ಇವುಗಳ ಆಮದಿನ ಮೇಲೆ ಅವಲಂಬಿಸಿರುವುದರಿಂದ ಹೀಗಾಗಿದೆ, ಅದರಿಂದಾಗಿ ಕೆಲವೊಮ್ಮೆ ಯಶಸ್ಸು ದೊರೆತರೂ ಅದು ಬಹಳ ದಿನ ಉಳಿದಿಲ್ಲ ಎಂದಿದ್ದಾರೆ.

ಆದರೂ, ಬೆಲೆಯೇರಿಕೆಯ ಮೇಲೆ ಹತೋಟಿಯಿಡುವುದು ಯಾವುದೇ ಸರಕಾರದ ಪ್ರಾಥಮಿಕ ಜವಾಬ್ದಾರಿ ಎಂದೂ ಅವರು



ವೇದರಾಜ ಎಸ್.ಕೆ.

ಹೇಳಿದರು. ಆದರೆ ಈ ಜವಾಬ್ದಾರಿಯ ನಿರ್ವಹಣೆಗೆ ಎಡಪಕ್ಷಗಳು ನಿರ್ದಿಷ್ಟ ಕ್ರಮಗಳನ್ನು ಸೂಚಿಸಿದರೂ ಅವುಗಳತ್ತ ಗಮನವನ್ನೂ ಏಕೆ ಕೊಡುತ್ತಿಲ್ಲ, ಗೋದಾಮುಗಳಲ್ಲಿ ಆಹಾರಧಾನ್ಯಗಳು ಕೊಳೆಯುತ್ತಿದ್ದರೂ ಅದನ್ನೇಕೆ ಹಂಚುತ್ತಿಲ್ಲ ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ಕೂಡ ಕೇಳಿರುವ ಪ್ರಶ್ನೆಯನ್ನು, ಸಾರ್ವತ್ರಿಕ ವಿತರಣಾ ವ್ಯವಸ್ಥೆ ತರಲು ಯಾವ ಅಂತರ್ರಾಷ್ಟ್ರೀಯ ಅಡ್ಡಿಯಿದೆಯೆಂದು ಕೂಡ ಅವರು ಪ್ರಸ್ತಾಪಿಸಲಿಲ್ಲ.

★

ಕಾಮನ್ವೆಲ್ತ್ ಕ್ರೀಡಾಕೂಟ: ದೊಡ್ಡ ಕಂಪನಿಗಳಿಂದ ಖಜಾನೆಗೆ 500 ಕೋಟಿ ರೂ. ನಷ್ಟ

ಸಂಸತ್ತಿನಲ್ಲಿ ಮಂಡಿಸಿದ ಮಹಾಲೇಖ ಪರಿಶೋಧಕರ ವರದಿಯ ಪ್ರಕಾರ ಕಾಮನ್ವೆಲ್ತ್ ಕ್ರೀಡಾಕೂಟದ ಸಂಘಟನಾ ಸಮಿತಿಯೊಂದಿಗೆ ಶಾಮೀಲಾಗಿ ಹೆಚ್‌ಸಿಎಲ್ ಇನ್ಫೋ ಸಿಸ್ಟಮ್ಸ್, ಅಮೆರಿಕಾ ಮೂಲದ ಸಿಸ್ಕೊ ಸಿಸ್ಟಮ್ಸ್, ಕೇಂದ್ರ ಸರಕಾರೀ ಒಡೆತನದ ಎಂಟಿಎನ್‌ಎಲ್ ಮತ್ತು ಡಿಜಿಟಲ್ ಮಾಧ್ಯಮ ಕಂಪನಿ 'ಹಂಗಾಮ' ಮುಂತಾದ ದೊಡ್ಡ ತಂತ್ರಜ್ಞಾನ ಕಂಪನಿಗಳ ಶಾಮೀಲಿನಿಂದಾಗಿ ದೇಶದ ಖಜಾನೆಗೆ 500 ಕೋಟಿ ರೂ.ಗಳ ನಷ್ಟವಾಗಿದೆ.

ಈ ಕ್ರೀಡಾಕೂಟದಲ್ಲಿ ಲ್ಯಾಪ್‌ಟಾಪ್, ಡೆಸ್ಕ್‌ಟಾಪ್‌ಗಳಲ್ಲದೆ, ಸಮಯ ಮತ್ತು ಸ್ಕೋರುಗಳನ್ನು ಅಳೆಯುವ ಸಾಧನಗಳು, ಕ್ರೀಡೆಗಳ ನಿರ್ವಹಣೆಯ ತಂತ್ರಾಂಶ ವ್ಯವಸ್ಥೆ, ವೆಬ್ ತಾಣ, ಐಟಿ ಮತ್ತು ಟೆಲಿಕಾಂ ಮೂಲರಚನೆಗಳಿಗಾಗಿ ಈ ದೊಡ್ಡ ತಂತ್ರಜ್ಞಾನ ಕಂಪನಿಗಳೊಂದಿಗೆ ಸಂಘಟನಾ ಸಮಿತಿ ಮಾಡಿಕೊಂಡ ಕಾಂಟ್ರಾಕ್ಟುಗಳಲ್ಲಿಯೇ ಅತಿ ದೊಡ್ಡ ನಷ್ಟ ಸಂಭವಿಸಿರುವುದು ಎಂದು ಸಿಎಜಿಗೆ ಕಂಡು ಬಂದಿದೆಯಂತೆ. ಈ ನಷ್ಟದ ಸ್ವರೂಪ ಹೇಗಿದೆಯೆಂದರೆ ಸರಕಾರ ಕಂಪ್ಯೂಟರ್‌ಗಳಿಗೆ ತೆತ್ತಿರುವ ಬಾಡಿಗೆಯೇ ಅದರ ಖರೀದಿ ಬೆಲೆಯ 95%ದಷ್ಟಾಗಿದೆಯಂತೆ. ಹೆಚ್‌ಸಿಎಲ್–ಸಿಸ್ಕೊ ಜೋಡಿಗೆ ಈ ಕಾಂಟ್ರಾಕ್ಟ್ ಕೊಡಿಸಲೆಂದೇ ವಿಶೇಷ ಶರತ್ತನ್ನು ಹಾಕಲಾಗಿತ್ತಂತೆ.

ಇನ್ನು ವೆಬ್ ತಾಣ ರಚನೆಗಾಗಿ ಕಾಂಟ್ರಾಕ್ಟ್ ಪಡೆದ 'ಹಂಗಾಮ'ದ ಬಿಡ್ ನಲ್ಲೇ ಕೊರತೆಗಳಿದ್ದವು. ಮೂರನೇ ಸ್ಥಾನದಲ್ಲಿದ್ದ ಅದನ್ನು 'ನಗದು ಡಿಸ್ಕೌಂಟ್'ನ್ನು ಲೆಕ್ಕಕ್ಕೆ ತಗೊಂಡು ಮೊದಲನೇ ಸ್ಥಾನಕ್ಕೆ ತರಲಾಯಿತು. ಇನ್ನು ಅದು ನಿರ್ಮಿಸಿಕೊಟ್ಟ ವೆಬ್ ತಾಣದಲ್ಲಿ ಮಾಹಿತಿಗಳ ಕೊರತೆ ಕಾಣುತ್ತಿತ್ತು; ಕಾಮನ್ವೆಲ್ತ್ ದೇಶಗಳ ಗುಂಪಿಗೆ ಸೇರಿರದ ಅಮೆರಿಕಾ, ಕೊರಿಯ, ಜಪಾನ್ ಮತ್ತು ಫಿಲಿಪ್ಪೈನ್ಸ್ ದೇಶಗಳು ಈ ಕೂಟದಲ್ಲಿ ಭಾಗವಹಿಸುತ್ತಿವೆ ಎಂದು ಅದರಲ್ಲಿ ಹೇಳಲಾಗಿತ್ತಂತೆ!

ಈ ನಡುವೆ ಸುರೇಶ್ ಕಲ್ಮಾಡಿಯ ನೇಮಕದಲ್ಲಿ ಪ್ರಧಾನ ಮಂತ್ರಿಗಳ ಅಥವ ಅವರ ಕಚೇರಿಯ ಪಾತ್ರದ ಬಗ್ಗೆ ಇನ್ನಷ್ಟು ಮಾಹಿತಿಗಳು ಬಯಲಿಗೆ ಬಂದಿವೆ. ವಾಸ್ತವವಾಗಿ ಆಗಿನ ಕ್ರೀಡಾ ಮತ್ತು ಯುವಜನ ವ್ಯವಹಾರಗಳ ಮಂತ್ರಿ ಸುನಿಲ್ ದತ್‌ರವರು ಕಲ್ಮಾಡಿ ನೇಮಕ ಸರಿಯಲ್ಲ ಎಂದು ಈ ಕ್ರೀಡಾಕೂಟಕ್ಕಾಗಿ ನೇಮಿಸಿದ್ದ 'ಮಂತ್ರಿಗಳ ಗುಂಪಿ'ನ ಅಧ್ಯಕ್ಷ ಅರ್ಜುನ್ ಸಿಂಗ್ ರವರಿಗೆ ನವಂಬರ್ 2004ರಲ್ಲಿ ಮತ್ತು ನಂತರ ನೇರವಾಗಿ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದಿದ್ದರಂತೆ. ಮೇ 2003ರಲ್ಲಿ ಕಾಮನ್ವೆಲ್ತ್ ಕ್ರೀಡಾ ಒಕ್ಕೂಟಕ್ಕೆ ಸಲ್ಲಿಸಿದ ದಸ್ತಾವೇಜಿನಲ್ಲಿ ಸಂಘಟನಾ ಸಮಿತಿ(ಒಸಿ) "ಒಂದು ಲಾಭದ ಅಂಶವಿಲ್ಲದ, ಸರಕಾರೀ ಒಡೆತನದ ನೋಂದಾಯಿತ ಸೊಸೈಟಿ" ಎಂದು ಹೇಳಲಾಗಿತ್ತು, ಆದರೆ ಅದರಲ್ಲಿ ಪದಗಳನ್ನು ಬದಲಿಸಿ "ಒ.ಸಿ.ಯ ಕಾರ್ಯಕಾರಿ ಮಂಡಳಿಯ ಮುಖ್ಯಸ್ಥರಾಗಿ ಒಬ್ಬ ಅಧ್ಯಕ್ಷರು, ಅವರ ನಂತರ ಉಪಾಧ್ಯಕ್ಷರು/ಕಾರ್ಯಕಾರಿ ಅಧ್ಯಕ್ಷರು ಇರುತ್ತಾರೆ" ಎಂದು ಮಾಡಲಾಯಿತು. ಇದು ಕ್ರೀಡಾ ಇಲಾಖೆಯ ಸಮಾಲೋಚನೆ/ಮಂಜೂರಾತಿ ಇಲ್ಲದೆ ಮಾಡಿದ ಬದಲಾವಣೆ ಎಂದೂ ತಿಳಿಸಿದ್ದರು. ಆದರೆ ಪ್ರಧಾನಮಂತ್ರಿಗಳು ಇದಕ್ಕೆ ಲಕ್ಷ್ಯ ಕೊಟ್ಟಂತಿಲ್ಲ. ಏಕೆಂದರೆ ಡಿಸೆಂಬರ್ 6, 2004ರಂದು ಪ್ರಧಾನ ಮಂತ್ರಿಗಳ ಕಚೇರಿಯಿಂದ ಬಂದ ಪ್ರಕಟಣೆ "ಕ್ರೀಡಾಕೂಟವನ್ನು ನಡೆಸಲು ಮತ್ತು ಉಪಸಮಿತಿಗಳ ರಚನೆಯ ಹೊಣೆಯಿರುವ ಒಂದು ಸಂಘಟನಾ ಸಮಿತಿ(ಒ.ಸಿ.) ಮತ್ತು ಕಾರ್ಯಕಾರಿ ಮಂಡಳಿಯ ಅಧ್ಯಕ್ಷತೆಯನ್ನು ಐಒಎ ಅಧ್ಯಕ್ಷ ಶ್ರೀ ಸುರೇಶ ಕಲ್ಮಾಡಿ ವಹಿಸುತ್ತಾರೆ. ಒ.ಸಿ. ಯುವಜನ ವ್ಯವಹಾರಗಳು ಮತ್ತು ಕ್ರೀಡೆಗಳ ಮಂತ್ರಾಲಯ ದ ಮೂಲಕ ಭಾರತ ಸರಕಾರದೊಡನೆ ಹಾಗೂ ದಿಲ್ಲಿ ಆಡಳಿತದೊಡನೆ ವ್ಯವಹರಿಸುತ್ತದೆ" ಎಂದು ಹೇಳಿತ್ತು.

ಅತ್ತ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ದಿಲ್ಲಿಯ ಕಾಂಗ್ರೆಸ್ ಮುಖ್ಯಮಂತ್ರಿಗಳು ಕ್ರೀಡಾಕೂಟವನ್ನು 'ಯಶಸ್ವಿಯಾಗಿ' ನಡೆಸಿದ್ದರ ಬಗ್ಗೆ ತನ್ನ ಬೆನ್ನು ತಟ್ಟಿಕೊಂಡರು, ಈ ಕ್ರೀಡಾಕೂಟ ದಿಲ್ಲಿಗೆ ಬಹಳಷ್ಟು ಅಭಿವೃದ್ಧಿಯನ್ನು ತಂದಿದೆ, ಅದನ್ನು ಅಂತರ್ರಾಷ್ಟ್ರೀಯ ಸೌಲಭ್ಯಗಳ ನಗರವಾಗಿ ಮಾಡಿದೆ ಎಂದು ಸಿಎಜಿ ವರದಿಯನ್ನು ಲೆಕ್ಕಿಸದೇ ಅವರು ಹೇಳಿದ್ದಾರೆ, ಲೋಕಾಯುಕ್ತರ ವರದಿಯನ್ನು ಪ್ರಶ್ನಿಸಿದರೂ, ಲೋಕಪಾಲ ಮಸೂದೆಗಾಗಿ ಆಗ್ರಹಿಸುವ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳನ್ನು ಸರಿಗಟ್ಟುವ ಪ್ರಯತ್ನದಲ್ಲಿ! ○

ಜಗದಗಲ

ಶರತ್‌ಚಂದ್ರ

ಸಿರಿಯಾದಲ್ಲಿ ಸರ್ಕಾರ ಬದಲಿಸಲು ಅಮೆರಿಕನ್ ಹುನ್ನಾರ

"ಅರಬ್ ವಸಂತ" ಎಂದು ಕರೆಯಲಾಗುವ ಅರಬ್ ದೇಶಗಳಲ್ಲಿ ಪ್ರಜಾಪ್ರಭುತ್ವಕ್ಕೆ ಎದ್ದ ಜನತಾ ಚಳುವಳಿಯ ಹಿನ್ನೆಲೆಯಲ್ಲಿ ಮೊದ ಮೊದಲು ಅಮೆರಿಕನ್ ಸರ್ಕಾರ ಅವಾಕ್ಕಾಗಿತ್ತು. ಆದರೆ ಈಗ ಅದನ್ನು ಎದುರಿಸಲು ತನ್ನ ರಣನೀತಿ ಸಿದ್ಧ ಪಡಿಸಿದೆ. ಅಮೆರಿಕನ್-ಪರ ಸರ್ವಾಧಿಕಾರಿಗಳನ್ನು ಅಗತ್ಯ ಬಿದ್ದರೆ ನೇರ ಅಥವಾ ಪರೋಕ್ಷ ಮಿಲಿಟರಿ ಬಲ ಬಳಸಿ ರಕ್ಷಿಸುವುದು ಅದರ ಮುಖ್ಯ ಅಂಗ. ಬಹರೈನ್, ಯೆಮೆನ್ ಇಂತಹ ಉದಾಹರಣೆಗಳು. ಜನತೆಯ ಒತ್ತಡದಿಂದ ಅಮೆರಿಕನ್ ಬಾಲಬಡುಕ ಸರ್ವಾಧಿಕಾರಿಗಳು ಅಧಿಕಾರದಿಂದ ಇಳಿಯಬೇಕಾದಲ್ಲಿ ತಮಗೆ ಅನುಕೂಲವಾಗುವ ನಾಯಕರು ಅಥವಾ ಸಂಘಟನೆಗಳ ಮೂಲಕ ತನ್ನ ಪ್ರಭಾವ ಉಳಿಸಿಕೊಳ್ಳುವುದು. ಈಜಿಪ್ಟ್ ಮತ್ತು ಟುನಿಶಿಯಾದಲ್ಲಿ ಈ ರೀತಿಯ ಪ್ರಯತ್ನ ನಡೆಸಿದೆ. ಅಮೆರಿಕದ ವಿರೋಧಿಗಳು ಮೊದಲಿಂದಲೂ ಅಧಿಕಾರದಲ್ಲಿರುವ ದೇಶಗಳಲ್ಲಿ ಜನತೆಯ ಚಳುವಳಿಯನ್ನು ಬಳಸಿ, ಸರ್ಕಾರ ಬದಲಾವಣೆಗೆ ಪ್ರಯತ್ನಿಸುವುದು. ಲಿಬ್ಯಾ ಮತ್ತು ಸಿರಿಯಾದಲ್ಲಿ ಅಮೆರಿಕ ಇದಕ್ಕಾಗಿ ತೀವ್ರವಾಗಿ ಪ್ರಯತ್ನ ನಡೆಸಿದೆ. ಲಿಬ್ಯಾದಲ್ಲಿ ಅಮೆರಿಕದ ಹುನ್ನಾರಗಳು ಈಗ ಸರ್ವವಿದಿತ. ಸಿರಿಯಾದಲ್ಲೂ ಅಂತಹ ಪ್ರಯತ್ನಗಳನ್ನು ಈಗ ತೀವ್ರಗೊಳಿಸಿದೆ.



ಆರ್ಥಿಕ ದಿಗ್ಬಂಧನ ಹಾಕಲು ಪ್ರಯತ್ನ

ಇದರ ಭಾಗವಾಗಿ ಸಿರಿಯಾ ಅಧ್ಯಕ್ಷ ಅಸಾದ್ ರಾಜಿನಾಮೆ ಕೊಡಬೇಕು ಅಂತ ಅಮೆರಿಕನ್ ಅಧ್ಯಕ್ಷ ಒಬಾಮ ಮತ್ತು ವಿದೇಶ ಮಂತ್ರಿ ಹಿಲೆರಿ ಒತ್ತಾಯಿಸಿದ್ದಾರೆ. ಲಿಬ್ಯಾದಂತೆ ಸಿರಿಯಾ ಸರ್ಕಾರದ ವಿರುದ್ಧ ವಿಶ್ವಸಂಸ್ಥೆ ಭದ್ರತಾ ಸಮಿತಿ ನಿರ್ಣಯ ತರಲು ನಡೆಸಿದ ಪ್ರಯತ್ನ, ಲಿಬ್ಯಾ ನಿರ್ಣಯದ ದುರುಪಯೋಗದಿಂದ ಎಚ್ಚೆತ್ತ ರಶ್ಯಾ ಚೀನಾಗಳ ಪ್ರತಿರೋಧದಿಂದ ವಿಫಲವಾಗಿದೆ. ಆದರೂ ಅಮೆರಿಕನ್ ಮತ್ತು ಕೆಲವು ಯುರೋಪಿಯನ್ ಸರ್ಕಾರಗಳು (ಮುಖ್ಯವಾಗಿ ಬ್ರಿಟನ್, ಫ್ರಾನ್ಸ್) ಛಲ ಬಿಡದೆ ಪ್ರಯತ್ನ ಮುಂದುವರೆಸಿವೆ. ಅಮೆರಿಕನ್ ಸರ್ಕಾರ ಅಮೆರಿಕದಲ್ಲಿರುವ ಸಿರಿಯಾ ಸರ್ಕಾರದ ನಿಧಿಯನ್ನು ಸ್ಥಗಿತಗೊಳಿಸಿದೆ. ಸಿರಿಯಾ ಜತೆ ತೈಲ ಮತ್ತು ಗ್ಯಾಸ್ ವ್ಯಾಪಾರದ ಮೇಲೆ ಪ್ರತಿಬಂಧ ಹೇರಿದೆ. ಅದೇ ರೀತಿ ಮಾಡುವಂತೆ ಯುರೋಪಿಯನ್ ಮತ್ತು ಭಾರತ ಸರ್ಕಾರಗಳ ಮೇಲೆ ಒತ್ತಡ ಹೇರುತ್ತಿದೆ. ಒಟ್ಟಾರೆಯಾಗಿ ಪೂರ್ಣ ಪ್ರಮಾಣದ ಆರ್ಥಿಕ ದಿಗ್ಬಂಧನ ಹಾಕಲು ಪ್ರಯತ್ನ ನಡೆಸಿದೆ.

ಸಿರಿಯಾದಲ್ಲಿ ಕಳೆದ ಐದು ತಿಂಗಳುಗಳಿಂದ ತೀವ್ರ ಬೀದಿ ಪ್ರತಿಭಟನೆಗಳು ನಡೆಯುತ್ತಿವೆ. ಮಾರ್ಚಿನಲ್ಲಿ ದಾರಾ ಎಂಬ ಸಣ್ಣ ಪಟ್ಟಣದಲ್ಲಿ ಆರಂಭವಾದ ಪ್ರತಿಭಟನೆಗಳು ಹೋಮ್ಸ್ ಮತ್ತು ಹಾಮಾದಂತಹ ನಗರಗಳಿಗೂ ಹಬ್ಬಿದೆ. ಶುಕ್ರವಾರ ತಾರಕಕ್ಕೇರುವ ಪ್ರತಿಭಟನೆಗಳ ವಿರುದ್ಧ ದಮನ ಕಾರ್ಯಾಚರಣೆಗಳಲ್ಲಿ ತೀವ್ರ ಪ್ರಮಾಣದ ನಾಗರಿಕರ ಮತ್ತು ಪೋಲೀಸು-ಸೈನಿಕ ಸಿಬ್ಬಂದಿಗಳ ಸಾವು-ನೋವುಗಳು ಆಗಿವೆ. ಪ್ರತಿಭಟನೆಗಳಲ್ಲಿ ಸಶಸ್ತ್ರ ಇಸ್ಲಾಮಿಕ್ ಮೂಲಭೂತವಾದಿಗಳೂ ಭಾಗವಹಿಸುತ್ತಿರುವುದರಿಂದ ಪೋಲೀಸು-ಸೈನಿಕ ಸಿಬ್ಬಂದಿಗಳ ಸಾವು-ನೋವುಗಳೂ ಆಗಿವೆ. ಜೂನಿನಲ್ಲಿ ಜಿಸ್ರ್ ಅಲ್ ಶಗೌರ್ ಪಟ್ಟಣದಲ್ಲಿ ನಡೆದ ಒಂದು ಮೂಲಭೂತವಾದಿಗಳ ಸಶಸ್ತ್ರದಾಳಿಯಲ್ಲೇ ನೂರಕ್ಕೂ ಪೋಲೀಸು-ಸೈನಿಕ ಸಿಬ್ಬಂದಿ ಸತ್ತಿದ್ದಾರೆ. ಒಟ್ಟು ಸುಮಾರು 1200 ಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಹತ್ತು ಸಾವಿರಕ್ಕೂ ಹೆಚ್ಚು ಜನ ನೆರೆಯ ತುರ್ಕಿ ಮತ್ತು ಲೆಬನಾನುಗಳಿಗೆ ಓಡಿ ಹೋಗಿದ್ದಾರೆ.

"ರಾಷ್ಟ್ರೀಯ ಸಂವಾದ" ಬಹಿಷ್ಕಾರಕ್ಕೆ ಚಿತಾವಣೆ

ಪರಿಸ್ಥಿತಿಯ ತೀವ್ರತೆ ಮನಗಂಡ ಸಿರಿಯಾ ಸರ್ಕಾರ ರಾಜಕೀಯ ಸುಧಾರಣೆಗಳಿಗೆ ವಿರೋಧ ಪಕ್ಷ-ಶಕ್ತಿಗಳ ಜತೆ ಮಾತುಕತೆಗೆ ಪ್ರಯತ್ನ ಮಾಡಲಾರಂಭಿಸಿದೆ. ಬಹು-ಪಕ್ಷೀಯ ಚುನಾವಣೆಗಳನ್ನು ನಡೆಸಲು ಸಂವಿಧಾನ ಬದಲಾಯಿಸಲೂ ಚಿಂತನೆ ನಡೆಸಿದೆ. ಜುಲೈನಲ್ಲಿ ರಾಜಧಾನಿ ಡಮಾಸ್ಕಸ್ ವಿರೋಧ ಪಕ್ಷಗಳ ಜತೆ "ರಾಷ್ಟ್ರೀಯ ಸಂವಾದ" ಸಹ ಏರ್ಪಡಿಸಿತ್ತು. ವಿರೋಧ ಪಕ್ಷಗಳ ಸಂಯೋಜನಾ ಮಂಡಳಿಯನ್ನು ಅದಕ್ಕೆ ಆಹ್ವಾನಿಸಿತ್ತು. ಆದರೆ ಈ ಮಂಡಳಿ ಅದರಲ್ಲಿ ಭಾಗವಹಿಸಲಿಲ್ಲ. ಕೆಲವು ವಿರೋಧಿ ನಾಯಕರು ವೈಯಕ್ತಿಕ ನೆಲೆಯಲ್ಲಿ ಭಾಗವಹಿಸಿದರೂ, ಅಮೆರಿಕದ ಚಿತಾವಣೆಯಿಂದ ಹಲವು ವಿರೋಧ ಪಕ್ಷಗಳು ಭಾಗವಹಿಸಲಿಲ್ಲ. ಅಮೆರಿಕ ಮತ್ತು ಫ್ರಾನ್ಸಿನ ರಾಯಭಾರಿಗಳು ಎಲ್ಲಾ ಕಾನೂನು-ಕಟ್ಟಳೆಗಳನ್ನು ಮುರಿದು ಸ್ವತಃ ವಿರೋಧ ಪಕ್ಷಗಳ ನಾಯಕರನ್ನು ಬಹಿರಂಗವಾಗಿಯೇ ಭೇಟಿ ಮಾಡಿ "ರಾಷ್ಟ್ರೀಯ ಸಂವಾದ" ದಲ್ಲಿ ಭಾಗವಹಿಸದಂತೆ ಒತ್ತಡ ಹಾಕಿದರು. ಸಿರಿಯಾ ಸರ್ಕಾರ ಇದಕ್ಕೆ ಅಧಿಕೃತವಾಗಿ ಪ್ರತಿಭಟಿಸಿತು ಕೂಡಾ. ಸಿರಿಯಾದ ಹಲವು ವಿರೋಧ ಪಕ್ಷಗಳು ಅಮೆರಿಕ ಅಥವಾ ಅದರ ಬಾಲಬಡುಕ ದೇಶಗಳಲ್ಲಿ (ಸೌದಿ ಅರೇಬಿಯಾ, ಯು.ಎ.ಇ.) ನೆಲೆ ಹೊಂದಿದ್ದು ಕೋಟ್ಯಾಂತರ ಡಾಲರುಗಳ ಸಹಾಯಧನ ಪಡೆಯುತ್ತಿವೆ. ಇವುಗಳಲ್ಲಿ ಇಸ್ಲಾಮಿಕ್ ಗುಂಪುಗಳೂ ಸೇರಿವೆ.

ಸಿರಿಯಾದಲ್ಲಿ ತನ್ನ ಬಾಲಬಡುಕ ಸರ್ಕಾರ ಸ್ಥಾಪಿಸಲು 1950 ರ ದಶಕದಿಂದಲೂ ಅಮೆರಿಕ ಪ್ರಯತ್ನಿಸುತ್ತಿದೆ. 1953 ರಲ್ಲಿ ಆಗಿನ ಪ್ರಧಾನಿಯ ಹತ್ಯೆ ಮಾಡಿ ಚಕ್ರವರ್ತಿ ಶಾ ಅಧಿಕಾರಕ್ಕೆ ತಂದ ಇರಾನ್ ಕ್ಷಿಪ್ರಕ್ರಾಂತಿಯ ಮೊದಲೇ ಅಂತಹುದೇ ವಿಫಲ ಯತ್ನ ಸಿರಿಯಾದಲ್ಲೂ ನಡೆಸಿತ್ತು. ಇತರ ಅರಬ್ ದೇಶಗಳಂತೆ ಇಸ್ರೇಲ್ ಜತೆ ಯಾವುದೇ ರಾಜಿ ಮಾಡಿಕೊಳ್ಳದೆ ಪ್ಯಾಲೆಸ್ಟೈನ್ ರಾಷ್ಟ್ರೀಯ ಹೋರಾಟಕ್ಕೆ ಬೆಂಬಲ ನೀಡಿದ್ದ ಸಿರಿಯಾ ಅಮೆರಿಕದ ಆಕ್ರೋಶಕ್ಕೆ ಒಳಗಾಗಿತ್ತು. ಇರಾನ್ ಜತೆ ಸ್ನೇಹ ಬೆಳೆಸಿ ಅಮೆರಿಕದ ಕೋಪಕ್ಕೆ ಇನ್ನಷ್ಟು ಪಾತ್ರವಾಗಿತ್ತು. 2003 ರ ಇರಾಕ್ ಆಕ್ರಮಣದ ನಂತರವಂತೂ ಅಮೆರಿಕದ ಅತಿಕ್ರಮಣವನ್ನು ವಿರೋಧಿಸಿದ್ದ ಸಿರಿಯಾದಲ್ಲಿ ಸರ್ಕಾರ ಬದಲಾವಣೆಯ ಪ್ರಯತ್ನ ಇನ್ನಷ್ಟು ಜೋರಾಗಿತ್ತು. ಲೆಬನಾನ್ ಪ್ರಧಾನಿ ಹತ್ಯೆ ಸಿರಿಯಾ ನಡೆಸಿತು ಎಂಬ ಆಪಾದನೆ ಮಾಡಿ ಆ ನೆಪದಲ್ಲೂ ಸಿರಿಯಾದ ಮೇಲೆ ಕಾರ್ಯಾಚರಣೆಗೆ ಪ್ರಯತ್ನಿಸಿತು. ಇಸ್ರೇಲು

ಲೆಬನಾನಿನ ಹಾಮಾಸ್ ಮೇಲೆ ದಾಳಿ ನಡ
ಆ ಮೂಲಕ ಅವರಿಗೆ ಬೆಂಬಲ ನೀಡು
ಸಿರಿಯಾವನ್ನು ದುರ್ಬಲಗೊಳಿಸಲ
ಪ್ರಯತ್ನಿಸಿತು. ಆದರೆ ಅದೂ ವಿಫಲವಾಯಿತ

"ಅರಬ್ ವಸಂತ"ದ ಅವಕಾಶ ಬಳಸ
ಈಗ ತರಾತುರಿಯಲ್ಲಿದೆ. ಸುನ್ನಿ ಮುಸ್ಲಿಮ
ಬಹುಸಂಖ್ಯಾತರಾಗಿರುವ ಸಿರಿಯಾದಲ್ಲಿ ದೊ
ಸಂಖ್ಯೆಯಲ್ಲಿ ಅಲ್ಲಾವಿ, ಡ್ರೂಝ್ ಮ
ಕ್ರಿಶ್ಚಿಯನ್ ಅಲ್ಪಸಂಖ್ಯಾತರಿದ್ದಾರೆ. ಸಿರಿಯ
ಸರ್ಕಾರ ಜಾತ್ಯತೀತತೆಯನ್ನು ಕಾಪಾಡಿಕೊಂ
ಬಂದಿದ್ದು, ಧಾರ್ಮಿಕ ಆಧಾರದ ಮೇ
ಸರ್ಕಾರದ ಮೇಲೆ ದಾಳಿ ನಡೆಸಲು ಹಲ
ವಿರೋಧ ಶಕ್ತಿಗಳು ಪ್ರಯತ್ನಿಸಿವೆ. ಏಕ ಪಕ್ಷೀ
ಆಡಳಿತ ಮತ್ತು ಪ್ರಜಾಪ್ರಭುತ್ವದ ಅಭಾವದ
ಸಾಕಷ್ಟು ಪ್ರಮಾಣದಲ್ಲಿ ಅತೃಪ್ತಿ ಇದೆ ಎನ್ನುವು
ನಿಜ. ಆದರೆ ಸಿರಿಯಾ ಸರ್ಕಾರಕ್ಕೆ ಯಾವು
ಜನಬೆಂಬಲ ಇಲ್ಲ. ಅದು ಬರಿಯ ದಮನ
ಆಧಾರದ ಮೇಲೆ ಇದೆ ಎನ್ನುವುದು ನಿಜವ
ಸರ್ಕಾರ ಬೆಂಬಲಿಸುವ, ಧಾರ್ಮಿಕ ಆಧಾ
ಮೇಲೆ ಗಲಭೆ ನಡೆಸುವ ಕೆಲವು ವಿರೋ
ಪ್ರಯತ್ನಗಳ ಮತ್ತು ಅಮೆರಿಕದ ಮೂ
ತೂರಿಸುವ ನೀತಿ ವಿರುದ್ಧ ಭಾರಿ ಪ್ರತಿಭಟನೆ
ಆಗಿವೆ. ಸರ್ಕಾರಕ್ಕೆ ಎಲ್ಲಾ ಕೋಮುಗಳ
ಜಾತ್ಯತೀತರ ದೊಡ್ಡ ವಿಭಾಗದ ಬೆಂಬಲ
ಎಂದು ಹಲವು ಸ್ವತಂತ್ರ ರಾಜಕೀಯ ವೀಕ್ಷಕ
ಹೇಳಿದ್ದಾರೆ. ಅದೇನೇ ಇರಲಿ, ಸಿರಿಯಾ
ಸರ್ಕಾರವನ್ನು ಜನ ಬದಲಾಯಿ
ಬಯಸುತ್ತಾರೆಯೇ? ಹೌದಾದರೆ ಹೇಗೆ
ಎಂಬುದನ್ನು ಸಿರಿಯಾದ ಜನತೆ ನಿರ್ಧರಿಸಬೇ
ಅದು ಸಿರಿಯಾದ ಆಂತರಿಕ ಪ್ರಶ್ನೆ. ಅದರ
ಅಮೆರಿಕ, ಬ್ರಿಟನ್, ಫ್ರಾನ್ಸ್ ಸರ್ಕಾರಗ
ಯಾವುದೇ ಪಾತ್ರ ಇರಬಾರದು.

ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷಕ್ಕೆ 90 ರ ಸಂಭ್ರಮ

ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷ ಸ್ಥಾಪನೆ ಆಗಿ ಇದೇ ಜುಲೈನಲ್ಲಿ 90 ವರ್ಷ ತುಂಬಿದ್ದು, ಆ ಪಕ್ಷ ಅದನ್ನು ಸಂಭ್ರಮದಿಂದ ಆಚರಿಸುತ್ತಿದೆ. ವಸಾಹತುಶಾಹಿ ಮತ್ತು ವರ್ಣಭೇದದ ಕರಾಳ ಅವಧಿಯಲ್ಲಿ 1921 ಜುಲೈ 29 ರಂದು ಸ್ಥಾಪಿತವಾದ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷ ಆ ದೇಶದ ಚರಿತ್ರೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ವಸಾಹತುಶಾಹಿ ಮತ್ತು ವರ್ಣಭೇದದ ದೀರ್ಘ ಹೋರಾಟದಲ್ಲಿ ಕಮ್ಯುನಿಸ್ಟ್ ಪಕ್ಷ ಮಂಚೂಣಿ ಪಾತ್ರ ವಹಿಸಿತ್ತು. ವಸಾಹತುಶಾಹಿ ಮತ್ತು ವರ್ಣಭೇದದ ದೀರ್ಘ ಹೋರಾಟದ ಭೂಗತ ಸಶಸ್ತ್ರ ಹೋರಾಟದ ಅವಧಿಯಲ್ಲಿ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ಮತ್ತು ಕೊಸಾಟು ಎಂಬ ಕಾರ್ಮಿಕರ ಬೃಹತ್ ಸಂಘಟನೆ ಕಟ್ಟಿ ಬೆಳೆಸಿ ಅವುಗಳ ಜತೆ ತ್ರಿಪಕ್ಷೀಯ ಕೂಟ ರಚಿಸಿದ ಕೀರ್ತಿ ಅದಕ್ಕೆ ಸಲ್ಲಬೇಕು. ದಕ್ಷಿಣ ಆಫ್ರಿಕಾದ "ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿ"ಯ

ಪರಿಕಲ್ಪನೆ ರೂಪಿಸಿ, ಅದನ್ನು ಈ ತ್ರಿಪಕ್ಷೀ
ಕೂಟದ ಮೂಲಕ ಜಾರಿಗೆ ತರುತ್ತಿದೆ. 19
ರ ನಂತರ ಆಫ್ರಿಕನ್ ನ್ಯಾಶನಲ್ ಕಾಂ
ನಾಯಕತ್ವದ ಒಂದು ವಿಭಾಗ "ರಾಷ್ಟ್ರೀ
ಪ್ರಜಾಸತ್ತಾತ್ಮಕ ಕ್ರಾಂತಿ"ಯ ಹಾದಿಗೆ ತೀವ್ರ
ತರಲು ಯತ್ನಿಸಿದಾಗ ಅದರ ವಿರುದ್ಧ
ಹೋರಾಟ ನಡೆಸಿದ ಮತ್ತು ಇನ
ನಡೆಸುತ್ತಿರುವ ಹೆಗ್ಗಳಿಕೆ ಈ ಪಕ್ಷದ್ದು.

90 ನೇ ಸ್ಥಾಪನಾ ದಿನದಂದು ದ
ಆಫ್ರಿಕಾದ ಕಮ್ಯುನಿಸ್ಟ್ ಪಕ್ಷವನ್ನು ಸಿಪಿಐ(
ಅಭಿನಂದಿಸಿದೆ. ಕಾರ್ಮಿಕ ವರ್ಗದ ಅಧಿಪತ್ಯ
"ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿ"ಯ
ಮುನ್ನಡೆಸುವ ಅದರ ಪ್ರಯೋಗಗಳು ಮ
ಅದಕ್ಕಾಗಿ ವಿರೋಧ ಪಕ್ಷವಾಗಿಯೂ ಆ
ರಂಗದ ಭಾಗವಾಗಿಯೂ, ನಡೆಸುತ್ತಿರ
ಚಟುವಟಿಕೆಗಳನ್ನು ಸಿಪಿಐ(ಎಂ) ಆಸಕ್ತಿಯ
ಗಮನಿಸುತ್ತಿದೆ ಎಂದೂ ಹೇಳಿದೆ.

ಮಂತ್ರಿ ಮಾಡಲು ಉಂಡು-ಕೊಂಡೂ ಹೋದ ಕಥೆ

ಪುಟ 3 ರಿಂದ

ಎಲ್ಲವನ್ನೂ ಹಣಕೊಟ್ಟು ಖರೀದಿಸಬಲ್ಲವೆಂಬ, ಅತಿ ಅಹಂ ಬೆಳೆಸಿಕೊಂಡಿರುವ ಇದೇ ರೆಡ್ಡಿಗಳೇ 'ಅಮ್ಮ'ನನ್ನು ಪ್ರಧಾನಿಯನ್ನಾಗಿಸುವುದೇ ತಮ್ಮ ಮುಂದಿನ ಪರಮಗುರಿ ಎಂದೇ ಘೋಷಿಸಿ ಖುಷಿಪಡಿಸಿದ್ದರು. ಸಂಬಂಧಗಳು ಇನ್ನಷ್ಟು ಗಾಢವಾಗಿದ್ದವು. ಆದರೆ.. ರೆಡ್ಡಿಗಳ ಕುಖ್ಯಾತಿ-ಅಪಖ್ಯಾತಿ, ಅಕ್ರಮಗಳು ದಾಖಲೆ ಸಮೇತ ಹೊರಬರುತ್ತಿದ್ದಂತೆ, ಆ ಅಕ್ರಮಗಳಲ್ಲಿ ಸುಷ್ಮಾನದ್ದು, ಪಾಲಿದೆಯೆಂಬವರೆಗೂ ಮಾತುಗಳು ಕೇಳಿದವು, ಇಂತಹವರು ಪ್ರಧಾನಿಯಾದರೆ ಹೇಗೆ ಎಂಬ ಪ್ರಶ್ನೆಗಳು ಬಂದದ್ದೇ ತಡ 'ಬಳ್ಳಾರಿ ಭೇಟಿ' ಮತ್ತು ರೆಡ್ಡಿಗಳ ಸಂಬಂಧ ಬಹಿರಂಗವಾಗಿರುವುದನ್ನು ಬಯಸಲಿಲ್ಲ. ಹೀಗೆ ಗಾಢದ ಬದಲು-ನಿಗೂಢದ ಧೂರದ ಪೋಜು.

ಲೋಕಾಯುಕ್ತ ವರದಿ ಹಿನ್ನೆಲೆಯಲ್ಲಿ ಯಡಿಯೂರಪ್ಪ ರಾಜೀನಾಮೆ ಕೊಟ್ಟ ಮೇಲೆ ಮಂತ್ರಿಯಾಗದಿರುವ ರೆಡ್ಡಿಗಳು ತಮಗೆ ಹೈಕಮಾಂಡ್‌ನ ಬೆಂಬಲವಿದೆ ಎಂದು ತೋರಿಸಲೇಬೇಕಾಗಿತ್ತು. ಅದಕ್ಕಾಗಿ ಗಡ್ಕರಿ ಯಾವರಾದರೂ ಬನ್ನಿ ಎಂದು ಹಿಡಿದು ತಂದಿದ್ದಾರೆ... ಸಮಾರಂಭ'ದಲ್ಲಿ ಭಾಗವಹಿಸಿದ್ದಾರೆ.

ಹೀಗೆ ಬಳ್ಳಾರಿಗೆ ಬರುವ ಕೃಪೆ ತೋರಿದ ಗಡ್ಕರಿಗೆ ಬರೋಬ್ಬರಿ 40 ಲಕ್ಷ ರೂಪಾಯಿ ಬೆಲೆಯ ಚಿನ್ನದ ಕತ್ತಿ, ಒಂದೂವರೆ ಕೋಟಿ ರೂಪಾಯಿಗಳ ಕಾರು ಕಾಣಿಕೆಯಾಗಿ ರೆಡ್ಡಿ ಕಂಪನಿ ಕೊಟ್ಟಿದೆ! ಸಂಪ್ರೀತರಾದ ಗಡ್ಕರಿ ಕಿಮ್ಮಕ್ ಎನ್ನದೇ ಸ್ವೀಕರಿಸಿದ್ದಾರೆ. ಇದೇ ರೀತಿ ಸುಷ್ಮಾರಿಗೂ ಪ್ರತಿ ವರ್ಷ ಕಾಣಿಕೆ ಅಲ್ಲಲ್ಲ. ಲಂಚ ನೀಡಲಾಗುತ್ತಿತ್ತಂತೆ. ಹೀಗೆ ನೀಡುತ್ತಿರುವ ರೆಡ್ಡಿಗಳ ಬಳಿ ಹಣ ಎಲ್ಲಿಂದ ಬಂತು, ಹೇಗೆ ಬಂತು, ತೆರಿಗೆ ಏನು ಲೆಕ್ಕವೆಂತಹುದು. ಕೇಳುವವರಾರು? ಹೀಗೆ ಅಕ್ರಮ ಹಣವನ್ನು ಇಂತಹವರಿಂದ ಪಡೆಯುವ ಬಿಜೆಪಿ ನಾಯಕರಿಗೆ ಏನಾದರೂ ಕಿಂಚಿತ್ತಾದರೂ ಮಾನ-ಮರ್ಯಾದೆ ಇದೆಯೇ?

ಇದಾದ ಬಳಿಕವೇ ಕಳಂಕಿತ, ಆರೋಪಿಗಳಾದ ರೆಡ್ಡಿ ಸಹೋದರರು ಸೇರಿ ಅವರ ಬಂಟ ಶ್ರೀರಾಮುಲುನನ್ನು ಪುನಃ ಮಂತ್ರಿಗಳನ್ನಾಗಿ ತೆಗೆದುಕೊಳ್ಳುವ ಚಾಲನೆಗೆ ಚರ್ಚೆ ಬಂದಿದೆ. ರೆಡ್ಡಿಗಳ ಕೃಪೆಯಲ್ಲಿರುವ, ಈಗಲೂ ಮುಖ್ಯಮಂತ್ರಿ ಸಚಿವಾಕಾಂಕ್ಷಿ ಜಗದೀಶ್ ಶೆಟ್ಟರ್, 'ಬಿಜೆಪಿ ಕಟ್ಟಿದ ರೆಡ್ಡಿಗಳಿಗೇಕೆ ಮಂತ್ರಿಗಿರಿಯಿಲ್ಲ' ಎಂದು ಲಾಬಿ ನಡೆಸಿದ್ದಾರೆ. ಬಳ್ಳಾರಿ ಉಸ್ತುವಾರಿ ಸಚಿವರಾದ ಬಾಲಚಂದ್ರ ಜಾರಕಿಹೊಳಿ, 'ಶ್ರೀರಾಮುಲು ನನ್ನ ಅಣ್ಣನಂತೆ (ಒಂದೇ ಜಾತಿಯ) ಎಂದಿರುವ ಅವರು ರೆಡ್ಡಿಗಳ ಸಾಮ್ರಾಜ್ಯದಲ್ಲಿ ಸ್ವಾತಂತ್ರ್ಯದಿನದಂದು ತಾನು ಭಾರತದ ತ್ರಿವರ್ಣ ಧ್ವಜ ಹಾರಿಸುವುದು ಅವರಿಗೆ ಅವಮಾನವೆಂದು ಬಗೆದು ಬೆಳಗಾಂನಲ್ಲೇ ಉಳಿದಿದ್ದಾರೆ. ಮತ್ತೊಬ್ಬ ಮಹಾಶಯರು 'ಮೂರನೇಯ ವಿಸ್ತರಣೆಯಲ್ಲಿ ಇವರನ್ನು ಮಂತ್ರಿಗಳಾಗಿಸಿ ಇಲ್ಲ ಮೂರು ಸ್ಥಾನ ಖಾಲಿ ಇರಲಿ' ಎಂಬ ಭರತ ವಾಕ್ಯ ಪರಿಪಾಲನೆಯ ಅಮೂಲ್ಯ ಸಲಹೆಯನ್ನು ನೀಡಿದ್ದಾರೆ. ಅಂದರೆ ಬಳ್ಳಾರಿ ಜಿಲ್ಲೆಗೆ ರೆಡ್ಡಿ ಪಾಳೆಗಾರರೇ ಖಾಯಂ, ಅವರಿಲ್ಲವಾದರೆ ಸಿಂಹಾಸನದ ಮೇಲೆ ಅವರವೇ ಚಪ್ಪಲಿ! ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಎಸಗಿದ ಅವಮಾನ ದಾಳಿ ಅಲ್ಲವೇ?

ಇಂತಹ ಸಂದರ್ಭವಿರುವಾಗ, ರೆಡ್ಡಿಗಳ ಒತ್ತಡದ ಹಿನ್ನಲೆಯಲ್ಲಿಯೂ ಸಂಪುಟ ವಿಸ್ತರಣೆ ಬಗ್ಗೆ ಚರ್ಚೆ ನಡೆಸಿದ ಬಳಿಕ 'ರೆಡ್ಡಿಗಳನ್ನು ಸಚಿವರನ್ನಾಗಿ ತೆಗೆದುಕೊಳ್ಳುವುದು ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಿದ್ದು' ಎಂಬ ಉಸ್ತುವಾರಿ ನಾಯಕ ಧರ್ಮೆಂದ್ರ ಪ್ರಧಾನ್‌ರ ಹೇಳಿಕೆ 'ರೆಡ್ಡಿಗಳಿಗೆ' ಮಂತ್ರಿಗಿರಿ ನೀಡಲು ಹೈಕಮಾಂಡ್ ಸಹ ಅದಕ್ಕೆ ಒಪ್ಪಿಗೆ ಇದೆ ಎಂಬ ಇಂಗಿತವೇ ಆಗಿದೆ. ಇದು ಗಡ್ಕರಿ ಬಳ್ಳಾರಿ ಭೇಟಿಯ ಪರಿಣಾಮ! ಎಲ್ಲವೂ ಡೀಲ್ ಮಯ!

ಅಕ್ರಮ ಗಣಿಗಾರಿಕೆಯ ಲೋಕಾಯುಕ್ತ ವರದಿಯಲ್ಲಿ 15 ಅಧ್ಯಾಯಗಳು ರೆಡ್ಡಿ ಕಂಪನಿ ನಡೆಸಿದ ಅವ್ಯವಹಾರ, ಅಕ್ರಮಗಳ ಬಗೆಗೆ ಇರುವಾಗ, ಅಂತಹುದೇ ಆರೋಪದಲ್ಲಿ ಸಿಕ್ಕಿಬಿದ್ದಿದ್ದ ಮುಖ್ಯಮಂತ್ರಿ ರಾಜೀನಾಮೆ ಪಡೆದಿರುವಾಗ, ಇಂತಹ ಲೂಟಿಚೋರ ರೆಡ್ಡಿಗಳನ್ನು ಪುನಃ ಸಚಿವರನ್ನಾಗಿಸುವುದು ಎಂದರೇನು ಅರ್ಥ? ಇಂತಹ ಬಿಜೆಪಿ ಬಳಗ ಈಗ ಹಜಾರೆ ರಕ್ಷಣೆಗೆ ಧುಮುಕಿ ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಿರುವುದು ಮಹಾವಂಚನೆ ಅಲ್ಲವೇ?

ಸುಷ್ಮಾ ದೂರವೆಂಬಂತೆ ತೋರಿಸಿಕೊಳ್ಳುವುದು, ಗಡ್ಕರಿ ಸಖ್ಯತೆಯ ತೋರಿ ಉಂಡು-ಕೊಂಡು ಹೋಗುವುದು. ಕಳ್ಳರು-ದರೋಡೆಕೋರರಿಗೆ ಮಂತ್ರಿ ಸ್ಥಾನ ಕೊಡಿ ಎನ್ನುತ್ತಲೇ ಚೆಡ್ಡಿ ಪಡೆಗಳ ಗೀತಗಾಯನದಲ್ಲಿ ದೇಶಭಕ್ತಿ ಬಗ್ಗೆ ಮಾತನಾಡಿ ಭ್ರಷ್ಟರನ್ನು ಮಟ್ಟಹಾಕಿ ಎಂದು ಉಸ್ತುವಾರಿ ಧರ್ಮೆಂದ್ರ ಪ್ರಧಾನ್ ಕರೆ ನೀಡುವುದು? ಹೇಗಿದೆ ಸಂಘ ಪರಿವಾರಿಗಳ ವರಸೆ.

ಎಂತಹ ವಂಚನೆ, ಅಧಃಪತನ! ಫ್ಯಾಸಿಸ್ಟ್ ಮನೋಭಾವದ ಸಂಘಪರಿವಾರದ ನೀಚತನ!

ಹಗರಣಗಳ ಮುಚ್ಚಿಕೊಂಡ ಮುಖ್ಯಮಂತ್ರಿ

ಪುಟ 3 ರಿಂದ

ಮಾಫಿಯಾಗಳ ಈ ಸರ್ಕಾರ ಎಸಗಿರುವ ಅಕ್ರಮ, ಅವ್ಯವಹಾರ-ಭ್ರಷ್ಟಾಚಾರಕ್ಕೆ ಲೋಕಾಯುಕ್ತರ ವರದಿಯೇ ಒಂದು ಸಾಕ್ಷಿ. ಇಷ್ಟಾದ ಮೇಲೂ ಸದಾನಂದಗೌಡರು ಅಭಿವೃದ್ಧಿಯ ಬಗ್ಗೆ ಮಾತನಾಡಿರುವುದರ ಅರ್ಥವಾದರೂ ಏನು?

ಇಡೀ ರಾಜ್ಯ ಹಾಗೂ ದೇಶ ಭ್ರಷ್ಟಾಚಾರದ ವಿರುದ್ಧ ಇಂದು ಮಾತನಾಡುತ್ತಿದೆ. ಇದೇ ಬಿಜೆಪಿ ಸರ್ಕಾರದಡಿ ಭ್ರಷ್ಟಾಚಾರದಲ್ಲಿ ಕರ್ನಾಟಕ ನಂ.1 ಎಂಬ ಪಟ್ಟವನ್ನು ಗಿಟ್ಟಿಸಿದೆ. ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಹಾಗೂ ಸಂಪುಟದ ಸಚಿವರು, ಬಿಜೆಪಿ ನಾಯಕರು, ಅಧಿಕಾರಿಗಳು, ಉದ್ಯಮಿಗಳು ನಡೆಸಿದ ಅಗಾಧ ಅಕ್ರಮಗಳು ಭ್ರಷ್ಟಾಚಾರ, ಹಗರಣಗಳು ಹೊರಬಂದಿವೆ. ಮುಖ್ಯಮಂತ್ರಿಯೇ ರಾಜೀನಾಮೆ ಕೊಡಬೇಕಾಗಿ ಬಂದಿದೆ. ಸಂಪುಟದಲ್ಲಿದ್ದವರೂ ಕಾರಾಗೃಹ ಸೇರಿದ್ದಾರೆ. ಹೊಸ ಮುಖ್ಯಮಂತ್ರಿ ಬಂದ ನಂತರ ಏನು ಮಾಡಲಿದೆಯೆಂದು ಜನತೆ ಕಾತುರದಿಂದ ನೋಡುತ್ತಿದ್ದಾರೆ. ಹೀಗಿರುವಾಗ ಮುಖ್ಯಮಂತ್ರಿ ಸದಾನಂದಗೌಡರ ಭಾಷಣದಲ್ಲಿ ಅಪ್ಪಿ ತಪ್ಪಿಯೂ ಭ್ರಷ್ಟಾಚಾರದ ಬಗ್ಗೆ ಒಂದೇ ಒಂದು ಶಬ್ದವೂ ಬಾರದಿರುವುದು ಆಶ್ಚರ್ಯಕರ. ಅಂದರೆ ಭ್ರಷ್ಟಾಚಾರವನ್ನು ಮಟ್ಟಹಾಕುವುದಿಲ್ಲ. ಕನಿಷ್ಠ ಕ್ರಮಗಳನ್ನು ಕೈಗೊಳ್ಳುವುದಿಲ್ಲ. ಭ್ರಷ್ಟರನ್ನು ರಕ್ಷಿಸುವುದಾಗಿ ಹೇಳಿದಂತಲ್ಲವೇ? ಸಿ.ಎಂ.ರವರು ಭ್ರಷ್ಟಾಚಾರದ ವಿರುದ್ಧ ಒಂದು ಗಟ್ಟಿ ದನಿಯಲ್ಲಿ ಮಾತನಾಡಿದ್ದರೆ ಕನಿಷ್ಠ ಎಚ್ಚರಿಕೆಯ ಸಂದೇಶವಾದರೂ ರವಾನೆಯಾಗುತ್ತಿತ್ತು.

ಸದಾನಂದಗೌಡರು ಮುಖ್ಯಮಂತ್ರಿಯಾದಾಗಿನಿಂದ, ಸಂಪುಟ ರಚನೆ ವಿಸ್ತರಣೆಯಲ್ಲಿಯೂ ಸ್ವಾತಂತ್ರ್ಯ ದಿನದಂದೂ ಅವರು ನೀಡಿರುವ ಸಂದೇಶ ಜನರ ಬಗ್ಗೆ ನಿಷ್ಕಾಳಜಿ ಭ್ರಷ್ಟರ ರಕ್ಷಣೆ, ಅದಕ್ಕಾಗಿಯೇ ಈ ಸರ್ಕಾರ ಎಂಬುದೇ ಆಗಿದೆ. ಇದು ಹಿಂದಿನ ಯಡಿಯೂರಪ್ಪನವರ ಸರ್ಕಾರದ ಪಡಿಯಚ್ಚು. ಇಂತಹವರು ಸ್ವಾತಂತ್ರ್ಯ ಪ್ರಜಾಪ್ರಭುತ್ವವನ್ನು ರಕ್ಷಿಸಿಯಾರೇ?

ಏನಿದ್ದರೂ ಗೌಡರು ಸೂಪರ್ ಸಿ.ಎಂ. ಯಡಿಯೂರಪ್ಪನವರ ಕೃಪೆಯಿಂದ ನೇಮಕಗೊಂಡವರು. ಕಳೆದ ಮೂರು ವರ್ಷಗಳಲ್ಲಿ ಅಪಾರವಾಗಿ ಲೂಟಿ ಮಾಡಿಯಾಯ್ತು. ಹಂಚಿಕೊಂಡದ್ದು ಆಯ್ತು. ಇನ್ನುಳಿದ 22 ತಿಂಗಳಲ್ಲಿ ಸಾಧ್ಯವಾದಷ್ಟು ಲೂಟಿ ಮಾಡುವುದೇ ಧ್ಯೇಯ. ಮುಖ್ಯವಾಗಿ ಹಳೆಯ ಹಗರಣ ಅಕ್ರಮಗಳನ್ನು ಮುಚ್ಚಿಹಾಕಿಕೊಳ್ಳುವ ಕಸರತ್ತು. ಇದು ಯಡಿಯೂರಪ್ಪ, ಬಿಜೆಪಿ ಹೈಕಮಾಂಡ್, ಆರ್.ಎಸ್.ಎಸ್. ಹೊಸ ಸಿ.ಎಂ. ಗೆ ಕೊಟ್ಟಿರುವ ಹುಕುಂ. ಈ ಕರ್ತವ್ಯ ಪಾಲಿಸುವುದಷ್ಟೇ ಈ 'ಸ್ವಯಂಸೇವಕ'ನ ಕೆಲಸ.

ಅಂದರೆ ಇಂತಹವರಿಂದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ರಕ್ಷಿಸಿಕೊಳ್ಳುವ ಎರಡನೇ ಸ್ವಾತಂತ್ರ್ಯ ಸಂಗ್ರಾಮ ನಡೆಸುವುದು ಜನತೆಯ ಮೇಲಿನ 'ಹೊಣೆ'. ಆ ದಿಶೆಯಲ್ಲಿ ಜನಾಂದೋಲನಗಳು ಮೂಡಿ ಬರಲಿ.

ಧಾಳಿಗೆ ತುತ್ತಾಗಿರುವ ಪಶ್ಚಿಮ ಬಂಗಾಳ ಜನತೆಯ ಸಹಾಯಕ್ಕೆ ಧಾವಿಸಿ

ದೇಶದ ಎಡ ಚಳುವಳಿಯ ಮುಂಚೂಣಿಯಲ್ಲಿರುವ ಪಶ್ಚಿಮ ಬಂಗಾಳದ ಹೋರಾಟಕಾರಿ ಜನತೆ ಇಂದು ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಚುನಾವಣೆ ಪಲಿತಾಂಶ ಘೋಷಿತವಾದ ದಿನದಿಂದ ಇಲ್ಲಿಯವರೆಗೆ 30ಕ್ಕೂ ಹೆಚ್ಚು ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಕಾರ್ಯಕರ್ತರು ಅಮಾನುಷವಾಗಿ ಕೊಲ್ಲಲ್ಪಟ್ಟಿದ್ದಾರೆ. ನೂರಾರು ಜನರು ಗಾಯಗೊಂಡಿದ್ದಾರೆ. ಸಾವಿರಾರು ಜನರು ಮನೆಯನ್ನು ತೊರೆದಿದ್ದಾರೆ.

ಹಿಂದಿನ ಭೂಮಾಲಿಕರು, ಇಂದಿನ ತೃಣಮೂಲ-ಕಾಂಗ್ರೆಸ್‌ಕೂಟದ ಸರಕಾರದ ಪೋಲಿಸರ ಬೆಂಬಲದಿಂದ ಗೇಣಿದಾರರಿಗೆ ನೀಡಿದ್ದ ಭೂಮಿಯನ್ನು ವಾಪಸ್ಸು ಪಡೆಯಲು ಗೂಂಡಾ ದಾಳಿ ನಡೆಸುತ್ತಿದ್ದಾರೆ. ಬೆಳೆಗಳನ್ನು ನಾಶಮಾಡುತ್ತಿದ್ದಾರೆ.

ಅಲ್ಲಿನ ಎಡ, ಪ್ರಜಾಪ್ರಭುತ್ವವಾದಿ ಜನತೆ ಸುಮ್ಮನೆ ಕೂತಿಲ್ಲ. ತೀವ್ರ ಪ್ರತಿಭಟನೆಯನ್ನು ನಡೆಸುತ್ತಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಾವನ್ನಪ್ಪಿದ ಕುಟುಂಬಗಳಿಗೆ, ಗಾಯಾಳುಗಳಿಗೆ, ಸಂತ್ರಸ್ಥರಿಗೆ ಸಹಾಯ ನೀಡಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ಮನವಿ ಮಾಡಿದೆ. ಇದಕ್ಕೆ ಅನುಗುಣವಾಗಿ ಈವರೆಗೆ ಈ ಕೆಳಗಿನಂತೆ ಸಹಾಯ ಧನ ರಾಜ್ಯ ಸಮಿತಿ ಕಛೇರಿಗೆ ಬಂದಿದೆ.

1. 21.06.2011ರ ರಾಜ್ಯ ಸಮಿತಿಯಲ್ಲಿ ಸಂಗ್ರಹ.	ರೂ.	3240-00
2. ಪಕ್ಷದ ಮಹಿಳಾ ಸಂಗಾತಿಗಳ ರಾಜ್ಯ ಕಾರ್ಯಾಗಾರದಲ್ಲಿ ಸಂಗ್ರಹ	ರೂ.	1531-00
3. ಬೆಂಗಳೂರು ಜಿಲ್ಲಾ ಸಮಿತಿ	ರೂ.	5905-00
4. ಬೆಂಗಳೂರು ಜಿಲ್ಲಾ ಸಮಿತಿ (ರಾಜಾಜಿನಗರ ವಲಯ ಸಮಿತಿ)	ರೂ.	700-00
5. ಐ.ಟಿ. ಸ್ಥಳೀಯ ಸಮಿತಿ	ರೂ.	4000-00
6. ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ	ರೂ.	5422-00
7. ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ	ರೂ.	630-00
8. ದ.ಕ ಜಿಲ್ಲಾ ಸಮಿತಿ	ರೂ	6900-00
9. ಬಳ್ಳಾರಿ ಜಿಲ್ಲಾ ಸಮಿತಿ	ರೂ.	2190-00
10. ಉತ್ತರ ಕನ್ನಡ ಜಿಲ್ಲಾ ಸಮಿತಿ	ರೂ.	900-00
11. ರಾಜ್ಯ ಬ್ಯಾಂಕ್ ಫ್ರಾಕ್ಷನ್ ಸಮಿತಿ	ರೂ.	2350-00
12. ರಾಜ್ಯ ವಕೀಲರ ಫ್ರಾಕ್ಷನ್ ಸಮಿತಿ	ರೂ.	4000-00
ಒಟ್ಟು	ರೂ.	37,768-00

ಪಶ್ಚಿಮ ಬಂಗಾಳದ ಪಕ್ಷದ ಕಾರ್ಯದರ್ಶಿಯವರಿಗೆ ರೂ. 37,768-00 ರೂ.ಗಳ ಡಿ.ಡಿಯನ್ನು ರಾಜ್ಯದ ಕಾರ್ಯದರ್ಶಿ ವಿ.ಜೆ.ಕೆ ನಾಯರ್‌ರವರು 06-08-2011ರಂದು ಕಲ್ಕತ್ತಾದಲ್ಲಿ ನಡೆದ ಕೇಂದ್ರ ಸಮಿತಿ ಸಭೆಯಲ್ಲಿ ನೀಡಿದ್ದಾರೆ.

ಸಮಿತಿಗಳು ಮತ್ತು ಸಂಗಾತಿಗಳು ಉದಾರವಾಗಿ ಧನ ಸಹಾಯ ನೀಡುವುದನ್ನು ಮುಂದುವರಿಸಬೇಕೆಂದು ಸಿಪಿಐ(ಎಂ)ಮನವಿ ಮಾಡುತ್ತದೆ.

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಶಿಕ್ಷಣದ ವಾಣಿಜ್ಯೀಕರಣದ ಲಾಬಿ – ಮೀಸಲಾತಿಯನ್ನು ಬಳಸಿಕೊಳ್ಳುವ ಪರಿ–ಆರಕ್ಷಣ್


ಪಂಜಾಬ್, ಉತ್ತರ ಪ್ರದೇಶ, ಆಂಧ್ರ ಪ್ರದೇಶಗಳಲ್ಲಿ ನಿಷೇಧಕ್ಕೆ ಒಳಗಾಗಿ, ರಾಷ್ಟ್ರಾದ್ಯಂತ ಚರ್ಚೆಗೆ, ಪ್ರತಿಭಟನೆಗಳಿಗೆ ಕಾರಣವಾಗಿರುವ **'ಆರಕ್ಷಣ್'** ಶಿಕ್ಷಣದ ವಾಣೀಜ್ಯಕರಣದ ಲಾಬಿಯ ಒಂದು ಮುಖವನ್ನು ತೆರೆದಿಟ್ಟಿದೆ. ಸಿನಿಮಾದಲ್ಲಿ ಮೀಸಲಾತಿಯು ಪ್ರತಿಭೆಗೆ ಅಡ್ಡಿ ಎಂಬ ಮಾತನ್ನು ನಿರ್ದೇಶಕ ಪ್ರಕಾಶ್ ಜಾ ಸೂಪರ್‌ಸ್ಟಾರ್ ಅಮಿತಾಬ್ ಬಚ್ಚನ್(ಪ್ರಭಾಕರ್ ಆನಂದ) ಮೂಲಕ ಹೇಳಿಸುವ ಮೂಲಕ ಮೀಸಲಾತಿ ವಿರೋಧಿ ಮನೋಭಾವ ರೂಪಿಸಲು ಯತ್ನಿಸಿದ್ದಾರೆ ಎಂಬುದು ಪ್ರತಿಭಟನಾಕಾರರ ಆರೋಪ. ಪ್ರತಿಭಟನೆಗಳ ಫಲವಾಗಿ ಆ ಒಂದು ಆಕ್ಷೇಪಿತ ವಾಕ್ಯವನ್ನು ತೆಗೆದುಹಾಕಲಾಗಿದೆ ಎಂಬುದು ಪ್ರತಿಭಟನಾಕಾರರ ಸಮಾಧಾನದ ಮಾತು. ಆದರೆ ಉತ್ತರಪ್ರದೇಶ, ಆಂಧ್ರಪ್ರದೇಶ, ಮತ್ತು ಪಂಜಾಬ್‌ನಲ್ಲಿ ಚಿತ್ರ ಪ್ರದರ್ಶನದ ಮೇಲೆ ಹೇರಿರುವ ನಿಷೇಧ ಕುರಿತು ನಿರ್ದೇಶಕರ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಉಳಿದಿದೆ.

ಅದೇ ವೇಳೆ ಟಿ.ವಿ. ವಾಹಿನಿಯಲ್ಲಿ ಈ ಕುರಿತು ಚರ್ಚೆಗಳಲ್ಲಿ ನಿರ್ದೇಶಕರು, ನಟರು, ಮತ್ತೆ ಅದಕ್ಕೆ ಸಂಬಂಧಿತ ಇತರರ ಜಾತಿ ಮೂಲವನ್ನೆಲ್ಲ ಹುಡುಕಿ, ಸಿನಿಮಾವನ್ನು ಮೀಸಲಾತಿ ವಿರೋಧಿ, ದಲಿತ, ಹಿಂದುಳಿದವರ ವಿರೋಧಿ ಎಂದು ಜರಿಯಲು ಸಹಾ ಯತ್ನಗಳು ನಡೆದಿವೆ. ಆದರೆ ಸಿನಿಮಾವನ್ನು ಯಾವುದೇ ಪೂರ್ವಾಗ್ರಹ ಇಲ್ಲದೆ ನೋಡಿದಲ್ಲಿ, ಸಿನಿಮಾದಿಂದ ಹೊರಹೊಮ್ಮುವ ಸಂದೇಶವೇ ಬೇರೆ.

32 ವರ್ಷಗಳ ಕಾಲ ಸೈದ್ಧಾಂತಿಕವಾಗಿ ಪ್ರಾಮಾಣಿಕತೆಯಿಂದ ಜಾತ್ಯಾತೀತ ಮನೋಭಾವನೆಯೊಂದಿಗೆ ಶಿಕ್ಷಕ ವೃತ್ತಿ ನಡೆಸಿಕೊಂಡು ಬರುವ ಸಿನಿಮಾದ ನಾಯಕ, ಖಾಸಗಿ ಮಹಾವಿದ್ಯಾಲಯದ ಪ್ರಾಂಶುಪಾಲ(ಅಮಿತಾಬ್‌ಬಚ್ಚನ್)ತನ್ನ ಪಾಠ ಮಾಡುವ ಕಲೆ, ತಿಳುವಳಿಕೆ, ಶಿಕ್ಷಕ ವೃತ್ತಿಗೆ–ಶಿಸ್ತಿಗೆ ಬದ್ಧತೆ, ಅವಕಾಶ ವಂಚಿತ ವಿಭಾಗಗಳಿಗೆ(ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ) ವಿಶೇಷ ಕಾಳಜಿಯಿಂದಾಗಿ ಹೆಸರುವಾಸಿ ಆಗಿರುತ್ತಾರೆ. ಅದೇ ಅವರು ಪ್ರಾಂಶುಪಾಲರಾಗಿರುವ ಸಂಸ್ಥೆಯನ್ನು ಉನ್ನತ ಹಂತಕ್ಕೆ ತೆಗೆದುಕೊಂಡು ಹೋಗಿರುತ್ತದೆ. ಸಂಸ್ಥೆಯಲ್ಲಿನ ಸೀಟಿಗಾಗಿ ಯಾರ ಶಿಫಾರಸ್ಸು ಕೆಲಸಕ್ಕೆ ಬಾರದು ಎಂಬ ಪರಿಸ್ಥಿತಿ ಇರುತ್ತದೆ.

ಇದೇ ವೇಳೆಗೆ ತನ್ನ ತಂಗಿ ಮಗನಿಗೆ ಅಂಕ ಕಡಿಮೆ ಇದ್ದರೂ ಅದೇ ಕಾಲೇಜಿನಲ್ಲಿ ಸೀಟುಬೇಕೆಂದು ಪಟ್ಟು ಹಿಡಿಯುವ ಶಿಕ್ಷಣ ಮಂತ್ರಿ ಅಂಕಗಳ ಕೊರತೆ ಬರಿಸಲು ಡೊನೇಷನ್ ಪರಿಹಾರ ಸೂಚಿಸುತ್ತಾರೆ. ಅದಕ್ಕೆ ಆಸ್ಪದ ಇಲ್ಲ ಎಂದಾದಾಗ ಆಡಳಿತ ಮಂಡಳಿಯಲ್ಲಿನ ನವ ಉದಾರವಾದಿ ನೀತಿಗಳ ಪರವಾದ ಆಡಳಿತ ಮಂಡಳಿಯ ನಿರ್ದೇಶಕರನ್ನು ಬಳಸಿ, ಯಾವುದೇ ಮೌಲ್ಯಗಳಿರದೇ ಹಣವನ್ನು ಪ್ರಧಾನ ಎಂದುಕೊಂಡಿರುವ, ಜಾತಿವಾದಿಯನ್ನು ಉಪ ಪ್ರಾಂಶುಪಾಲರನ್ನಾಗಿಸುತ್ತಾರೆ.

ಅದೇ ವೇಳೆಗೆ ಓಬಿಸಿಗಳಿಗೆ ಉನ್ನತ ಶಿಕ್ಷಣ ಸಂಸ್ಥಗಳಲ್ಲಿಶೇ. 27ರಷ್ಟು ಮೀಸಲಾತಿ ನೀಡುವುದನ್ನು ಸುಪ್ರಿಂ ಕೋರ್ಟ್ ಎತ್ತಿ ಹಿಡಿಯುತ್ತದೆ. ಇದನ್ನೇ ಉಪಪ್ರಾಂಶುಪಾಲ ತನ್ನ ಮೀಸಲಾತಿ ವಿರೋಧಿ ಕುತಂತ್ರಕ್ಕೆ ಬಳಸುತ್ತಾನೆ. ಮೀಸಲಾತಿ ಹೆಚ್ಚಿದಂತೆ ಸಾಮಾನ್ಯ ಕೋಟಾದಡಿ ಸೀಟು ಸೀಮಿತವಾಗಿ, ಸೀಟಿಗಾಗಿ ಕೇಳಿದಷ್ಟು ಹಣ ಕೊಡುವ ಜನರನ್ನು ಬಳಸಿ, ಖಾಸಗಿ ಸಂಸ್ಥೆಗಳು, ಕೋಚಿಂಗ್ ಕ್ಲಾಸ್‌ಗಳ ಮೂಲಕ



ಹಣ ಮಾಡಬಹುದೆಂಬ ಆಶಯಕ್ಕೆ ಬಲೆ ಎಸೆಯುತ್ತಾನೆ.

ಮೀಸಲಾತಿ ವಿರೋಧಿಸಿ ವಾಗ್ವಾದಕ್ಕೆ ಇಳಿಯುವ ಮೇಲ್ಜಾತಿಯ ಸಂಸ್ಥೆಯ ನಿರ್ದೇಶಕನ ಮಗ ಕಾಲೇಜಿನಿಂದ ಅಮಾನತ್ತಾಗುತ್ತಾನೆ. ಪ್ರಾಂಶುಪಾಲರ ನೆಚ್ಚಿನ ದಲಿತ ವಿದ್ಯಾರ್ಥಿ, ನಂತರ ಅದೇ ಕಾಲೇಜಿನ ಉಪನ್ಯಾಸಕ, ಮಗಳ ಸ್ನೇಹಿತ ಮೀಸಲಾತಿ ಪರ ಭಾವಾವೇಶದಲ್ಲಿ ಪ್ರಾಂಶುಪಾಲರು ಜಾತಿವಾದಿ ಎಂಬ ಭಾವನೆ ಮೂಡುವಂತೆ ಮಾತನಾಡುತ್ತಾನೆ. ಮೇಲ್ಜಾತಿಯ ಉಪಪ್ರಾಂಶುಪಾಲ ಹೊರಗೆ ಖಾಸಗಿ ಕೋಚಿಂಗ್ ನಡೆಸಿದರೂ ಶಿಸ್ತು ಕ್ರಮ ವಹಿಸದೇ ದಲಿತನಾದ ತನಗೆ ಮಾತ್ರ ಶಿಸ್ತಿನ ಪಾಠ ಹೇಳುತ್ತೀರಾ ಎಂದು ಪ್ರಶ್ನಿಸುತ್ತಾನೆ. ಶಿಕ್ಷಕನಿಗೆ ಭಾವಾವೇಶ ಒಳಿತಲ್ಲ. ಎಲ್ಲಾ ಜಾತಿಗಳನ್ನು ಮೀರಿ ನಿಲ್ಲಬೇಕು ಎಂದು ಪ್ರಾಂಶುಪಾಲ ಹೇಳುತ್ತಾನೆ(ಇದೇ ವೇಳೆ ಮೀಸಲಾತಿಯಿಂದ ಪ್ರತಿಭೆಗೆ ಧಕ್ಕೆ ಎಂಬ ಪ್ರಾಂಶುಪಾಲನ ಡೈಲಾಗ್ ಇತ್ತು, ಕಡಿತ ಮಾಡಲಾಗಿದೆ ಎಂಬ ಆರೋಪವಿರುವುದು). ಅದರಿಂದಾಗಿ ನೆಚ್ಚಿನ ಶಿಷ್ಯ, ಉಪನ್ಯಾಸಕರ ಸಂಸ್ಥೆ ತ್ಯಜಿಸಿ, ಅಮೇರಿಕಾಗೆ ಪಿಹೆಚ್‌ಡಿ ಮಾಡಲು ಹೊರಡುತ್ತಾನೆ. ಮೇಲ್ಜಾತಿಯ ಸ್ನೇಹಿತ, ಪ್ರಾಂಶುಪಾಲರ ಮಗಳು, ದಲಿತ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿ ಉಪನ್ಯಾಸಕನ ಸ್ನೇಹ ಮುರಿದು ಬೀಳುತ್ತದೆ.



ಉಪಪ್ರಾಂಶುಪಾಲನ ಖಾಸಗಿ ಕೋಚಿಂಗ್ ಪತ್ತೆ ಮಾಡುವ ಪ್ರಾಂಶುಪಾಲ ಆತನಿಗೆ ಕಾರಣ ಕೇಳಿ ನೋಟಿಸನ್ನು ನೀಡುತ್ತಾನೆ. ಇದನ್ನೇ ಗಂಭೀರವಾಗಿ ಪರಿಗಣಿಸುವ ಮೇಲ್ಜಾತಿ ವಾಣಿಜ್ಯೀಕರಣ ಪರ ಶಕ್ತಿಗಳು ಬಲೆ ಎಸೆದು ಸುಪ್ರಿಂಕೋರ್ಟ್ ತೀರ್ಪನ್ನು ಸ್ವಾಗತಿಸುವ ಪ್ರಾಂಶುಪಾಲರನ್ನು ಖಾಸಗಿ ಸಂಸ್ಥೆಗಳಲ್ಲೂ ಮೀಸಲಾತಿ ಕೇಳುತ್ತಿದ್ದಾರೆ ಎಂದು ಬಿಂಬಿಸಿ ಆತನ ತಪ್ಪೊಪ್ಪಿಗೆ ಕೇಳುತ್ತಾರೆ. ಅದಕ್ಕೆ ಒಪ್ಪದ ಪ್ರಾಂಶುಪಾಲ ರಾಜಿನಾಮೆ ನೀಡುತ್ತಾನೆ.

ಸ್ನೇಹಿತನಿಗೆ ಸಹಾಯ ಮಾಡಲು ನೀಡಿದ್ದ ತನ್ನ ಸ್ವಂತ ಮನೆಯನ್ನು ಕೋಚಿಂಗ್ ಕ್ಲಾಸ್‌ಗೆ ನೀಡಿದ್ದ ಕಾರಣ ಅದನ್ನು ವಾಪಸು ಪಡೆಯಲಾಗದೇ ಕೊನೆಗೆ ಹಾಲು ಹಾಕುತ್ತಿದ್ದವನ ದನದ ದೊಡ್ಡಿಯಲ್ಲಿ ವಾಸ್ತವ್ಯ ಹೂಡುತ್ತಾನೆ. ಅಲ್ಲಿನ ಬಡಮಕ್ಕಳಿಗೆ ಉಚಿತ ಗಣಿತ ಪಾಠ ಮಾಡುತ್ತಾನೆ. ಪ್ರಾಮಾಣಿಕತೆ ವಿಚಾರವಾಗಿ ತನ್ನಿಂದ ದೂರಸರಿದಿದ್ದ ತನ್ನ ಎಲ್ಲಾ ಜಾತಿಯ ಶಿಷ್ಯರು ತನ್ನೆಡೆ ಸೆಳೆದುಕೊಳ್ಳುತ್ತಾನೆ. ವ್ಯಾಪಾರೀಕೃತ ಶಿಕ್ಷಣದ ಮುಂದೆ ಬದ್ಧತೆಯ ಪ್ರಾಮಾಣಿಕ ಪಾಠ ಫಲ ನೀಡುವಂತೆ ಸಾಮೂಹಿಕ ಉಚಿತ ಪಾಠದ ಮೂಲಕ ನಡೆಸುತ್ತಾರೆ. ವಾಣಿಜ್ಯೀಕೃತ ಕೋಚಿಂಗ್, ಶಿಕ್ಷಣದ ದಂಧೆ, ಲಾಬಿಗೆ ಸವಾಲಾಗುತ್ತಾರೆ.

ಇದನ್ನು ಮಟ್ಟಹಾಕಲು ಶಿಕ್ಷಣದಲ್ಲಿ ಸಾವಿರಾರು ಕೋಟಿ ಬಂಡವಾಳ ಹೂಡಿದವರೆಲ್ಲಾ ಒಂದಾಗಿ, ಕಾನೂನು, ಪೋಲಿಸ್, ಆಡಳಿತ ಎಲ್ಲವನ್ನು ಬಳಸಿ ಉಚಿತ ಪಾಠ ನಡೆಯುವ ದೊಡ್ಡಿಯನ್ನು ಅಕ್ರಮ ಎಂದು ತೆರವುಗೊಳಿಸಲು ಬಂದಾಗ ಇಡೀ ಜನ ಒಂದಾಗಿ ನಿಲ್ಲುತ್ತಾರೆ. ಜಾತಿ, ಮತ, ಅಂತಸ್ತು ಎಲ್ಲವನ್ನು ಮೆಟ್ಟಿ ನಿಲ್ಲುತ್ತಾರೆ. ಶಿಕ್ಷಣದ ವಾಣಿಜ್ಯೀಕರಣದ ವಿರುದ್ಧ ನಿಲ್ಲುತ್ತಾರೆ. ದೊಡ್ಡಿಯನ್ನು ತೆರವುಗೊಳಿಸಲು ತಂದಿದ್ದ ಜೆಸಿಬಿಗಳ ಚಾಲಕರು ಸಹಾ ದೊಡ್ಡಿಯ ಪರವಾಗಿ ನಿಲ್ಲುತ್ತಾರೆ. ಅಂತಿಮವಾಗಿ ಜಯ ತಾತ್ವಿಕತೆ– ಪ್ರಾಮಾಣಿಕತೆಗೆ ಸಲ್ಲುತ್ತದೆ. ಮೀಸಲಾತಿಯನ್ನು ತನ್ನ ಹಿತಸಾಧನೆಗೆ ಬಳಸಲು ಮುಂದಾಗುವ ಶಿಕ್ಷಣದ ವಾಣಿಜ್ಯೀಕರಣದ ಲಾಭಿ ಸೋಲುಣ್ಣುತ್ತದೆ. ಸನ್ಯಾಸ ಸ್ವೀಕರಿಸಿ ದಶಕಗಳ ಹಿಂದೆ ನೇಪಥ್ಯಕ್ಕೆ ಸರಿದಿದ್ದ ಖಾಸಗಿ ಮಹಾವಿದ್ಯಾಲಯದ ಸಂಸ್ಥಾಪಕಿ ಕೊನೆಯಲ್ಲಿ ಬಂದು ಪ್ರಾಂಶಪಾಲರನ್ನು ಪ್ರಶಂಸಿಸುತ್ತಾಳೆ. ವಾಣಿಜ್ಯೀಕರಣವನ್ನು ತಿರಸ್ಕರಿಸಿ ತನ್ನ ಸಂಸ್ಥೆಯಲ್ಲೆ ಪರಿಹಾರ ಕೇಂದ್ರ ಸ್ಥಾಪಿಸಿ, ವಂಚಿತ ವಿಭಾಗದ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ಕೇಂದ್ರ ತೆರೆಯುತ್ತಾಳೆ ಅದಕ್ಕೆ ನಾಯಕ ಪ್ರಾಂಶುಪಾಲನನ್ನು ಅಜೀವ ನಿರ್ದೇಶಕನನ್ನಾಗಿ ನೇಮಿಸುತ್ತಾಳೆ.

ಸಿನಿಮಾದ ಉದ್ದಗಲಕ್ಕೂ ಶಿಕ್ಷಣ ಹೇಗೆ ಉಳ್ಳವರ, ಮೇಲ್ಜಾತಿಯ ಪುರೋಹಿತಶಾಹಿಯ ಸ್ವತ್ತಾಗಿತ್ತು .ಮಾತ್ರವಲ್ಲದೆ ಈಗಲೂ ಹಾಗೆ ಇದೆ ಎಂಬುದನ್ನು ಸೂಕ್ಷ್ಮವಾಗಿ ಹೇಳುತ್ತಾ ಹೋಗುವ ಆರಕ್ಷಣ್; ಅಂತರಾಳದಲ್ಲಿ ಮೀಸಲಾತಿಯ ಪರವಾಗಿದೆ. ಶಿಕ್ಷಣದ ವಾಣಿಜ್ಯೀಕರಣದ ಕರಾಳತೆಯನ್ನು ತೆರೆದಿಡುತ್ತದೆ. ಹೇಗೆ ವಾಣಿಜ್ಯೀಕರಣದ ಲಾಭಿ ಮೀಸಲಾತಿಯನ್ನು ಬಳಸಿಕೊಳ್ಳುತ್ತದೆ ಎಂಬುದನ್ನು ತೋರಲು ಯತ್ನಿಸಿದೆ ಆರಕ್ಷಣ್ ಸಿನಿಮಾ.

◎

JANASHAKTHI KANNADA VARA PATRIKE: Printed by **G.N.NAGARAJ**, No 12. 18th Cross, S.R.Nagar, BANGALORE-560027
Published by: **G.N.NAGARAJ**, No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and Printed at : **Kriya Prakashana**, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor **S.Y.GURURSHANTH**, No12. 18th Cross, S.R.Nagar, BANGALORE - 560027
Editor **S.Y.GURUSHANTH**